ಸಂಯುಕ್ತ ರಾಷ್ಟ್ರಗಳ
ಆಹಾರ ಮತ್ತು ವ್ಯವಸಾಯ ಸಂಸ್ಥೆ

# ಆಹಾರ ಭದ್ರತೆ ಹಾಗೂ ಬಡತನದ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿ

## ಸ್ವಯಂಪ್ರೇರಿತ ಮಾರ್ಗದರ್ಶಿಕೆಗಳು

(Voluntary Guidelines for Securing Sustainable Small-Scale Fisheries in the Context of Food Security and Poverty Eradication - in Kannada)



Published by arrangement with the Food and Agriculture Organization of the United Nations (FAO) by the International Collective in Support of Fishworkers (ICSF)

# ಆಹಾರ ಭದ್ರತೆ ಹಾಗೂ ಬಡತನದ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿ

## ಸ್ವಯಂಪ್ರೇರಿತ ಮಾರ್ಗದರ್ಶಿಕೆಗಳು


ಸಂಯುಕ್ತ ರಾಷ್ಟ್ರಗಳ ಆಹಾರ ಮತ್ತು ವ್ಯವಸಾಯ ಸಂಸ್ಥೆ
ರೋಮ್, ೨೦೧೫

ನೇಮಿಸಲ್ಪಟ್ಟ ಪದಾಧಿಕಾರಗಳು ಮತ್ತು ಈ ಮಾಹಿತಿ ಉತ್ಪಾದನೆಯಲ್ಲಿ ಪ್ರಸ್ತುತ ಪಡಿಸಿರುವ ವಿಷಯಗಳು ಸಂಯಕ್ತರಾಷ್ಟ್ರಗಳ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಅಭಿಪ್ರಾಯಗಳ ಅಭಿವ್ಯಕ್ತಿಯಾಗಿರುವುದಿಲ್ಲ. ಅದು ಕಾನೂನು ಅಥವಾ ಯಾವುದೇ ದೇಶದ ಅಭಿವೃದ್ಧಿ ಸ್ಥಾನ–ಮಾನ ಕುರಿತದ್ದಾಗಿರಬಹುದು, ಪ್ರಾಂತ್ಯ, ಪಟ್ಟಣ ಅಥವಾ ಪ್ರದೇಶ ಅಥವಾ ಅದರ ಪ್ರಭುತ್ವ, ಮಿತಿಯಿರದ ಅದರ ಸರಹದ್ದು ಅಥವಾ ಗಡಿಗಳಾಗಿರಬಹುದು. ನಿರ್ಧಿಷ್ಟ ಕಂಪನಿಗಳ ಹೆಸರು ಅಥವಾ ವಸ್ತುಗಳ ಉತ್ಪಾದಕರು ಅವು ಪೇಟೆಂಟ್ ಆಗಿರಬಹುದು, ಇಲ್ಲದಿರಬಹುದು, ಅವುಗಳ ಹೆಸರನ್ನು ಹೆಸರಿಸಿದೆ ಎಂದ ಮಾತ್ರಕ್ಕೆ ಅವುಗಳನ್ನು ಆಹಾರ ಮತ್ತು ವ್ಯವಸಾಯ ಸಂಸ್ಥೆ ಒಪ್ಪಿದೆ ಎಂದಾಗಲೀ, ಅವುಗಳನ್ನು ಶಿಫಾರಸ್ಸು ಮಾಡಿದೆ ಎಂದಾಗಲೀ ಅಲ್ಲ. ಹೆಸರಿಸಿರದ ಅದೇ ರೀತಿಯ ಕಂಪನಿಗಳಿಗಿಂತ ಉತ್ತಮ ಎಂದು ಅರ್ಥವಲ್ಲ.

ಈ ಮಾಹಿತಿ ಉತ್ಪಾದನೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಇಲ್ಲಿಯ ಲೇಖಕರ ಅಭಿಪ್ರಾಯಗಳು ಆಗಿರುತ್ತವೆಯೇ ಹೊರತು ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಅಭಿಪ್ರಾಯವಾಗಲೀ, ಯೋಜನೆಯಾಗಲೀ ಆಗಿರುವುದಿಲ್ಲ.

ISBN: 978 93 80802 63 3

ಆಹಾರ ಮತ್ತು ಭದ್ರತೆ ಸಂಸ್ಥೆಯು ಇಲ್ಲಿಯ ಮಾಹಿತಿ ವಿಷಯಗಳನ್ನು ಬಳಸುವ, ಮರು ಉತ್ಪಾದಿಸುವ, ಹಾಗೂ ಎಲ್ಲೆಡೆ ಹರಡುವುದನ್ನು ಪ್ರೋತ್ಸಾಹಿಸುತ್ತದೆ. ಬೇರೆ ಸೂಚನೆಯ ಹೊರತಾಗಿ, ಇಲ್ಲಿಯ ವಿಷಯವನ್ನು ಕಾಪಿ ಮಾಡಬಹುದಾಗಿದೆ, ಡೌನ್ ಲೋಡ್ ಮಾಡಬಹುದಾಗಿದೆ, ಖಾಸಗಿ ಓದಿಗೆ, ಸಂಶೋಧನೆಗೆ, ಭೋಧನೆ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದಾಗಿದೆ. ಆದರೆ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಹಕ್ಕು ಹಾಗೂ ಮೂಲ ಎಂಬದನ್ನು ಹೆಸರಿಸಬೇಕು. ಹಾಗೂ ಉಪಯೋಗಿಸುವವರ ಅಭಿಪ್ರಾಯಕ್ಕಾಗಲೀ, ವಿಷಯಕ್ಕಾಗಲೀ, ಅಥವಾ ಸೇವೆಗಾಗಲೀ ಆಹಾರ ಮತ್ತುವ್ಯವಸಾಯ ಸಂಸ್ಥೆ ಹೊಣೆಯಾಗಿರುವುದಿಲ್ಲ.

ಅನುವಾದ, ಅಳವಡಿಸಿಕೊಳ್ಳುವ ಹಕ್ಕಿಗಾಗಿ ಬೇಡಿಕೆಗಳು, ಮರು ಮಾರಾಟ, ಅಥವಾ ಇತರ ವಾಣಿಜ್ಯ ಬಳಕೆಯ ಹಕ್ಕುಗಳಿಗಾಗಿ www.fao.org/contact us/Licence-request, ಅಥವಾ copyright@fao.org. ಅಥವಾ ವಿಳಾಸಕ್ಕೆ ಕಳಹಿಸಬೇಕಾಗುತ್ತದೆ. ಆಹಾರ ಭದ್ರತೆ ಹಾಗೂ ವ್ಯವಸಾಯ ಸಂಸ್ಥೆಯ ವಿಷಯಗಳು FAO website (w.w.w.fao.org/publications) ಲಭ್ಯವಿರುತ್ತವೆ. ಹಾಗೂ ಮುದ್ರಣಾಲಯದ ಮೂಲಕ ಕೊಂಡುಕೊಳ್ಳಬಹುದಾಗಿದೆ publications-sales@fao.org.

ಅನುವಾದ : ಚಂಪಾವತಿ ಹೆಚ್.ಎಸ್

ಇಡೀ ಪ್ರಪಂಚದ ಮೀನುಗಾರಿಕೆಯ ಕೆಲಸಗಾರರ
ಬದುಕು ಹಸನಾಗಿಸಲು ಅವಿರತರಾಗಿ ದುಡಿದ
ಹಾಗೂ ಈ ಮಾರ್ಗದರ್ಶಿಕೆಗಳ  ರೂಪಿಸುವಲ್ಲಿ
ಅಮೂಲ್ಯ ಕೊಡುಗೆ ನೀಡಿದ
ಚಂದ್ರಿಕಾ ಶರ್ಮರವರ ಗೌರವಾರ್ಥವಾಗಿ.

# ಮೊದಲ ಮಾತು

ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನ ಸಂದರ್ಭದಲ್ಲಿ  ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆಯನ್ನು ಪಡೆದುಕೊಳ್ಳವುದಕ್ಕಾಗಿ ರೂಪಿತವಾಗಿರುವ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿತವಾಗಿ ಇಲ್ಲಿಯವರೆಗೆ ನಿರ್ಲಕ್ಷಿಸಲ್ಪಟ್ಟ ,ಆದರೆ ಅತ್ಯಂತ ಮುಖ್ಯವಾದ ಸಣ್ಣ–ಪ್ರಮಾಣದ ಮೀನುಗಾರಿಕೆ ಕ್ಷೇತ್ರಕ್ಕೆ ಸಂಪೂರ್ಣವಾಗಿ ಅರ್ಪಣೆ ಮಾಡಲಾದ ಮೊದಲ ಅಸ್ತ್ರವಾಗಿದೆ.

ಸಣ್ಣ– ಪ್ರಮಾಣದ ಮೀನುಗಾರಿಕೆ ಕ್ಷೇತ್ರ ಸ್ಥಳೀಯ ಸಮುದಾಯಗಳಲ್ಲಿ, ಸಂಪ್ರದಾಯಗಳಲ್ಲಿ ಹಾಗೂ ಅವರ ಮೌಲ್ಯಗಳಲ್ಲಿ ಬಲವಾಗಿ ಬೇರೂರಿರುವುದು ಕಂಡುಬರುತ್ತದೆ. ಇದರಲ್ಲಿರುವ ಬಹುತೇಕ ಜನರು ಸಣ್ಣ–ಪ್ರಮಾಣದ ಮೀನುಗಾರಿಕೆಯಲ್ಲಿ ಸ್ವಯಂನಿರತ ಉದ್ಯೋಗಿಗಳಾಗಿದ್ದು, ಸಾಮಾನ್ಯವಾಗಿ ತಮ್ಮ ಮನೆಗಳಲ್ಲಿಯೇ ಅಥವಾ ತಮ್ಮ ಸಮುದಾಯದಲ್ಲಿಯೇ ಬಳಸುವುದಕ್ಕೆ ನೇರವಾಗಿ ಮೀನು ಮಾರಾಟ ಮಾಡುತ್ತಾರೆ. ಈ ಕ್ಷೇತ್ರದಲ್ಲಿ ಮಹಿಳೆಯರು ಪ್ರಮುಖವಾದ ಪಾತ್ರ ವಹಿಸುತ್ತಾರೆ. ವಿಶೇಷವಾಗಿ ಮೀನು ಹಿಡಿದ (ಸುಗ್ಗಿಯ) ನಂತರ, ಹಾಗೂ ಅದರ ನಂತರದ ಕಾರ್ಯವಿಧಾನದಲ್ಲಿ ಇವರ ಪಾತ್ರ ಗಮನಾರ್ಹ. ಮೀನು ಹಿಡಿಯುವುದನ್ನೇ ಕಸುಬಾಗಿಸಿಕೊಂಡ ಶೇಕಡ ೮೦ ರಷ್ಟು ಜನರು ಸಣ್ಣ– ಪ್ರಮಾಣದ ಮೀನುಗಾರಿಕೆ ಕ್ಷೇತ್ರದಲ್ಲಿಯೇ ದುಡಿಯತ್ತಾ–ರೆಂದು ಅಂದಾಜು ಮಾಡಲಾಗಿದೆ. ಹೀಗೆ ಸಣ್ಣ–ಪ್ರಮಾಣದ ಮೀನುಗಾರಿಕೆ ಆರ್ಥಿಕ ಹಾಗೂ ಸಾಮಾಜಿಕ ಬೋಗಿಯಾಗಿ ಸೇವೆ ಸಲ್ಲಿಸುತ್ತದೆ ಮತ್ತು ರಿಪೇರಿಯನ್ ಸಮುದಾಯದ ಜೀವನ ನಿರ್ವಹಣೆಗೆ ಆಧಾರವಾಗುತ್ತಲೇ, ಆಹಾರ, ಪೌಷ್ಟಿಕ ಭದ್ರತೆ, ಉದ್ಯೋಗ ಹಾಗೂ ಅನೇಕ ತರಹದ ಪ್ರಭಾವಗಳನ್ನು ಸ್ಥಳೀಯ ಸಮುದಾಯಗಳ ಮೇಲೆ ಮಾಡುತ್ತಿರುತ್ತದೆ.

ಸುಸ್ಥಿರಾತ್ಮಕ ಸಣ್ಣ –ಪ್ರಮಾಣದ ಮೀನುಗಾರಿಕೆ  ಪಡೆಯುವಿಕೆಯ ಮಾರ್ಗದರ್ಶಿಕೆಗಳು ಧೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿದ್ದವು, ಏಕೆಂದರೆ ಸಣ್ಣ – ಪ್ರಮಾಣದ ಮೀನುಗಾರಿಕೆಗೆ ಗಮನ ಕೊಡುವಲ್ಲಿ ಸಮ್ಮತಿಯುಳ್ಳ ತತ್ವಗಳ ಹಾಗೂ ಮಾರ್ಗದರ್ಶನವಿರುವ ಒಂದು ಅಂತರರಾಷ್ಟ್ರೀಯ ಅಸ್ತ್ರದ ಅಗತ್ಯವಿತ್ತು.  ಸುಸ್ಥಿರಾತ್ಮಕ ಸಣ್ಣ –ಪ್ರಮಾಣದ ಪಡೆಯುವಿಕೆಯ (ಸು.ಸ. ಮೀ.ಪ.) ಮಾರ್ಗದರ್ಶಿಕೆಗಳು ಜವಾಬ್ಧಾರಿಯುತ ಮೀನುಗಾರಿಕೆಯ ನಿಯಮ ನಡಾವಳಿಗಳನ್ನು ಬಲಪಡಿಸುತ್ತವೆ. ಯು.ಎನ್. ಅಧಿವೇಶನದ ಕರಾರುಗಳು ಗುರುತಿಸಲ್ಪಟ್ಟ ಹಾಗೂ ಜಾರಿಗೊಳಿಸಲ್ಪಟ್ಟ ಸಮುದ್ರದ ಕಾನೂನು ಹಾಗೂ ಮೀನುಗಾರಿಕೆ ಅಂತರರಾಷ್ಟ್ರೀಯ ಮಟ್ಟದ ಒಂದು ಅಸ್ತ್ರವಾಗಿದೆ. ಸು.ಸ.ಮೀ.ಪ. ಮಾರ್ಗದರ್ಶಿಕೆಗಳು ಸ್ವಯಂಪ್ರೇರಿತ ಮಾರ್ಗದರ್ಶಿಕೆಗಳ ಜೊತೆ ಕೊಂಡಿ ಬೆಸೆದುಕೊಂಡಿವೆ. ರಾಷ್ಟ್ರೀಯ ಆಹಾರ ಭದ್ರತೆಯ ಹಂತದಲ್ಲಿ ಅವಶ್ಯಕ ಆಹಾರದ ಹಕ್ಕು, ವ್ಯವಸಾಯ ಹಾಗೂ ಆಹಾರ ಕ್ರಮಗಳಲ್ಲಿ ಜವಾಬ್ಧಾರಿಯುತ ಬಂಡವಾಳ ಹೂಡುವಿಕೆ, ಜವಾಬ್ಧಾರಿಯುತ ಭೂಮಿಯ ಕಾಲಾವಧಿ, ಮೀನುಗಾರಿಕೆ ಹಾಗೂ ಅರಣ್ಯ ಕುರಿತು ಸ್ವಯಂಪ್ರೇರಿತ ಮಾರ್ಗದರ್ಶಿಕೆಗಳು ತಿಳುವಳಿಕೆ ಹಾಗೂ ಬೆಂಬಲವನ್ನು ನೀಡುತ್ತವೆ. ಈ ರೀತಿಯ ಅಸ್ತ್ರಗಳು ಹಾಗೂ ಸು.ಸ. ಮೀ. ಪ. ಮಾರ್ಗದರ್ಶಿಗಳು ಮಾನವ ಹಕ್ಕುಗಳ ಅರಿವಿಗೆ ಹಾಗೂ ನಿರ್ಲಕ್ಷಿಸಲ್ಪಟ್ಟ, ಅಂಚಿಗೆ ತಳ್ಳಲ್ಪಟ್ಟ ಸಮುದಾಯ/ಗುಂಪುಗಳಿಗೆ ಪ್ರಮುಖ ಗಮನ ಕೊಡಬೇಕಾಗಿರುವುದನ್ನು ಆದ್ಯತೆಯಾಗಿ ಪರಿಗಣಿಸಿವೆ.

ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಮೀನುಗಾರಿಕೆ ಸಮಿತಿಯ ೨೯ ಹಾಗೂ ೩೦ನೇ ಅಧಿವೇಶನದ ಶಿಫಾರಸ್ಸುಗಳ ಮೇಲೆ ಆಧರಿಸಿ ತಳದಿಂದ ಭಾಗವಹಿಸುವಿಕೆಯ ಅಭಿವೃದ್ಧಿ ಕಾರ್ಯಾಗಾರದ ಫಲಿತಾಂಶವೇ ಸು.ಸ.ಮೀ.ಪ. ಮಾರ್ಗದರ್ಶಿಕೆಗಳು. ೨೦೧೩ ಹಾಗೂ ೨೦೧೪ರ ಅವಧಿಯಲ್ಲಿ ಆ.ವ್ಯ.ಸ. ಒಂದು ಜಾಗತಿಕ ಕಾರ್ಯಕ್ರಮ ರೂಪಿಸಿತ್ತು. ಇದರಲ್ಲಿ ೪೦೦೦ಕ್ಕಿಂತ ಹೆಚ್ಚು ಸರ್ಕಾರಿ ಪ್ರತಿನಿಧಿಗಳು, ಸಣ್ಣ–ಪ್ರಮಾಣದ ಮೀನುಗಾರರು, ಮೀನುಗಾರಿಕೆಯಲ್ಲಿನ ಕೆಲಸಗಾರರು ಮತ್ತು ಅವರ ಸಂಸ್ಥೆಗಳು, ಸಂಶೋಧಕರು, ಅಭಿವೃದ್ಧಿ ಪಾಲುಗಾರರು, ಮತ್ತು ಇತರ ಸಂಬಂಧಿತ  ಸ್ಟೇಕ್ ಹೋಲ್ಡರ್ಸ್–೬ ಪ್ರಾದೇಶಿಕ ವಲಯಗಳ ೧೨೦ ದೇಶಗಳಿಂದ ಹಾಗೂ ೨೦ಕ್ಕಿಂತ ಹೆಚ್ಚು ನಾಗರಿಕ ಸಮಾಜದ ಸಂಸ್ಥೆಗಳು ಒಟ್ಟು ಸೇರಿ ರಾಷ್ಟ್ರೀಯ ಸಮಾಲೋಚನೆ ನಡೆಸಿದವು. ಈ ಸಮಾಲೋಚನೆಯ ಆಧಾರದ ಮೇಲೆ ಆ.ವ್ಯ.ಸ. ಯಲ್ಲಿ ಒಂದು ತಾಂತ್ರಿಕ ಸಮಾಲೋಚನೆ ಗುಂಪು ಕಾರ್ಯ ಪ್ರಾರಂಭಿಸಿತು. ಇವರು ೨೦೧೩ ಮೇ, ಹಾಗೂ ೨೦೧೪ರಲ್ಲಿ ಅಂತಿಮ ಪಠ್ಯದ ಸಮ್ಮತಿಗಾಗಿ ಭೇಟಿಯಾದರು.  ಜೂನ್ ೨೦೧೪ರಲ್ಲಿ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಮೀನುಗಾರಿಕೆ ಸಮಿತಿಯ ೩೧ನೆಯ ಅಧಿವೇಶನದಲ್ಲಿ ಸು.ಸ.ಮೀ.ಪ. ಮಾರ್ಗದರ್ಶಿಕೆಗಳನ್ನು ಒಪ್ಪಿದ್ದು, ಎತ್ತಿ ಹಿಡಿದದ್ದು ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆಯನ್ನು ಪಡೆದುಕೊಳ್ಳುವಲ್ಲಿ ಮಾಡಿದ ಮಹತ್ತರ ಸಾಧನೆಯನ್ನು ಪ್ರತಿನಿಧಿಸುತ್ತದೆ.

ಆ.ವ್ಯ.ಸ. ಯ ಹೊಸ ಯೋಜನೆಗಳ ಚೌಕಟ್ಟಿನಲ್ಲಿ ತಿಳಿಸಿದಂತೆ ಹಸಿವು ನಿರ್ಮೂಲನ ಹಾಗೂ ಸುಸ್ಥಿರಾತ್ಮಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಸಂಸ್ಥೆಯ ದಾರ್ಶನಿಕತೆಗೆ ಬೆಂಬಲ ನೀಡುವಲ್ಲಿ ಸು.ಸ.ಮೀ.ಪ. ಮಾರ್ಗದರ್ಶಿಕೆಗಳು ಮೂಲಭೂತ ಅಸ್ತ್ರವಾಗಿದೆ. ಇವು ಮಾತುಕತೆಗೆ, ಯೋಜನೆಗಳ ಕಾರ್ಯರೂಪಕ್ಕೆ, ಕ್ರಿಯೆಗಳಿಗೆ ಎಲ್ಲಾ ಹಂತದಲ್ಲೂ ಮಾರ್ಗದರ್ಶನ ನೀಡುತ್ತವೆ. ಮತ್ತು ಆಹಾರ ಭದ್ರತೆಗೆ ಹಾಗೂ ಬಡತನ ನಿರ್ಮೂಲನೆಗೆ ಈ ಸಣ್ಣ–ಪ್ರಮಾಣದ ಮೀನುಗಾರಿಕೆ ಕ್ಷೇತ್ರವು ನೀಡಿದ ಸಂಪೂರ್ಣ ಕೊಡುಗೆಯ ಅರಿವನ್ನು ಈ ಕ್ಷೇತ್ರಕ್ಕೆ ಮೂಡಿಸುವಲ್ಲಿ ಬೆಂಬಲ ನೀಡುತ್ತದೆ. ಈ ಸುಸ್ಥಿರಾತ್ಮಕ ಸಣ್ಣ – ಪ್ರಮಾಣದ ಮೀನುಗಾರರ ಭದ್ರತೆ ಮಾರ್ಗದರ್ಶಿಕೆಗಳನ್ನು ಜಾರಿಗೊಳಿಸುವುದು ಆ.ವ್ಯ.ಸ. ಸದಸ್ಯರಿಗೆ ಹಾಗೂ ಇದರ ಪಾಲುದಾರರಿಗೆ ಈಗಿರುವ ಸವಾಲಾಗಿದೆ.

ಆ.ವ್ಯ.ಸ.ಯು ಸು.ಸ.ಮೀ.ಪ. ಮಾರ್ಗದರ್ಶಿಕೆಗಳ ಜಾರಿಗೊಳಿಸಲು ಬೆಂಬಲವಾಗಿರುವುದಕ್ಕೆ ಬದ್ಧವಾಗಿದೆ. ಮತ್ತು ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ– ಪ್ರಮಾಣದ ಮೀನುಗಾರಿಕೆಗಾಗಿ ನಡೆಯುವ ಹಾದಿಯಲ್ಲಿ ಎಲ್ಲಾ ಭಾಗಿಗಳ ಜೊತೆ  ಅಂದರೆ ಸರ್ಕಾರಗಳು, ಸಣ್ಣ ಪ್ರಮಾಣದ ಮೀನುಗಾರರು, ಮೀನುಗಾರಿಕೆ ಕ್ಷೇತ್ರದ ಕೆಲಸಗಾರರು ಮತ್ತು ಅವರ ಸಂಸ್ಥೆಗಳು, ನಾಗರಿಕ ಸಮಾಜದ ಸಂಸ್ಥೆಗಳು, ಸಂಶೋಧನೆ, ಶೈಕ್ಷಣಿಕ, ಖಾಸಗಿ ಕ್ಷೇತ್ರ ಮತ್ತು ಸಹಾಯ ಹಸ್ತ ನೀಡುವ ಸಮುದಾಯಗಳು ಇವುಗಳ ಜೊತೆ ಸೇರಿ ನಿರಂತರವಾಗಿ ಕೆಲಸ ಮಾಡಲು ಆಶಿಸುತ್ತದೆ.

**ಜೋಸ್ ಗ್ರ್ಯಾಜಿಯಾನೊ ಡಿ ಸಿಲ್ವ**
**ಆ.ವ್ಯ.ಸ. ಡೈರೆಕ್ಟರ್ – ಜನರಲ್**

# ವಿಷಯಗಳ ಪಟ್ಟಿ


ಸಂಕ್ಷಿಪ್ತ ಹಾಗೂ ಅಡಕ ಪದಗಳು viii
ಮುನ್ನುಡಿ ix


## ಭಾಗ ೧

## ಪರಿಚಯ


1. ಗುರಿಗಳು 1
2. ಸ್ವರೂಪ ಮತ್ತು ವ್ಯಾಪ್ತಿ 1
3. ಮಾರ್ಗದರ್ಶಕ ತತ್ವಗಳು 2
4. ಇತರ ಅಂತರರಾಷ್ಟ್ರೀಯ ಅಸ್ತ್ರಗಳ ಜೊತೆ ಸಂಬಂಧ 3


## ಭಾಗ ೨

## ಜವಾಬ್ಧಾರಿಯುತ ಮೀನುಗಾರಿಕೆ ಮತ್ತು ಸುಸ್ಥಿರಾತ್ಮಕ ಅಭಿವೃದ್ಧಿ


5. ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಕಾಲಾವಧಿಯ ಆಡಳಿತ ಮತ್ತು ಸಂಪನ್ಮೂಲಗಳ ನಿರ್ವಹಣೆ
೫ಅ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ
೫ಆ ಸುಸ್ಥಿರಾತ್ಮಕ ಸಂಪನ್ಮೂಲಗಳ ನಿರ್ವಹಣೆ
6. ಸಾಮಾಜಿಕ ಅಭಿವೃದ್ಧಿ, ಉದ್ಯೋಗ ಮತ್ತು ಯೋಗ್ಯ ಕೆಲಸ 8
7. ಮೌಲ್ಯದ ಸರಣಿಗಳು, ಮೀನು ಸಂಗ್ರಹಣೆಯ ನಂತರ ಮತ್ತು ವ್ಯಾಪಾರ 10
8. ಲಿಂಗ ಸಮಾನತೆ 12
9. ವಿಪತ್ತುಗಳ ಆಪತ್ತುಗಳು ಮತ್ತು ವಾತಾವರಣದ ಬದಲಾವಣೆ 12


## ಭಾಗ ೩

## ಶಕ್ತ ವಾತಾವರಣದ ಭರವಸೆ ಮತ್ತು ಜಾರಿಗೊಳಿಸುವುದಕ್ಕೆ ಬೆಂಬಲ


10. ಯೋಜನೆ ಸುಸಂಬದ್ಧತೆ, ಸಂಸ್ಥೆಗಳ ಸಂಯೋಜನೆ ಮತ್ತು ಸಹಭಾಗಿತ್ವ 15
11. ಮಾಹಿತಿ, ಸಂಶೋಧನೆ ಮತ್ತು ಸಂವಹನ 16
12. ಸಾಮರ್ಥ್ಯ / ಕೌಶಲ್ಯ ಅಭಿವೃದ್ಧಿ 17
13. ಜಾರಿಗೊಳಿಸಲು ಬೆಂಬಲ ಮತ್ತು ಮೇಲ್ವಿಚಾರಣೆ 18

# ಸಂಕ್ಷಿಪ್ತ ಮತ್ತು ಅಡಕ ಪದಗಳು

**CCA**
ಸಿ.ಸಿ.ಎ.
(ಕ್ಲೈಮೆಟ್ ಚೇಂಜ್ ಅಡಾಪ್ಟೇಷನ್)

ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ

**CEDAW**
ಸಿಇಡಿಎಡಬ್ಲಿಯು
(ಕನ್‌ವೆನ್‌ಶನ್ ಆಪ್ ದಿ ಎಲಿಮಿನೇಶನ್ ಆಫ್ ಡಿಸ್ಕ್ರಿಮಿನೇಶನೆಗೆನೆಸ್ಟ್ ವಿಮೆನ್)

ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ಶೋಷಣೆಗಳ ನಿರ್ಮೂಲನದ ಮೇಲಿನ ಅಧಿವೇಶನ

**CSO**
ಸಿ.ಎಸ.ಒ.
(ಸಿವಿಲ್ ಸೊಸೈಟಿ ಆರ್ಗನೈಸೇಷನ್)

ನಾಗರಿಕ ಸಮಾಜ ಸಂಸೆ

**DRM**
ಡಿ.ಅರ್.ಎಂ
(ಡಿಸಾಸ್ಟರ್ ರಿಸ್ಕ್ ಮ್ಯಾನೇಜ್‌ಮೆಂಟ್)

ವಿಪತ್ತುಗಳ ಅಪಾಯ ನಿರ್ವಹಣೆ

**EAF**
ಇ.ಎ.ಎಫ್.
(ಎಕೋ ಸಿಸ್ಟಮ್ ಅಪ್ರೋಚ್ ಟು ಫಿಶರೀಸ್)

ಮೀನುಗಾರಿಕೆಗೆ ಪರಿಸರದ ದೃಷ್ಟಿಕೋನ

**HIV/AIDS**
ಎಚ್.ಐ.ವಿ.
(ಹ್ಯೂಮನ್ ಇಮ್ಯುನೋ ಡೆಫಿಶಿಯನ್‌ಸಿ)

ಮನುಷ್ಯರಲ್ಲಿ ರಕ್ಷಿತ ಕಣಗಳ ಇಲ್ಲದಿರುವಿಕೆ

**ICESCR** ಐ.ಸಿ.ಇ.ಎಸ್.ಸಿ.ಆರ್
(ಇಂಟರ್ ನ್ಯಾಷನಲ್ ಕೊವೆನೆಂಟ್ ಆನ್ ಎಕನಾಮಿಕ್, ಸೋಷಿಯಲ್ ಯ್ಯಂಡ್ ಕಲ್ಚರಲ್ ರೈಟ್ಸ್)

ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಮೇಲೆ ಅಂತರ್ ರಾಷ್ಟ್ರೀಯ ಒಡಂಬಡಿಕೆ.

**IGO**
ಐ.ಜಿ.ಒ.
(ಇಂಟರ್ ಗವರ್ನಮೆಂಟಲ್ ಆರ್ಗನೈಸೇಷನ್)

ಸರ್ಕಾರದೊಳಗಿನ ಸಂಸ್ಥೆ

**ILO**
ಐ.ಎಲ್.ಒ.
(ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಸೇಷನ್)

ಅಂತರರಾಷ್ಟ್ರೀಯ ಶ್ರಮಿಕ ಸಂಸ್ಥೆ

**IMO**
ಐ.ಎಂ.ಒ
(ಇಂಟರ್ ನ್ಯಾಷನಲ್ ಮೈರಿಟಾಇಮ ಟೈಮ್ ಆರ್ಗನೈಸೇಷನ್)

ಅಂತರರಾಷ್ಟ್ರೀಯ ಕಡಲತಡಿಯ ಸಂಸ್ಥೆ

**IUU**
ಐ.ಯು.ಯು.
(ಇಲ್‌ಲೀಗಲ್, ಅನ್‌ರಿಪೋರ್‌ಟೆಡ್ ಯ್ಯಂಡ್ ಅನ್‌ರೆಗ್ಯುಲೇಟೆಡ್)

ಅನಧಿಕೃತ, ವರದಿ ಮಾಡಿರದ ಹಾಗೂ ನಿಯಂತ್ರಣವಿರದ

**MCS**
ಎಂ.ಸಿ.ಎಸ್. (ಮಾನಿಟರಿಂಗ್, ಕಂಟ್ರೋಲ್ ಯ್ಯಂಡ್ ಸರ್‌ವೈಲೆನ್ಸ್)

ಮೇಲ್ವಿಚಾರಣೆ, ಹಿಡಿತ ಹಾಗೂ ಕಣ್ಗಾವಲು

**NGO**
ಎನ್.ಜಿ.ಒ.
(ನಾನ್ ಗವರ್ನಮೆಂಟಲ್ ಆರ್ಗನೈಸೇಷನ್)

ಸರ್ಕಾರೇತರ ಸಂಸ್ಥೆ

**RIO+20**
(ರಿಯೋ=೨೦)

ಸುಸ್ಥಿರ ಅಭಿವೃದ್ಧಿಯ ಮೇಲಿನ ಸಂಯುಕ್ತ ರಾಷ್ಟ್ರಗಳ ಅಧಿವೇಶನ

**THE CODE** ದಿ ಕೋಡ್
(ಕೋಡ್ ಆಫ್ ಕಂಡಕ್ಟ್ ಫಾರ್ ರೆಸ್‌ಪಾನ್ಸಿಬಲ್ ಫಿಶರೀಸ್,ಎಫ್.ಎ.ಒ.)

ಜವಾಬ್ಧಾರಿಯುತ ಮೀನುಗಾರಿಕೆಗಾಗಿ ನಿಯಮಾವಳಗಳು (ಆ.ವ್ಯ.ಸ.)

**UN**
ಯು.ಎನ್.
(ಯುನೈಟೆಡ್ ನೇಷನ್ಸ್)

ಸಂಯುತ್ತ ರಾಷ್ಟ್ರಗಳು

**UN DRIP**
ಯು.ಎನ್. ಡ್ರಿಪ್ (ಯುನೈಟೆಡ್ ನೇಷನ್ಸ್ ಡಿಕ್ಲರೇಶನ್ ಆನ್ ದಿ ರೈಟ್ಸ್ ಆಫ್ ಇಂಡಿಜಿನಸ್ ಪೀಪಲ್ಸ್)

ಮೂಲ ನಿವಾಸಿಗಳ ಹಕ್ಕುಗಳ ಮೇಲೆ ಸಂಯುಕ ರಾಷ್ಟ್ರಗಳ ಘೋಷಣೆ

**UNFCCC**
ಯು.ಎನ್.ಎಫ್.ಸಿ.ಸಿ.ಸಿ.
(ಯುನೈಟೆಡ್ ನೇಷನ್ಸ್ ಫ್ರೇಮ್‌ವರ್ಕ ಕನ್ವೆಶನ್ ಆನ್ ಕ್ಲೈಮೆಟ್ ಚೇಂಜ್)

ಹವಾಮಾನ ಬದಲಾವಣೆಗಳ ಬಗ್ಗೆ ಸಂಯುತ್ತ ರಾಷ್ಟ್ರಗಳ ಅಧಿವೇಶನ

**WTO** ಡಬ್ಲಿಯು.ಟಿ.ಒ.

(ವರ್ಲ್ಡ್ ಟ್ರೇಡ್ ಆರ್ಗನೈಸೇಷನ್)
ವಿಶ್ವದ ವಾಣಿಜ್ಯ ಸಂಸ್ಥೆ

# ಮುನ್ನುಡಿ

ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ –ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿರುವ ಈ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು ೧೯೯೫ರ ಆ.ವ್ಯ.ಸ.ಯ ಜವಾಬ್ಧಾರಿಯುತ ಮೀನುಗಾರಿಕೆಯ ನಿಯಮ ನಡಾವಳಿಗಳಿಗೆ ಪೂರಕವಾಗಿ ರೂಪಿತಗೊಂಡವುಗಳಾಗಿರುತ್ತವೆ. ಇವುಗಳು ಸಣ್ಣ– ಪ್ರಮಾಣದ ಮೀನುಗಾರಿಕೆಗೆ ಪೂರಕ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ನಿಯಮಾವಳಿಯ ಕರಾರು ಮತ್ತು ಸಮಗ್ರವಾದ ಎಲ್ಲಾ ತತ್ವಗಳಿಗೆ ಬೆಂಬಲವಾಗಿ ರೂಪುಗೊಂಡಿವೆ. ಅದರ ಪ್ರಕಾರ, ಈ ಮಾರ್ಗದರ್ಶಿಕೆಗಳು ಈಗಾಗಲೇ ಮುಖ್ಯ ಪಾತ್ರ ವಹಿಸಿರುವ ಸಣ್ಣ– ಪ್ರಮಾಣದ ಮೀನುಗಾರಿಕೆಯನ್ನು ಕಾಣಿಸುವಂತೆ ಗುರುತಿಸುವುದು ಮತ್ತು ವಿದ್ವತ್ತನ್ನು ಹೆಚ್ಚಿಸುವುದಾಗಿರುತ್ತದೆ. ಹಾಗೂ ಹಸಿವು ಮತ್ತು ಬಡತನ ಹೋಗಲಾಡಿಸುವಲ್ಲಿ ಜಾಗತಿಕ ಮತ್ತು ರಾಷ್ಟ್ರದ ಪ್ರಯತ್ನಗಳಿಗೆ ಕೊಡುಗೆ ನೀಡುವುದಾಗಿದೆ. ಸಣ್ಣ–ಪ್ರಮಾಣದ ಮೀನುಗಾರರು, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಕೆಲಸಗಾರರು, ಮತ್ತು ಸಂಬಂಧಿತ ಕಾರ್ಯ ಚಟುವಟಿಕೆಗಳು, ಮೂಲೆಗುಂಪಾದ ಹಾಗೂ ಅಂಚಿಗೆ ತಳ್ಳಲ್ಪಟ್ಟವರನ್ನು ಒಳಗೊಂಡಂತೆ ಇವರ ಮೇಲೆ ವಿಶೇಷವಾದ ಒತ್ತನ್ನು ನೀಡಿ ಮಾನವ ಹಕ್ಕುಗಳಾಧಾರಿತ ದೃಷ್ಟಿಕೋನದ ಮಾರ್ಗವನ್ನು ಎತ್ತಿಹಿಡಿಯುತ್ತಲೇ, ಈ ಮಾರ್ಗದರ್ಶಿಕೆಗಳು ಇಂದಿನ ಹಾಗೂ ಮುಂಬರುವ ಪೀಳಿಗೆಗಳ ಲಾಭಕ್ಕೋಸ್ಕರವಾಗಿ ಜವಾಬ್ಧಾರಿಯುತ ಮೀನುಗಾರಿಕೆ ಮತ್ತು ಸುಸ್ಥಿರಾತ್ಮಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಬೆಂಬಲಿಸುತ್ತವೆ.

ಈ ಮಾರ್ಗದರ್ಶಿಕೆಗಳು ಸ್ವಯಂ ಪ್ರೇರಿತವಾದವುಗಳು, ಜಾಗತಿಕ ಮಟ್ಟದ ವ್ಯಾಪ್ತಿ ಹೊಂದಿರತಕ್ಕಂತಹುಗಳು ಹಾಗೂಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಗತ್ಯಗಳನ್ನು ಕೇಂದ್ರೀಕರಿಸಿದೆ ಎಂದುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.

ಸಣ್ಣ – ಪ್ರಮಾಣದ ಹಾಗೂ ಕುಲಕಸುಬು ಮೀನುಗಾರರು –ಇವರಲ್ಲಿ ಮುಖ್ಯವಾಗಿ ದುಡಿಮೆ ಮಾಡುವ ಮಹಿಳೆಯರು ಮತ್ತು ಪುರುಷರು ಮೀನು ಹಿಡಿಯುವ ಮುಂಚೆ, ಮೀನುಗಳು ಸಿಕ್ಕಾಗ ಹಾಗೂ ಮೀನು ಸಿಕ್ಕಾದ ಮೇಲೆ ಈ ಮೌಲಿಕ ಸರಣಿಯ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆಹಾರ ಭದ್ರತೆ ಮತ್ತು ಪೌಷ್ಟಿಕತೆ ಬಡತನ ನಿರ್ಮೂಲನ, ಸಮಾನಾಂತರ ಅಭಿವೃದ್ಧಿ ಹಾಗೂ ಸುಸ್ಥಿರಾತ್ಮಕ ಸಂಪನ್ಮೂಲಗಳ[1] ಬಳಕೆಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಸಣ್ಣ–ಪ್ರಮಾಣದ ಮೀನುಗಾರಿಕೆ ಸ್ಥಳೀಯ ಹಾಗೂ ರಾಷ್ಟ್ರ, ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಪೌಷ್ಟಿಕ ಆಹಾರ ನೀಡುವುದಲ್ಲದೇ, ಸ್ಥಳೀಯ ಹಾಗೂ ರಾಷ್ಟ್ರೀಯ ಆರ್ಥಿಕತೆಯನ್ನು ಬಲಪಡಿಸಲು ಆದಾಯ ಭರಿಸುತ್ತದೆ.. ಸಣ್ಣ– ಪ್ರಮಾಣದ ಮೀನುಗಾರಿಕೆ ಜಾಗತಿಕ ಮೀನು ಹಿಡಿಯುವಿಕೆಯ ಅರ್ಧದಷ್ಟನ್ನು ಕೊಡುಗೆಯಾಗಿ ನೀಡುತ್ತದೆ.. ಮೀನು ಹಿಡಿಯುವಿಕೆ ನೇರವಾಗಿ ಮೀನು ಬಳಸುವುದಕ್ಕೆ ಉಪಯುಕ್ತವಾಗುತ್ತದೆ ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಸಣ್ಣ– ಪ್ರಮಾಣದ ಮೀನುಗಾರಿಕೆಯ ಕೊಡುಗೆಯ ಪ್ರಮಾಣ ೩ರಲ್ಲಿ ೨ ಭಾಗಕ್ಕೆ ಹೆಚ್ಚಾಗುತ್ತದೆ. ಈ ವಿಚಾರದಲ್ಲಿ ಒಳನಾಡಿನ ಮೀನುಗಾರಿಕೆ ಮುಖ್ಯವಾಗುತ್ತದೆ. ಸಣ್ಣ–ಪ್ರಮಾಣದ ಮೀನುಗಾರಿಕೆಯಲ್ಲಿ ಹಿಡಿದಿರುವ ಮೀನುಗಳು ಬಹುತೇಕವಾಗಿ ಮನುಷ್ಯನ ಬಳಕೆಗೆ ಉಪಯೋಗವಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರಿಕೆ ಪ್ರಪಂಚದ ೯೦% ಗಿಂತ ಹೆಚ್ಚು ಮೀನು ಹಿಡಿಯುವವರನ್ನು ಹಾಗೂ ಮೀನು ಕೆಲಸಗಾರರನ್ನು ನೇಮಿಸುತ್ತದೆ. ಇದರಲ್ಲಿ ಅರ್ಧದಷ್ಟು ಹೆಂಗಸರಿರುತ್ತಾರೆ.

ಪೂರ್ಣ ಪ್ರಮಾಣದ ಅಥವಾ ಅರೆಕಾಲಿಕ ಮೀನುಗಾರರು ಮತ್ತು ಮೀನಿನ ಕೆಲಸಗಾರರು ಉದ್ಯೋಗದ ಜೊತೆಗೆ ಋತುಮಾನ ಅಥವಾ ಸಾಂದರ್ಭಿಕ ಮೀನುಗಾರಿಕೆ ಹಾಗೂ ಅದರ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇವು ಮಿಲಿಯಾಂತರ ಜನರಿಗೆ ಜೀವನಾಧಾರವಾಗಿರುತ್ತವೆ. ಈ ಚಟುವಟಿಕೆಗಳು

[1] ಈ ಹೊತ್ತಿಗೆಯಲ್ಲಿ ಮೀನಿನ ಸಂಪನ್ಮೂಲಗಳು ಎಂಬ ಪದದ ಬಳಕೆ ಸುಗ್ಗಿಗೆ ಒಳಗಾಗುವ ಬದುಕಿರುವ ಜಲಚರ ಸಂಪನ್ಮೂಲಗಳನ್ನು (ಸಮುದ್ರ ಹಾಗೂ ಹೊಸನೀರು ಎರಡೆರಲ್ಲೂ) ಒಳಗೊಳ್ಳುತ್ತದೆ.

ಯಾವಾಗಲೂ ಉಪ ಕಸುಬುಗಳು. ಅಥವಾ ವಿಶೇಷವಾಗಿ ಕಷ್ಟದ ಸಂದರ್ಭದಲ್ಲಿ ಮುಖ್ಯವಾಗಿ ಬಿಡುತ್ತವೆ. ಅನೇಕ ಸಣ್ಣ–ಪ್ರಮಾಣದ ಮೀನುಗಾರರು ಹಾಗೂ ಮೀನಿನ ಕೆಲಸಗಾರರು ಸ್ವ ಉದ್ಯೋಗಿಗಳಾಗಿರುತ್ತಾರೆ. ಮತ್ತು ತಮ್ಮ ಮನೆಗಳಿಗೆ ಹಾಗೂ ಸಮುದಾಯಕ್ಕೆ ನೇರವಾಗಿ ಆಹಾರ ಒದಗಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಹಾಗೂ ವಾಣಿಜ್ಯ ಮೀನುಗಾರಿಕೆ, ಅದರ ಕಾರ್ಯಚಟುವಟಿಕೆ ಮತ್ತು ವ್ಯಾಪಾರದಲ್ಲಿಯೂ ತೊಡಗಿಸಿಕೊಂಡಿರುತ್ತಾರೆ. ಮೀನುಗಾರಿಕೆ ಹಾಗೂ ಅದರ ಸಂಬಂಧಿತ ಕಾರ್ಯಚಟುವಟಿಕೆಗಳು ಆಗಾಗ್ಗೆ ಕರಾವಳಿ, ನದಿಯ ದಡ ಮತ್ತು ರಿಪಾರಿಯನ್ ಸಮುದಾಯಗಳ ಸ್ಥಳೀಯ ಆರ್ಥಿಕತೆಗೆ ಆಧಾರವಾಗಿರುತ್ತದೆ ಹಾಗೂ ಬೋಗಿಯೊಂದನ್ನು ನಿರ್ಮಾಣ ಮಾಡುತ್ತದೆ. ಹಾಗೂ ಇತರ ಕ್ಷೇತ್ರಗಳ ಮೇಲೆ ಅನೇಕಾನೇಕ ಬಗೆಯ ಪ್ರಭಾವವನ್ನು ಬೀರುತ್ತದೆ.

ಸಣ್ಣ–ಪ್ರಮಾಣದ ಮೀನುಗಾರಿಕೆ ವೈವಿಧ್ಯಮಯ ಹಾಗೂ ಕ್ರಿಯಾತ್ಮಕ ಉಪ ಕ್ಷೇತ್ರವನ್ನು ಪ್ರತಿನಿಧಿಸುತ್ತದೆ. ಇದು ಋತುಮಾನಕ್ಕನುಗುಣವಾದ ವಲಸೆಯ ಗುಣಲಕ್ಷಣವನ್ನು ಹೊಂದಿದೆ. ಈ ಉಪ ಕ್ಷೇತ್ರದ ನಿರ್ಧಿಷ್ಟ ಗುಣಲಕ್ಷಣಗಳು ಆ ಸ್ಥಳದ, ಪ್ರದೇಶದ ಮೇಲೆ ಅವಲಂಬಿತವಾಗಿ ಭಿನ್ನತೆ ಹೊಂದಿರುತ್ತದೆ. ನಿಜವೆಂದರೆ ಸಣ್ಣ–ಪ್ರಮಾಣದ ಮೀನುಗಾರಿಕೆ ಸ್ಥಳೀಯ ಸಮುದಾಯಗಳಲ್ಲಿ ಬಲವಾಗಿ ಬೇರೂರಿರುತ್ತದೆ. ಇವು ಅಕ್ಕ–ಪಕ್ಕದಲ್ಲಿನ ಮೀನು ಸಂಪನ್ಮೂಲಗಳು, ಸಂಪ್ರದಾಯ ಹಾಗೂ ಮೌಲ್ಯಗಳು ಮತ್ತು ಸಾಮಾಜಿಕ ಸಂಬಂಧ ಬಲಪಡಿಸುವ ನಿಟ್ಟಿನಲ್ಲಿ ಚಾರಿತ್ರಿಕ ಕೊಂಡಿ ಹೊಂದಿರುವುದನ್ನು ಪ್ರತಿನಿಧಿಸುತ್ತವೆ. ಅನೇಕ ಸಣ್ಣ–ಪ್ರಮಾಣದ ಮೀನುಗಾರರು ಮತ್ತು ಮೀನಿನ ಕೆಲಸಗಾರರಿಗೆ ಮೀನುಗಾರಿಕೆ ಬದುಕಿನ ಒಂದು ಭಾಗವಾಗಿ ಬಿಟ್ಟಿದೆ. ಮತ್ತು ಉಪ ಕ್ಷೇತ್ರ ವೈವಿಧ್ಯಮಯ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಒಳಗೊಂಡು ಇದರ ಜಾಗತಿಕ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಅನೇಕ ಸಣ್ಣ –ಪ್ರಮಾಣದ ಮೀನುಗಾರರು, ಮೀನು ಕೆಲಸಗಾರರು ಮತ್ತು ಅವರ ಸಮುದಾಯಗಳು, ಅಂಚಿಗೆ ತಳ್ಳಲ್ಪಟ್ಟ ಹಾಗೂ ಮೂಲೆ ಗುಂಪಾದ ಗುಂಪುಗಳನ್ನೊಳಗೊಂಡಂತೆ ಈ ಉದ್ಯೋಗಿಗಳು ಮೀನಿನ ಸಂಪನ್ಮೂಲಗಳು ಹಾಗೂ ಭೂಮಿ ದೊರೆಯುವಿಕೆಯ ಮೇಲೆ ನೇರವಾಗಿ ಅವಲಂಬಿತರಾಗಿರುತ್ತಾರೆ. ಕರಾವಳಿ ಹಾಗೂ ನೀರಿನಿಂದ ಆವೃತ ಪ್ರದೇಶಗಳಲ್ಲಿ ಮೀನುಗಾರಿಕೆಯ, ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ (ವ್ಯಾಪಾರ ಹಾಗೂ ಮೀನು ಕಾರ್ಯವಿಧಾನ ಒಳಗೊಂಡಂತೆ) ಮನೆ, ಹಾಗೂ ಇತರ ಜೀವನಾಧಾರ ಬೆಂಬಲಕ್ಕೆ ಭರವಸೆ ನೀಡುವಲ್ಲಿ, ದಾರಿ ಸುಗಮಗೊಳಿಸುವಲ್ಲಿ ಭೂಮಿಯ ಗೇಣಿ ಅಥವಾ ಕಾಲಾವಧಿಯ ಹಕ್ಕು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ. ಜಲಸಂಬಂಧ ಪರಿಸರ ಹಾಗೂ ಇದಕ್ಕೆ ಹೊಂದಿಕೊಂಡಿರುವ ಜೀವವೈವಿಧ್ಯತೆಗಳು, ಅವರ ಜೀವನಾಧಾರಕ್ಕೆ ಹಾಗೂ ಎಲ್ಲರ ಒಳಿತಿಗೆ ಉಪ ಕ್ಷೇತ್ರ ನೀಡಬಹುದಾದ ಕೊಡುಗೆಯ ಸಾಮರ್ಥ್ಯಕ್ಕೆ ಆಧಾರವಾಗಿರುವ ಮೂಲಭೂತ ಸಂಗತಿಗಳಾಗಿವೆ.

ಹೀಗೆ ಇವರು ಪ್ರಾಮುಖ್ಯರಾಗಿದ್ದರೂ ಅನೇಕ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಅಂಚಿಗೆ ತಳ್ಳಲ್ಪಡುತ್ತಿವೆ. ಆಹಾರ ಮತ್ತು ಪೌಷ್ಟಿಕತೆ, ಬಡತನ ನಿರ್ಮೂಲನ, ಸಮಾನ ಅಭಿವೃದ್ಧಿ ಹಾಗೂ ಸುಸ್ಥಿರಾತ್ಮಕ ಸಂಪನ್ಮೂಲಗಳ ಬಳಕೆ ಇವು ಅವರಿಗೆ ಹಾಗೂ ಇತರರಿಗೆ ಲಾಭದಾಯಕವಾಗಿದ್ದರೂ ಇದರ ಬಗ್ಗೆ ಸಂಪೂರ್ಣ ಅರಿವು ಇವರಲ್ಲಿ ಮೂಡಿಲ್ಲ.

ಸಣ್ಣ–ಪ್ರಮಾಣದ ಮೀನುಗಾರಿಕೆಯನ್ನು ಭದ್ರಪಡಿಸುವುದು ಹಾಗೂ ಇದರ ಕೊಡುಗೆಯನ್ನು ಹೆಚ್ಚಿಸುವಲ್ಲಿ ಅನೇಕ ಸವಾಲುಗಳು ಹಾಗೂ ತೊಡರುಗಳು ಇವೆ. ಕಳೆದ ಮೂರು ಹಾಗೂ ೪ ದಶಕಗಳಲ್ಲಿ ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿಯು ಜಗತ್ತಿನ ಅನೇಕ ಪ್ರಕರಣಗಳಲ್ಲಿ ಸಂಪನ್ಮೂಲಗಳ ಶೋಷಣೆಗೆ ಹಾಗೂ ಪರಿಸರ ಮತ್ತು ನೆಲೆಸುವಿಕೆಗೆ ಅಪಾಯವನ್ನು ಉಂಟುಮಾಡಿವೆ. ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿ ಸಂಪನ್ಮೂಲಗಳ ಹಂಚಿಕೆ ಹಾಗೂ ಪಾಲುಗಳನ್ನು ಸಾಂಪ್ರದಾಯಕ ಪದ್ಧತಿಗಳ ಮೂಲಕ ಮಾಡುತ್ತಿದ್ದುದು ಆ ಕ್ಷೇತ್ರಕ್ಕೆ ಲಾಭದಾಯಕವಾಗಿತ್ತು. ಇವು ತಲೆ ತಲಾಂತರದಿಂದ ಜಾರಿಯಲ್ಲಿದ್ದವು. ಈಗ ಭಾಗವಹಿಸುವಿಕೆ ಇಲ್ಲದಿರುವುದು, ಅನೇಕ ಬಾರಿ ಕೇಂದ್ರೀಕೃತ ನಿರ್ವಹಣೆಯಿಂದ, ತ್ವರಿತ ಗತಿಯಲ್ಲಿ ಬೆಳೆಯುತ್ತಿರುವ ತಾಂತ್ರಿಕ ಅಭಿವೃದ್ಧಿಗಳಿಂದ ಹಾಗೂ ಜನಸಂಖ್ಯಾ ಬದಲಾವಣೆಯಿಂದಾಗಿ ಅನೇಕ ಬದಲಾವಣೆಗಳಾಗತೊಡಗಿವೆ. ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಕೂಡಾ ಸಾಮಾನ್ಯವಾಗಿ ಅಸಮಾನ ಅಧಿಕಾರದ ಸಂಬಂಧಗಳಿಂದ ನರಳುತ್ತಿರುತ್ತವೆ. ಕೆಲವು ಕಡೆ ದೊಡ್ಡ ಪ್ರಮಾಣದ ಮೀನುಗಾರಿಕೆಯ ಕಾರ್ಯ ಚಟುವಟಿಕೆಗಳ ಜೊತೆಗಿನ ಸಂಘರ್ಷ ಕೂಡಾ ಒಂದು ಮುಖ್ಯ ಸಮಸ್ಯೆಯಾಗಿದೆ.ಸಣ್ಣ–ಪ್ರಮಾಣದ ಮೀನುಗಾರರ ಹಾಗೂ ಇತರ ಕ್ಷೇತ್ರಗಳ ನಡುವೆ ಅವಲಂಬನೆ ಹಾಗೂ ಸ್ಪರ್ದೆ ಎರಡೂ ಹೆಚ್ಚಾಗುತ್ತಿವೆ. ಈ ಬೇರೆ ಕ್ಷೇತ್ರಗಳು ಹಲವು ಬಾರಿ ಬಲವಾದ ರಾಜಕೀಯ ಹಾಗೂ ಆರ್ಥಿಕ

ಪ್ರಭಾವವನ್ನು ಬೀರಬಹುದು. ಇತರ ಕ್ಷೇತ್ರಗಳೆಂದರೆ ಪ್ರವಾಸ, ವ್ಯವಸಾಯ, ಜಲಸಂಬಂಧಿತ, ಗಣಿಗಾರಿಕೆ, ಕೈಗಾರಿಕೆ ಮತ್ತು ಸೌಲಭ್ಯಗಳ ಅಭಿವೃದ್ಧಿ.

ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿ ಎಲ್ಲಿ ಬಡತನವಿದೆಯೋ ಅಲ್ಲಿ ಅದಕ್ಕೆ ಅನೇಕ ಮುಖಗಳು ಇರುತ್ತವೆ. ಇದು ಕೇವಲ ಅಲ್ಪ ಆದಾಯದಿಂದ ಮಾತ್ರ ಉಂಟಾದದ್ದಲ್ಲ. ಇದಕ್ಕೆ ಇತರ ಕಾರಣಗಳು ಇವೆ. ನಾಗರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಹಕ್ಕುಗಳನ್ನೊಳಗೊಂಡ ಮಾನವ ಹಕ್ಕುಗಳನ್ನು ಸಂತೋಷಿಸಲಾಗದ ಇತರ ಕಾರಣಗಳೂ ಇವೆ. ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಸಾಮಾನ್ಯವಾಗಿ ದೂರದ ಪ್ರದೇಶದಲ್ಲಿ ವಾಸವಾಗಿರುತ್ತಾರೆ. ಇವರಿಗೆ ಮಾರುಕಟ್ಟೆಗಳು ಕೈಗೆಟಕುವುದಿಲ್ಲ. ಜೊತೆಗೆ, ಆರೋಗ್ಯ, ಶಿಕ್ಷಣ, ಮತ್ತು ಇತರೇ ಸಾಮಾಜಿಕ ಸೇವೆಗಳೂ ಕೂಡಾ ಸುಲಭವಾಗಿ ದಕ್ಕುವುದಿಲ್ಲ. ಇತರೇ ಲಕ್ಷಣಗಳೆಂದರೆ ಅತ್ಯಂತ ಕೆಳಮಟ್ಟದ ಶಿಕ್ಷಣ, ಅನಾರೋಗ್ಯ, (ಸಾಮಾನ್ಯಕ್ಕಿಂತ ಹೆಚ್ಚು ಹೆಚ್.ಐ.ವಿ. ಹಾಗೂ ಏಡ್ಸ್ ಪ್ರಕರಣಗಳು) ಮತ್ತು ಸಾಕಷ್ಟಿರದ ಸಾಂಸ್ಥಿಕ ರಚನೆಗಳು, ಕಡಿಮೆ ಲಭ್ಯವಿರುವ ಅವಕಾಶಗಳು. ಸಣ್ಣ–ಪ್ರಮಾಣದ ಮೀನುಗಾರರಿಗೆ ಪರ್ಯಾಯ ಜೀವನಾಧಾರಗಳಿಲ್ಲ. ಹಾಗಾಗಿ ಯುವಕರ ನಿರುದ್ಯೋಗ ,ಅನಾರೋಗ್ಯ, ಸುರಕ್ಷತೆಯಿರದ ಕೆಲಸದ ಸ್ಥಿತಿ , ಜೀತದ ಕೆಲಸ, ಬಾಲ ಕಾರ್ಮಿಕರು ಕಂಡುಬರುತ್ತಾರೆ. ಪರಿಸರ ಮಾಲಿನ್ಯ, ಪರಿಸರ ಅವನತಿ, ಹವಾಮಾನ ವ್ಯತ್ಯಾಸದ ಪ್ರಭಾವಗಳು, ನೈಸರ್ಗಿಕ ಹಾಗೂ ಮಾನವ ನಿರ್ಮಿತ ಅವಗಢಗಳು ಸಣ್ಣ– ಪ್ರಮಾಣದ ಮೀನುಗಾರರು ಎದುರಿಸುತ್ತಿರುವ ಸಮಸ್ಯೆಗಳ ಜೊತೆಗೆ ಸೇರಿಕೊಂಡಿವೆ. ಈ ಎಲ್ಲಾ ಅಂಶಗಳಿಂದಾಗಿ ಸಣ್ಣ– ಪ್ರಮಾಣದ ಮೀನುಗಾರರಿಗೆ ಹಾಗೂ ಮೀನಿನ ಕೆಲಸಗಾರರಿಗೆ ತಮ್ಮ ಧ್ವನಿ ಎತ್ತುವುದಕ್ಕೆ, ಮಾನವಹಕ್ಕುಗಳು ಹಾಗೂ ಭೂಮಿಯ ಕಾಲಾವಧಿಯ ಹಕ್ಕುಗಳನ್ನು ಪ್ರತಿಪಾದಿಸಿಕೊಳ್ಳುವುದಕ್ಕೆ ಕಷ್ಟ ಸಾಧ್ಯವಾಗುತ್ತದೆ.

ಈ ಮಾರ್ಗದರ್ಶಿಕೆಗಳು ರೂಪುಗೊಂಡಿರುವುದು ಭಾಗವಹಿಸುವಿಕೆ ಹಾಗೂ ಸಮಾಲೋಚನೆ ಹಂತದಿಂದ. ಇದರಲ್ಲಿ ಸಣ್ಣ–ಪ್ರಮಾಣದ ಮೀನುಗಾರರ ಸಮುದಾಯಗಳು, ನಾಗರಿಕ ಸಮಾಜ ಸಂಸ್ಥೆಗಳು,ಸರ್ಕಾರಗಳು, ಪ್ರಾದೇಶಿಕ ಸಂಸ್ಥೆಗಳು ಮತ್ತು ಇತರ ಸ್ಟೇಕ್ ಹೋಲ್ಡರ್ಸ್ ಪಾಲ್ಗೊಂಡಿದ್ದರು. ಆ.ವ್ಯ.ಸ. ಯ ತಾಂತ್ರಿಕ ಸಮಾಲೋಚನೆ ೨೦ –೨೪ ಮೇ ೨೦೧೩ ಹಾಗೂ ೩–೭ ಫೆಬ್ರವರಿ ೨೦೧೪ ನಲ್ಲಿ ಎರೆಡು ಅಧಿವೇಶನಗಳು ನಡೆದು ಮಾರ್ಗದರ್ಶಿಕೆಗಳನ್ನು ಪುನರಾವಲೋಕನ ಮಾಡಲಾಯಿತು. ಅವರು ಸವಿಸ್ತಾರವುಳ್ಳ ಮುಖ್ಯ ವಿಚಾರಗಳನ್ನು ಹಾಗೂ ತತ್ವಗಳನ್ನು ಗಣನೆಗೆ ತೆಗೆದುಕೊಂಡರು. ಇದರಲ್ಲಿ ಸಮಾನತೆ, ಪಕ್ಷಪಾತವಿಲ್ಲದಿರುವಿಕೆ, ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆ, ಹೊಣೆಗಾರತ್ವ ಹಾಗೂ ಕಾನೂನು ನಿಬಂಧನೆ, ಎಲ್ಲಾ ಮಾನವ ಹಕ್ಕುಗಳು ಸಾರ್ವತ್ರಿಕವಾದವುಗಳು, ಅವಿಭಾಜ್ಯವಾದವುಗಳು, ಪರಸ್ಪರ ಸಂಬಂಧವಿರತಕ್ಕಂತವುಗಳು, ಹಾಗೂ ಪರಸ್ಪರ ಅವಲಂಬಿತವಾದವುಗಳು ಎಂಬ ತತ್ವ ಗಳು ಒಳಗೊಂಡಿದ್ದವು. ಈ ಮಾರ್ಗದರ್ಶಿಕೆಗಳು ಸಹಮತ ಹೊಂದಿದ್ದು, ಅಂತರರಾಷ್ಟೀಯ ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸುತ್ತವೆ. ಈ ಮಾರ್ಗದರ್ಶಿಕೆಗಳು ನಿಯಮ/ಕೋಡ್ ಗೆ ಹಾಗೂ ಅದರ ಸಂಬಂಧಿತ ಅಸ್ತ್ರಗಳಿಗೆ ಪೂರಕವಾಗಿವೆ. ಈ ನಿಯಮಕ್ಕೆ ಸಂಬಂಧಿಸಿದ ತಾಂತ್ರಿಕ ಮಾರ್ಗದರ್ಶಿಕೆಗಳನ್ನೂ ಅವರು ಗಣನೆಗೆ ತೆಗೆದುಕೊಂಡಿದ್ದಾರೆ. ಅದೆಂದರೆ, ಜವಾಬ್ಧಾರಿಯುತ ಮೀನುಗಾರಿಕೆಗೆ ತಾಂತ್ರಿಕ ಮಾರ್ಗದರ್ಶಿಕೆಗಳು ಸಂಖ್ಯೆ ೧೦:

ಬಡತನ ನಿರ್ಮೂಲನ ಹಾಗೂ ಆಹಾರ ಭದ್ರತೆಗಾಗಿ ಸಣ್ಣ –ಪ್ರಮಾಣದ ಮೀನುಗಾರಿಕೆಯ ಕೊಡುಗೆಯನ್ನು ಹೆಚ್ಚಿಸುವುದು. ಜೊತೆಗೆ, ಭೂಮಿಯ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ, ರಾಷ್ಟ್ರೀಯ ಆಹಾರ ಭದ್ರತೆಯ ಹಿನ್ನಲೆಯಲ್ಲಿ (ಕಾಲಾವಧಿಯ ಮಾರ್ಗದರ್ಶಿಕೆಗಳು) ಮೀನುಗಾರಿಕೆ ಹಾಗೂ ಅರಣ್ಯಗಳು, ರಾಷ್ಟ್ರೀಯ ಆಹಾರ ಭದ್ರತೆಯ ಹಿನ್ನಲೆಯಲ್ಲಿ (ಆಹಾರದ ಹಕ್ಕಿನ ಮಾರ್ಗದರ್ಶಿಕೆಗಳು) ಸಾಕಷ್ಟು ಆಹಾರದ ಹಕ್ಕಿನ ಪ್ರಗತಿಪರ ತಿಳುವಳಿಕೆ ಬೆಂಬಲಿಸುವ ಸ್ವಯಂಪ್ರೇರಿತ ಮಾರ್ಗದರ್ಶಿಕೆಗಳು – ಹೀಗೆ ಸಂದರ್ಭಕ್ಕೆ ಅನ್ವಯವಾಗುವ ಸ್ವಯಂ ಪ್ರೇರಿತ ಅಂತರ ರಾಷ್ಟ್ರೀಯ ಅಸ್ತ್ರಗಳನ್ನು ಕೂಡಾ ಗಣನೆಗೆ ತೆಗೆದುಕೊಂಡಿದೆ. ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಅನ್ವಯವಾಗುವ ಆವಶ್ಯಕತೆಗಳು, ಸ್ವಯಂಪ್ರೇರಿತ ಬದ್ಧತೆ, ದೊರೆಯಬಲ್ಲ ಮಾರ್ಗದರ್ಶನಗಳನ್ನು ಸಮಗ್ರವಾಗಿ ಸೇರಿಸಲು ಅನ್ವಯವಾಗುವ ಇತರ ಮಾರ್ಗದರ್ಶಿಕೆಗಳು ಹಾಗೂ ಪ್ರಸ್ತುತವಾದ ಅಂತರರಾಷ್ಟ್ರೀಯ ಹಾಗೂ ಪ್ರಾದೇಶಿಕ ಅಸ್ತ್ರಗಳನ್ನು ಬಳಸುವುದನ್ನು, ಅವುಗಳನ್ನು ಸಮಾಲೋಚಿಸುವುದನ್ನು ಪ್ರೋತ್ಸಾಹಿಸಲಾಗಿದೆ.

# ಭಾಗ ೧
# ಪರಿಚಯ

## ೧. ಗುರಿಗಳು

### ೧.೧. ಈ ಮಾರ್ಗದರ್ಶಿಕೆಗಳ ಗುರಿಗಳೆಂದರೆ:

ಅ) ಜಾಗತಿಕ ಆಹಾರ ಭದ್ರತೆ ಹಾಗೂ ಪೌಷ್ಟಿಕತೆ ಮತ್ತು ಸಾಕಷ್ಟು ಆಹಾರದ ಹಕ್ಕಿನ ಪ್ರಗತಿಪರ ತಿಳವಳಿಕೆಯ ಬೆಂಬಲವನ್ನು ಹೆಚ್ಚಿಸುವಲ್ಲಿ ಸಣ್ಣ– ಪ್ರಮಾಣದ ಮೀನುಗಾರರ ಕೊಡುಗೆಯನ್ನು ವೃದ್ಧಿಗೊಳಿಸುವುದು.

ಆ) ಸುಸ್ಥಿರಾತ್ಮಕ ಮೀನುಗಾರಿಕೆಯ ಆಡಳಿತದ ಹಂತದಲ್ಲಿಯೇ ಸಣ್ಣ ಪ್ರಮಾಣದ ಮೀನುಗಾರ ಸಮುದಾಯಗಳ ಸಮಾನ ಅಭಿವೃದ್ಧಿಗೆ ಮತ್ತು ಬಡತನ ನಿರ್ಮೂಲನೆಗೆ ಕೊಡುಗೆ ನೀಡುವುದು ಮತ್ತುಮೀನುಗಾರರ ಹಾಗೂ ಮೀನಿನ ಕೆಲಸಗಾರರ ಸಾಮಾಜಿಕ – ಆರ್ಥಿಕ ಸ್ಥಿತಿ ಗತಿಗಳನ್ನು ಉತ್ತಮಗೊಳಿಸುವುದು.

ಇ) ಜವಾಬ್ಧಾರಿಯತ ಮೀನುಗಾರಿಕೆಯ ಹಾಗೂ ಸಂಬಂಧಿತ ಅಸ್ತ್ರಗಳ ನಿಯಮಾವಳಿಗಳ ಕಾನೂನಿನನ್ವಯ ಸುಸ್ಥಿರಾತ್ಮಕ ಬಳಸುವಿಕೆ, ವಿವೇಕಯುತ ಮತ್ತು ಜವಾಬ್ಧಾರಿಯುತ ಆಡಳಿತ ಮತ್ತು ಮೀನುಗಾರಿಕೆಯ ಸಂಪನ್ಮೂಲಗಳನ್ನು ಕಾಪಾಡುವಿಕೆಯನ್ನು ಸಾಧಿಸುವುದಾಗಿದೆ.

ಈ) ಈ ಜಗತ್ತಿನ ಹಾಗೂ ಅದರ ನಿವಾಸಿಗಳಿಗೆ ಆರ್ಥಿಕ, ಸಾಮಾಜಿಕ ಹಾಗೂ ಪರಿಸರಾತ್ಮಕವಾಗಿ ಸುಸ್ಥಿರವಾಗಿಡಬಲ್ಲ ಭವಿಷ್ಯಕ್ಕಾಗಿ ಸಣ್ಣ– ಪ್ರಮಾಣದ ಮೀನುಗಾರಿಕೆಯ ಕೊಡುಗೆಯನ್ನು ಹೆಚ್ಚಿಸುವುದು.

ಉ) ಸರ್ಕಾರಗಳ ಹಾಗೂ ಸ್ಟೇಕ್ ಹೋಲ್ಡ್‌ರ್ಸ್ ಪರಿಗಣಿಸಬಹುದಾದ ಪರಿಸರ ಸ್ನೇಹಿ ಹಾಗೂ ಭಾಗವಹಿಸುವಿಕೆಯುಳ್ಳ ಯೋಜನೆಗಳ ಅಭಿವೃದ್ಧಿ ಹಾಗೂ ಜಾರಿಗೊಳಿಸುವಿಕೆ, ಜವಾಬ್ಧಾರಿಯುತ ಮತ್ತು ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆಯ ಹೆಚ್ಚಳಕ್ಕೆ ಇರುವ ಯೋಜನೆಗಳು ಹಾಗೂ ಕಾನೂನು ಚೌಕಟ್ಟುಗಳ ಮಾರ್ಗದರ್ಶನವನ್ನು ನೀಡಲು.

ಊ) ಸಣ್ಣ–ಪ್ರಮಾಣದ ಮೀನುಗಾರರ ಪ್ರಾಚೀನ ಹಾಗೂ ಸಂಪ್ರದಾಯ ಜ್ಞಾನ ಹಾಗೂ ಅವರ ಸಂಬಂಧಿತ ಅವಕಾಶಗಳು, ಅಡರುತೊಡರುಗಳ ಹಿನ್ನಲೆಯಲ್ಲಿ ಸಣ್ಣ– ಪ್ರಮಾಣದ ಮೀನುಗಾರರ ಸಂಸ್ಕೃತಿ, ಪಾತ್ರ, ಕೊಡುಗೆ ಮತ್ತು ಅವರ ಸಾಮರ್ಥ್ಯ ಕುರಿತು ಜ್ಞಾನದ ಹೆಚ್ಚಳ ಬೆಂಬಲಿಸುವುದಕ್ಕೆ ಹಾಗೂ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವುದಕ್ಕೆ.

೧.೨ ಮೂಲೆ ಗುಂಪಾಗುತ್ತಿರುವ ಹಾಗೂ ಅಂಚಿಗೆ ತಳ್ಳಲ್ಪಡುತ್ತಿರುವ ಗುಂಪುಗಳ ಒಳಿತಿಗೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಗತ್ಯಗಳ ಮೇಲೆ ಒತ್ತು ನೀಡುವ ಮೂಲಕ ಮತ್ತು ಸುಸ್ಥಿರಾತ್ಮಕ ಮೀನುಗಾರಿಕೆ ಸಂಪನ್ಮೂಲಗಳನ್ನು ಬಳಸಲು ಬೇಕಾದ ಜವಾಬ್ಧಾರಿ ಹೊತ್ತುಕೊಳ್ಳುವುದಕ್ಕೆ, ಹಾಗೂ ನಿರ್ಧಾರ ಮಾಡುವ ಹಂತದಲ್ಲಿ ಭಾಗವಹಿಸುವಿಕೆಗೆ ಪುರುಷ ಹಾಗೂ ಮಹಿಳೆಯರನ್ನು ಒಳಗೊಂಡಂತೆ ಸಣ್ಣ–ಪ್ರಮಾಣದ ಮೀನುಗಾರರ ಸಮುದಾಯಗಳನ್ನು ಸಬಲಗೊಳಿಸುವ ಮೂಲಕ ಮಾನವ ಹಕ್ಕುಗಳ ಆಧಾರಿತ ಚೌಕಟ್ಟಿನಲ್ಲಿ ಈ ಗುರಿಗಳನ್ನು ಸಾಧಿಸಬೇಕಾಗಿದೆ.

## ೨. ಸ್ವರೂಪ ಮತ್ತು ವ್ಯಾಪ್ತಿ

೨.೧ ಈ ಮಾರ್ಗದರ್ಶಿಕೆಗಳು ಸ್ವಯಂ ಪ್ರೇರಿತವಾದವುಗಳು. ವ್ಯಾಪ್ತಿಯಲ್ಲಿ ಜಾಗತಿಕವಾಗಿದ್ದರೂ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಗತ್ಯಗಳ ಮೇಲೆ ಒತ್ತು ನೀಡುತ್ತಾ ಸಣ್ಣ –ಪ್ರಮಾಣದ ಮೀನುಗಾರಿಕೆಯ ಎಲ್ಲಾ ಸಂದರ್ಭಗಳಲ್ಲಿಯೂ ಈ ಮಾರ್ಗದರ್ಶಿಕೆಗಳು ಅನ್ವಯವಾಗುತ್ತವೆ.

೨.೨ ಸಮುದ್ರ ಹಾಗೂ ಒಳನಾಡು ನೀರಿನಲ್ಲಿ ಮೌಲಿಕ ಸರಣಿಯ ಎಲ್ಲಾ ಕ್ರಿಯೆಗಳಲ್ಲಿ ಹಾಗೂ ಮೀನು ಹಿಡಿಯುವ ಹಾಗೂ ಮೀನು ಹಿಡಿದಾದ ಮೇಲಿನ ಕಾರ್ಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಸಣ್ಣ– ಪ್ರಮಾಣದ ಮೀನುಗಾರಿಕೆಯ ಪುರಷ ಹಾಗೂ ಮಹಿಳೆಯರಿಗೆಲ್ಲ ಈ ಮಾರ್ಗದರ್ಶಿಕೆಗಳು ಪ್ರಸ್ತುತವಾಗಿವೆ. ಸಣ್ಣ –ಪ್ರಮಾಣದ ಮೀನುಗಾರಿಕೆ ಮತ್ತು ಜಲಸಂಸ್ಕೃತಿಯ ಮಧ್ಯೆ ಇರುವ ಮುಖ್ಯವಾದ ಕೊಂಡಿಗಳನ್ನು ಗುರುತಿಸಲಾಗಿದೆ. ಆದರೆ, ಈ ಮಾರ್ಗದರ್ಶಿಕೆಗಳು ಮೀನು ಹಿಡಿಯುವುದರ ಮೇಲೆ ಮುಖ್ಯವಾಗಿ ಗಮನ ಹರಿಸಿವೆ.

೨.೩ ದೇಶದ ಎಲ್ಲಾ ಹಂತದಲ್ಲಿ ಆ.ವ್ಯ.ಸ. ಸದಸ್ಯರು ಹಾಗೂ ಸದಸ್ಯರಲ್ಲದವರನ್ನು ಹಾಗೆಯೇ ಉಪ ಪ್ರದೇಶ, ಪ್ರಾದೇಶಿಕ, ಅಂತರರಾಷ್ಟೀಯ, ಒಳ ಸರ್ಕಾರಗಳ ಸಂಸ್ಥೆಗಳು, ಮತ್ತು ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಾಗಿಗಳು (ಮೀನುಗಾರರು, ಮೀನಿನ ಕೆಲಸಗಾರರು ಮತ್ತು ಅವರ ಸಮುದಾಯಗಳು, ಸಂಪ್ರದಾಯ ಹಾಗೂ ತೆರಿಗೆ ಅಧಿಕಾರಿಗಳು ಹಾಗೂ ಸಂಬಂಧಿತ ಉದ್ಯೋಗ ಸಂಸ್ಥೆಗಳು) ಈಎಲ್ಲರನ್ನೂ ಮಾರ್ಗದರ್ಶಿಕೆಗಳು ಉದ್ದೇಶಿಸುತ್ತವೆ. ಸಂಶೋಧನೆ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಕ್ಷೇತ್ರ, ಸರ್ಕಾರೇತರ ಸಂಸ್ಥೆಗಳು. ಹಾಗೂ ಮೀನುಗಾರಿಕೆ ಕ್ಷೇತ್ರ, ಕರಾವಳಿ, ಗ್ರಾಮೀಣ ಅಭಿವೃದ್ಧಿ, ಮತ್ತು ಜಲಪರಿಸರ ಬಳಸುವ ಎಲ್ಲರತ್ತ ಈ ಮಾರ್ಗದರ್ಶಿಗಳು ಗಮನ ಹರಿಸಿವೆ.

೨.೪ ಈ ಮಾರ್ಗದರ್ಶಿಗಳು ಸಣ್ಣ–ಪ್ರಮಾಣದ ಮೀನುಗಾರಿಕೆಯ ವೈವಿಧ್ಯತೆಯನ್ನು ಗುರುತಿಸುತ್ತದೆ. ಹಾಗೂ ಏಕರೂಪಿಯಾಗಿರುವ ಅಥವಾ ಒಪ್ಪಿಗೆಯಾಗಿರುವ ಯಾವುದೇ ಒಂದು ವ್ಯಾಖ್ಯಾನ ಉಪಕ್ಷೇತ್ರಕ್ಕೆ ಲಭ್ಯವಿಲ್ಲ. ಈ ಪ್ರಕಾರ, ಮಾರ್ಗದರ್ಶಿಕೆಗಳು ಸಣ್ಣ– ಪ್ರಮಾಣದ ಮೀನುಗಾರಿಕೆಯ ಬಗ್ಗೆ ಯಾವುದೇ ನಿರ್ಧಿಷ್ಟ ವ್ಯಾಖ್ಯಾನವನ್ನು ಎತ್ತಿ ಹಿಡಿಯುವುದಿಲ್ಲ ಅಥವಾ

ಒಂದು ರಾಷ್ಟ್ರದೊಳಗೆ ಹೇಗೆ ಅನ್ವಯಗೊಳ್ಳಬೇಕು ಎಂಬುದನ್ನೂ ಹೇಳುವುದಿಲ್ಲ. ಈ ಮಾರ್ಗದರ್ಶಿಕೆಗಳು ಸಣ್ಣ-ಪ್ರಮಾಣದ ಮೀನುಗಾರಿಕೆಯ ಉಳಿವಿಗೆ ಹಾಗೂ ಅಂಚಿಗೆತಳ್ಳಲ್ಪಟ್ಟ ಮೀನುಗಾರಿಕೆಯ ಜನರಿಗೆ ಪ್ರಸ್ತುತವಾಗುತ್ತವೆ. ಈ ಮಾರ್ಗದರ್ಶಿಕೆಗಳ ಅನ್ವಯಿಸುವಿಕೆಯಲ್ಲಿ ಪಾರದರ್ಶಕತ್ವ ಹಾಗೂ ಜವಾಬ್ಧಾರಿಯನ್ನು ನಿಭಾಯಿಸಲು/ನಿರ್ವಹಿಸಲು ಯಾವ ಚಟುವಟಿಕೆ, ಯಾರು ಸಣ್ಣ-ಪ್ರಮಾಣದವರು ಎಂಬುದನ್ನು ಪರಿಗಣಿಸುವುದು ಅತ್ಯಂತ ಮುಖ್ಯವಾಗುತ್ತದೆ. ಮೂಲೆ ಗುಂಪಾದ , ಅಂಚಿಗೆ ತಳ್ಳಲ್ಪಟ್ಟವರನ್ನು ಗುರುತಿಸುವುದಕ್ಕೆ ಹೆಚ್ಚಿನ ಗಮನ ಬೇಕಾಗತ್ತದೆ. ಇದನ್ನು ಪ್ರಾದೇಶಿಕ ಹಾಗೂ ಉಪ ಪ್ರಾದೇಶಿಕ ಅಥವಾ ರಾಷ್ಟ್ರದ ಹಂತದಲ್ಲಿ ಮಾಡಬೇಕಾಗುತ್ತದೆ. ಹಾಗೂ ಸಂದರ್ಭಕ್ಕನುಸಾರವಾಗಿ ಈ ಮಾರ್ಗದರ್ಶಿಕೆಗಳು ಅನ್ವಯಗೊಳ್ಳಬೇಕಾಗುತ್ತವೆ. ಅಂತಹ ಗುರುತಿಸುವಿಕೆ ಹಾಗೂ ಅನ್ವಯಿಸುವಿಕೆಗಳು ಅರ್ಥಪೂರ್ಣ ಮತ್ತು ಗುಣಮಟ್ಟದ ಭಾಗವಹಿಸುವಿಕೆ, ಸಮಾಲೋಚನೆ, ಅನೇಕ ಸ್ತರದ ಹಾಗೂ ಗುರಿ ಪ್ರಾಧಾನ್ಯತೆ ಹೊಂದಿದ ಕಾರ್ಯ ವಿಧಾನಗಳನ್ನು ಹೊಂದಿದೆ ಎಂಬುದನ್ನು ಪ್ರಭುತ್ವಗಳು ಸ್ಪಷ್ಟಪಡಿಸಬೇಕಾಗುತ್ತದೆ. ಆಗ ಮಾತ್ರ ಮಹಿಳೆಯರು ಹಾಗೂ ಪುರುಷರಿಬ್ಬರ ಧ್ವನಿಗಳು ಕೇಳಿಬರಲು ಸಾಧ್ಯವಾಗುತ್ತದೆ. ಈ ಕಾರ್ಯ ವಿಧಾನಗಳಲ್ಲಿ ಪ್ರಸ್ತುತತೆ ಹಾಗೂ ಉಚಿತತೆಗನುಗುಣವಾಗಿ ಎಲ್ಲಾ ಪಕ್ಷಗಳು ಭಾಗವಹಿಸಿ ಬೆಂಬಲ ನೀಡಬೇಕಾಗುತ್ತದೆ.

೨.೫ ರಾಷ್ಟ್ರೀಯ ಕಾನೂನು ವ್ಯವಸ್ಥೆಗಳಿಗೆ ಹಾಗೂ ಅವುಗಳ ಸಂಸ್ಥೆಗನುಗುಣವಾಗಿ ಈ ಮಾರ್ಗದರ್ಶಿಕೆಗಳನ್ನು ವ್ಯಾಖ್ಯಾನಿಸಬೇಕಾಗುತ್ತದೆ ಹಾಗೂ ಅನ್ವಯಿಸಬೇಕಾಗುತ್ತದೆ.

## ೩. ಮಾರ್ಗದರ್ಶನ ತತ್ವಗಳು

೩.೧ ಅಂತರ್ ರಾಷ್ಟೀಯ ಮಾನವ ಹಕ್ಕುಗಳ ಗುಣಮಟ್ಟಗಳು, ಜವಾಬ್ಧಾರಿಯುತ ಮೀನುಗಾರಿಕೆಯ ಗುಣಮಟ್ಟಗಳು, ಬದುಕಿನ ಉಳಿವಿಗೆ ಅನುಗುಣವಾದ ಅಭಿವೃದ್ಧಿಯ ಮೇಲೆ ನಡೆದ ಸಂಯುಕ್ತ ರಾಷ್ಟ್ರಗಳ ಅಧಿವೇಶನದಿಂದ (ರಿಯೋ+೨೦) 'ಹೊರಬಂದ ಹೊತ್ತಿಗೆ ನಾವು ಬಯಸುವ ಭವಿಷ್ಯ' ಕ್ಕೆ ಅನುಗುಣವಾದ ರೂಢಿಗಳು ಮತ್ತು ಉಳಿವಿಗನುಗಣವಾದ ಅಭಿವೃದ್ಧಿ, ಕಾನೂನು ಇತರ ಪ್ರಸ್ತುತ ಅಸ್ತ್ರಗಳು, ಮೂಲೆ ಗುಂಪಾದ ಮತ್ತು ಅಂಚಿಗೆ ತಳ್ಳಲ್ಪಟ್ಟ ಗುಂಪುಗಳಿಗೆ ವಿಶೇಷ ಗಮನ ನೀಡುವುದು ಮತ್ತು ಸಾಕಷ್ಟು ಆಹಾರದ ಹಕ್ಕಿನ ಪ್ರಗತಿಪರ ಅರಿವಿಗೆ ಬೆಂಬಲ ನೀಡುವ ಆಧಾರದ ಮೇಲೆ ಈ ಮಾರ್ಗದರ್ಶಿಕೆಗಳು ರೂಪುಗೊಂಡಿವೆ.

೧. **ಮಾನವ ಹಕ್ಕುಗಳು ಮತ್ತು ಘನತೆ:** ಅಂತರ್ಜಾತ ಘನತೆ ಹಾಗೂ ಸಮಾನ ಮತ್ತು ಎಲ್ಲಾ ವ್ಯಕ್ತಿಗಳ ಬೇರ್ಪಡಿಸಲಾಗದ ಮಾನವ ಹಕ್ಕು ಗುರುತಿಸುವುದು, ಸಣ್ಣ- ಪ್ರಮಾಣದ ಮೀನುಗಾರಿಕೆಯ ಮೇಲೆ ಅವಲಂಬಿತವಾದ ಸಮುದಾಯಗಳಿಗೆ ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟ ನಿರ್ಧರಿಸಿರುವ ರೀತಿಯಲ್ಲಿಯೇ ಎಲ್ಲಾ ಪಕ್ಷಗಳು ಅವರನ್ನು ಗುರುತಿಸುವುದು, ಗೌರವಿಸುವುದು, ಮಾನವ ಹಕ್ಕುಗಳ ತತ್ವಗಳು ಹಾಗೂ ಅವುಗಳ ಅನ್ವಯತೆಯನ್ನು ರಕ್ಷಿಸಬೇಕಾಗುತ್ತದೆ, ಅಂತರ್ ರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟಗಳು : ಸಾರ್ವತ್ರಿಕತೆ ಮತ್ತು ಬೇರ್ಪಡಿಸಲಾಗದಿರುವಿಕೆ ; ಅವಿಭಾಜ್ಯತೆ, ಪರಸ್ಪರ ಅವಲಂಬನೆ, ಪರಸ್ಪರ ಸಂಬಂಧ ; ಪಕ್ಷಪಾತವಿಲ್ಲದಿರುವಿಕೆ ಮತ್ತು ಸಮಾನತೆ ; ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆ ; ಹೊಣೆಗಾರತ್ವ, ಕಾನೂನು ಕಟ್ಟಳೆ. ಸಣ್ಣ -ಪ್ರಮಾಣದ ಮೀನುಗಾರಿಕೆಗಳ ಮಾನವ ಹಕ್ಕುಗಳ ಮೇಲೆ ಕೆಲಸ ಮಾಡುವ ಬೆಂಬಲಿಗರನ್ನು ಸರ್ಕಾರಗಳು ಗೌರವಿಸಬೇಕು ಮತ್ತು ಅವರ ಹಕ್ಕುಗಳನ್ನು ರಕ್ಷಿಸಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಸಂಬಂಧಿಸಿದ ಅಥವಾ ಅವರಿಗೆ ಎಡರು ಒಡ್ಡುವ ವಾಣಿಜ್ಯ ವ್ಯಪಾರ ವಹಿವಾಟುದಾರರೂ ಸೇರಿದಂತೆ ಎಲ್ಲಾ ಸರ್ಕಾರೇತರ ಭಾಗಿಗಳು ಸಹ ಮಾನವ ಹಕ್ಕುಗಳನ್ನು ಗೌರವಿಸುವ ಜವಾಬ್ಧಾರಿ ಹೊಂದಿದ್ದಾರೆ. ಅವರು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟ ಮಾನ್ಯತೆ. ಮಾಡುವುದನ್ನು ಸ್ಪಷ್ಟ ಮಾಡಿಕೊಳ್ಳುವುದಕ್ಕೋಸ್ಕರ ಸಣ್ಣ- ಪ್ರಮಾಣದ ಮೀನುಗಾರಿಕೆಯ ಕಾರ್ಯ ಚಟುವಟಿಕೆಯ ವ್ಯಾಪ್ತಿಯನ್ನು ಸರ್ಕಾರ ನಿಯಂತ್ರಿಸಬೇಕಾಗುತ್ತದೆ.

೨. **ಸಂಸ್ಕೃತಿಗಳನ್ನು ಗೌರವಿಸುವುದು:** ಸ್ಥಳೀಯರು ಹಾಗೂ ಜನಾಂಗೀಯ ಅಲ್ಪ ಸಂಖ್ಯಾತರನ್ನೂ ಒಳಗೊಂಡಂತೆ ಸಣ್ಣ-ಪ್ರಮಾಣದ ಮೀನುಗಾರರ ಅಸ್ತಿತ್ವದಲ್ಲಿರುವ ಸಂಸ್ಥೆಗಳ ಸ್ವರೂಪ, ಈ ಸಮುದಾಯದ ಸಾಂಪ್ರದಾಯಿಕ ಮತ್ತು ಸ್ಥಳೀಯ ಜ್ಞಾನ ಮತ್ತು ರೂಢಿಗಳನ್ನು ಗುರುತಿಸುವುದು ಮತ್ತು ಗೌರವಿಸುವುದು, ಅಧಿವೇಶನದ ಅನುಚ್ಛೇಧ ೫ರಲ್ಲಿ ತಿಳಿಸಿರುವ ಮಹಿಳೆಯರ ವಿರುದ್ಧದ ಪಕ್ಷಪಾತಗಳನ್ನು ನಿರ್ಮೂಲನ ಮಾಡುವುದನ್ನು ಪರಿಗಣನೆಗೆ ತೆಗೆ-ದುಕೊಂಡು ಮಹಿಳೆಯರ ನಾಯಕತ್ವ ಪ್ರೋತ್ಸಾಹಿಸುವುದು. (ಸಿ.ಇ.ಡಿ.ಎ.ಡಬ್ಲ್ಯು.)

೩. **ಪಕ್ಷಪಾತವಿಲ್ಲದಿರುವಿಕೆ:** ಯೋಜನೆಗಳಲ್ಲಿ ಹಾಗೂ ರೂಢಿಗಳಲ್ಲಿರುವ ಎಲ್ಲಾ ರೀತಿಯ ಪಕ್ಷಪಾತಗಳ ನಿರ್ಮೂಲನೆಯನ್ನು ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಹೆಚ್ಚಿಸುವುದು.

೪. **ಲಿಂಗ ಸಮಾನತೆ ಹಾಗೂ ಸರ್ವಸಮ್ಮತೆ:** ಇದು ಯಾವುದೇ ಅಭಿವೃದ್ಧಿಗೆ ಮೂಲಭೂತವಾದುದು. ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಮಹಿಳೆಯರ ಮುಖ್ಯ ಪಾತ್ರವನ್ನು ಗುರುತಿಸಿ ಅವರಿಗೆ ಸಮಾನ ಹಕ್ಕು ಹಾಗೂ ಅವಕಾಶಗಳನ್ನು ಬೆಂಬಲಿಸಬೇಕು.

೫. **ಸರ್ವಸಮತೆ ಮತ್ತು ಸಮಾನತೆ:** ಸಮಾನ ಹಕ್ಕುಗಳಿಂದ ಹಿಡಿದು ಮಾನವ ಹಕ್ಕುಗಳ ಸಂಪೂರ್ಣ ಸಂತೋಷವನ್ನೊಳಗೊಂಡಿರುವಂತಹ. ನ್ಯಾಯ ಹಾಗೂ ನಿಷ್ಪಕ್ಷಪಾತ ಧೋರಣೆಯನ್ನು ಎಲ್ಲ ಜನರಿಗೆ ಹಾಗೂ ಎಲ್ಲ ಜನರ ಕಾನೂನಿನಲ್ಲಿ ಮತ್ತು ರೂಢಿಗಳಲ್ಲಿ ಎತ್ತಿಹಿಡಿಯುವುದು. ಇದೇ ಸಂದರ್ಭದಲ್ಲಿ ಮಹಿಳೆಯರು ಹಾಗೂ ಪುರುಷರ ನಡುವೆ ಇರುವ ಭಿನ್ನತೆಗಳನ್ನು ಒಪ್ಪಿಕೊಂಡು ಸಮಾನತೆಯನ್ನು ತರಲು ನಿರ್ಧಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಶೇಷವಾಗಿ ಅಂಚಿಗೆ ತಳ್ಳಲ್ಪಟ್ಟ ಹಾಗೂ ಮೂಲೆ ಗುಂಪಾದ

ಗುಂಪುಗಳಿಗಾಗಿ ಸರ್ವಸಮತೆ ಆದಾಯ ಸಾಧಿಸುವ ಅವಶ್ಯಕತೆ ಇದ್ದಾಗ ಅವರಿಗೆ ಹೆಚ್ಚಿನ ಆದ್ಯತೆ ಧೋರಣೆ ತೋರಿಸಬೇಕು.

೬. **ಸಮಾಲೋಚನೆ ಮತ್ತು ಭಾಗವಹಿಸುವಿಕೆ:** ಭಿನ್ನ ಪಕ್ಷಗಳ ನಡುವೆ ಅಸ್ತಿತ್ವದಲ್ಲಿರುವ ಅಧಿಕಾರದ ಅಸಮತೋಲನಗಳನ್ನು ಗಣನೆಗೆ ತೆಗೆದುಕೊಂಡು, ಮೀನಿನ ಸಂಪನ್ಮೂಲಗಳು, ಹಾಗೂ ಸಣ್ಣ –ಪ್ರಮಾಣದ ಮೀನುಗಾರಿಕೆ ನಡೆಯುವ ಸ್ಥಳ, ಹಾಗೆಯೇ ಪಕ್ಕದಲ್ಲಿರುವ ಭೂ ಭಾಗಗಳ ಸಂಬಂಧಿತ ನಿರ್ಧಾರ ಮಾಡುವ ಕಾರ್ಯ ವಿಧಾನದಲ್ಲಿ ಸ್ಥಳೀಯರ ಹಕ್ಕುಗಳ ಬಗ್ಗೆ ಯು. ಎನ್. ಘೋಷನೆ ಗಣನೆಗೆ ತೆಗೆದುಕೊಂಡು (ಯು.ಎನ್. ಡ್ರಿಪ್) ಸ್ಥಳೀಯರನ್ನೂ ಒಳಗೊಂಡಂತೆ ಸಣ್ಣ –ಪ್ರಮಾಣದ ಮೀನುಗಾರಿಕೆ ಸಮುದಾಯಕ್ಕೆ ಕ್ರಿಯಾತ್ಮಕ, ಸ್ವತಂತ್ರ್ಯ, ಪ್ರಭಾವಿತ, ಅರ್ಥಪೂರ್ಣ ಮತ್ತು ಅರಿವಿರುವ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು. ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುಂಚೆ ಈ ನಿರ್ಧಾರಗಳಿಂದ ತೊಂದರೆಗ ಒಳಗಾಗುವವರಿಂದ ಅವರ ಅಭಿಪ್ರಾಯಗಳನ್ನು ಮತ್ತು ಬೆಂಬಲ ಪಡೆಯುವುದು. ಅವರ ಕೊಡುಗೆಗಳಿಗೆ ಪ್ರತಿಕ್ರಯಿಸುವುದು.

೭. **ಕಾನೂನು ಕಟ್ಟಳೆ:** ಆಯಾ ಭಾಷೆಗಳಲ್ಲಿ ಹೆಚ್ಚು ಪ್ರಚಾರಗೊಂ–ಡ ಕಾನೂನುಗಳ ಮೂಲಕ ಸಣ್ಣ– ಪ್ರಮಾಣದ ಮೀನುಗಾರಿಕೆಗೆ ಕಾನೂನು ಆಧಾರಿತ ದೃಷ್ಟಿಕೋನವನ್ನು ಹೊಂದಿಸುವುದು. ಇವು ಎಲ್ಲರಿಗೂ ಅನ್ವಯಿಸುವ, ಸಮಾನವಾಗಿ ಹೇರುವ, ಸ್ವತಂತ್ರ್ಯವಾಗಿ ಹಾಗೂ ವೈಯಕ್ತಿಕವಾಗಿ ನಿರ್ಣಯ ನೀಡುವುದಾಗಿರುತ್ತವೆ. ಇವುಗಳು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಕರಾರುಗಳ ಜೊತೆ ಸಹಮತ ಹೊಂದಿರುತ್ತವೆ. ಮತ್ತು ಅನ್ವಯಿತವಾಗುವ ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಅಸ್ತ್ರದಲ್ಲಿ ಸ್ವಯಂ ಬದ್ಧತೆಗೆ ಗೌರವವಿರುತ್ತದೆ.

೮. **ಪಾರದರ್ಶಕತೆ:** ಅನ್ವಯವಾಗುವ ಭಾಷೆಗಳಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸುವ ಹಾಗೂ ಹೆಚ್ಚು ಪ್ರಚಾರಗೊಳ್ಳುವ ಯೋಜನೆಗಳು, ಕಾನೂನು. ಕಟ್ಟಳೆಗಳು, ಅನ್ವಯವಾಗುವ ಭಾಷೆಗಳಲ್ಲಿ ಹೆಚ್ಚು ಪ್ರಚಾರವಾದ ನಿರ್ಧಾರಗಳು ಎಲ್ಲರಿಗೂ ದೊರಕಬಲ್ಲ ನಮೂನೆಯಲ್ಲಿ ಇರುವುದು.

೯. **ಹೊಣೆಗಾರಿಕೆ:** ವ್ಯಕ್ತಿಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಸರ್ಕಾರೇತರ ಭಾಗಿಗಳು ಕಾನೂನಿನ ಕಟ್ಟಳೆಯ. ತತ್ವಗಳಿಗನುಗುಣವಾಗಿ ತಮ್ಮ ಕ್ರಿಯೆಗಳಿಗೆ ಹಾಗೂ ನಿರ್ಧಾರಗಳಿಗೆ ಹೊಣೆಗಾರರಾಗಿರುತ್ತಾರೆ.

೧೦. **ಆರ್ಥಿಕ, ಸಾಮಾಜಿಕ ಹಾಗೂ ಪರಿಸರದ ಸುಸ್ಥಿರತೆ:** ಮೀನಿನ ಸಂಪನ್ಮೂಲಗಳ ದುರ್ಬಳಕೆ ಹಾಗೂ ಋಣಾತ್ಮಕ ಪರಿಸರ, ಸಾಮಾಜಿಕ ಹಾಗೂ ಆರ್ಥಿಕ ಪ್ರಭಾವಗಳನ್ನೊಳಗೊಂಡಂತೆ ಎದುರು ನೋಡದ ಫಲಿತಾಂಶಗಳಿಂದ ರಕ್ಷಣೆ ಪಡೆಯಲು ಮುನ್ನೆಚ್ಚರಿಕೆಯ ದೃಷ್ಟಿಕೋನ ಹಾಗೂ ಆಪತ್ತುಗಳ ನಿರ್ವಹಣೆ ಇರುವುದು ಅಗತ್ಯ.

೧೧. **ಸಮಗ್ರ ಹಾಗೂ ಅಂತರ್ಗತ ದೃಷ್ಟಿಕೋನಗಳು:** ಮೀನುಗಾರಿಕೆಗೆ ಪರಿಸರವಾದದ ದೃಷ್ಟಿಕೋನವನ್ನು ಗುರುತಿಸುವುದು (ಇಎಎಫ್) ಒಂದು ಮುಖ್ಯವಾದ ಮಾರ್ಗದರ್ಶನ ತತ್ವವಾಗಿದೆ. ಪರಿಸರದ ಎಲ್ಲಾ ಭಾಗಗಳ ಸುಸ್ಥಿರತೆ ಹಾಗೂ ಸಮಗ್ರತೆಯ ಅಂಶಗಳನ್ನು ಹಾಗೂ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯದ ಜೀವನಾಧಾರಗಳನ್ನು ಒಪ್ಪಿಕೊಳ್ಳುವುದು. ಮತ್ತು ಸಣ್ಣ–ಪ್ರಮಾಣದ ಮೀನುಗಾರರು ಅತ್ಯಂತ ಹತ್ತಿರದಲ್ಲಿ ಬೆಸೆದುಕೊಂಡಿರುವುದರಿಂದ ಹಾಗೂ ಇತರ ಕ್ಷೇತ್ರಗಳ ಮೇಲೆ ಅವಲಂಬಿತರಾಗಿರುವುದರಿಂದ ವಿವಿಧ ಕ್ಷೇತ್ರಗಳ ಸಂಯೋಜನೆ ಹಾಗೂ ಒಗ್ಗೂಡಿಸುವುದು ಮುಖ್ಯವಾಗುತ್ತದೆ.

೧೨. **ಸಾಮಾಜಿಕ ಜವಾಬ್ದಾರಿ:** ಸಮುದಾಯದ ಒಗ್ಗಟ್ಟನ್ನು ಹಾಗೂ ಸಂಘಟಿತ ಮತ್ತು ಕಾರ್ಪೊರೇಟ್ ಜವಾಬ್ದಾರಿಯನ್ನು ಪ್ರೋತ್ಸಾಹಿಸುವುದು. ಭಾಗಿಗಳಲ್ಲಿ ಸಾಮರಸ್ಯ ಬೆಳೆಸುವಂತಹ ಪರಿಸರ ಹುಟ್ಟು ಹಾಕುವುದು.

೧೩. **ಸಂಭವನೀಯ ಆರ್ಥಿಕ ಮತ್ತು ಸಾಮಾಜಿಕ ಹರವುಗಳು:** ಸಣ್ಣ–ಪ್ರಮಾಣದ ಮೀನುಗಾರಿಕೆಯ ಅಭಿವೃದ್ಧಿಗೆ ಹಾಗೂ ಆಡಳಿತ ಅಭಿವೃದ್ಧಿಗೆ ಯೋಜನೆಗಳು, ಕೌಶಲ್ಯಗಳು, ಪ್ರಯತ್ನಗಳು, ಕ್ರಿಯೆಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಿವೇಕಯುತವಾಗಿರುವುದು ಮುಖ್ಯವಾಗುತ್ತದೆ. ವಾಸ್ತವದಲ್ಲಿರುವ ಸ್ಥಿತಿಯಲ್ಲಿ ಜಾರಿಗೊಳಿಸಬಲ್ಲ ಮತ್ತು ಬದಲಾಗುವ ಸಂದರ್ಭಕ್ಕೆ ಹೊಂದಿಕೆಯಾಗುವಂತೆ ಎಂಬುದರ ಅರಿವು ನೀಡುವುದು. ಮತ್ತು ಸಮುದಾಯದ ಮರುಕಟ್ಟುವಿಕೆಯನ್ನು ಬೆಂಬಲಿಸುವುದು.

**೪. ಇತರೇ ಅಂತರರಾಷ್ಟ್ರೀಯ ಅಸ್ತ್ರಗಳ ಜೊತೆಗಿನ ಸಂಬಂಧ**

೪.೧ ಅನ್ವಯವಾಗುವ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಅಸ್ತ್ರಗಳಲ್ಲಿನ ಸ್ವಯಂ ಬದ್ಧತೆಗಳಿಗೆ ಗೌರವ ಸೂಚಿಸುತ್ತಲೇ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾನೂನುಗಳಲ್ಲಿ ಪ್ರಸ್ತುತದಲ್ಲಿರುವ ಹಕ್ಕು ಮತ್ತು ಕರಾರುಗಳ ಸಹಮತದಲ್ಲಿಯೇ ಈ ಮಾರ್ಗದರ್ಶಿಕೆಗಳನ್ನು ವ್ಯಾಖ್ಯಾನಿಸುವುದು ಮತ್ತು ಅನ್ವಯಿಸುವುದು ಮುಖ್ಯವಾಗುತ್ತದೆ. ಮಾನವ ಹಕ್ಕುಗಳನ್ನು, ಜವಾಬ್ದಾರಿಯುತ ಮೀನುಗಾರಿಕೆ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ರಾಷ್ಟ್ರದ, ಪ್ರಾದೇಶಿಕ ಹಾಗೂ ಅಂತರ್ ರಾಷ್ಟ್ರೀಯ ಹಂತದಲ್ಲಿನ ಪ್ರಾರಂಭಿಕೆಗಳಿಗೆ ಇವು ಪೂರಕ ಹಾಗೂ ಬೆಂಬಲವಾಗಿವೆ. ಈ ಅಸ್ತ್ರದ ಪ್ರಕಾರವಾಗಿ ಮಾರ್ಗದರ್ಶಿಕೆಗಳು ಕೋಡ್‌ಗೆ ಪೂರಕವಾಗಿ ಜವಾಬ್ದಾರಿಯುತ ಮೀನುಗಾರಿಕೆ ಹಾಗೂ ಸುಸ್ಥಿರ ಸಂಪನ್ಮೂಲ ಬಳಕೆಗಾಗಿ ರೂಪುಗೊಂಡಿರುವುದು.

೪.೨ ಅಂತರ್ ರಾಷ್ಟ್ರೀಯ ಕಾನೂನಿನ ಕೆಳಗೆ ಸರ್ಕಾರಕ್ಕಿರುವ ಹಕ್ಕು ಅಥವಾ ಕರಾರುಗಳನ್ನು ಮಿತಿಗೊಳಿಸುವ ಅಥವಾ ತುಚ್ಛೀಕರಿಸುವ ರೀತಿಯಲ್ಲಿ ಈ ಮಾರ್ಗದರ್ಶಿಗಳನ್ನು ಓದಬಾರದು. ಈ ಮಾರ್ಗದರ್ಶಿಕೆಗಳು ತಿದ್ದುಪಡಿಗಳನ್ನು ಮಾರ್ಗದರ್ಶನ ಮಾಡಲು ಬಳಸಬಹುದಾಗಿದೆ. ಹಾಗೂ ಹೊಸ ಅಥವಾ ಪೂರಕ ಕಾನೂನುಗಳ ಅಥವಾ ವಿಧಿಬದ್ಧ ನಿಯಂತ್ರಣ ಕರಾರುಗಳಿಗೆ ಸ್ಫೂರ್ತಿದಾಯಕವಾಗಬಹುದಾಗಿದೆ.

# ಭಾಗ ೨

# ಜವಾಬ್ಧಾರಿಯುತ ಮೀನುಗಾರಿಕೆ ಮತ್ತು ಸುಸ್ಥಿರಾತ್ಮಕ ಅಭಿವೃದ್ಧಿ.

**೫. ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಭೂಮಿಯ ಕಾಲಾವಧಿಯ ಆಡಳಿತ ಹಾಗೂ ಸಂಪನ್ಮೂಲಗಳ ನಿರ್ವಹಣೆ**

೫.೧ ಇಂದಿನ ಹಾಗೂ ಭವಿಷ್ಯದ ಪೀಳಿಗೆಗಳ ಅಭಿವೃದ್ಧಿ ಹಾಗೂ ಪರಿಸರದ ಅಗತ್ಯಗಳನ್ನು ಈಡೇರಿಸಲು ಜಲಜೀವವೈವಿಧ್ಯತೆ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಜವಾಬ್ಧಾರಿಯುತ ಹಾಗೂ ಸುಸ್ಥಿರ ಬಳಕೆಯ ಅಗತ್ಯವನ್ನು ಈ ಮಾರ್ಗದರ್ಶಿಕೆಗಳು ಗುರುತಿಸುತ್ತವೆ. ಸಣ್ಣ – ಪ್ರಮಾಣದ ಮೀನುಗಾರಿಕೆಯ ಸಮುದಾಯಗಳು ಭೂಮಿಯ ಗೇಣಿ ಹಕ್ಕನ್ನು[2] ಹೊಂದುವುದು ಸಂಪನ್ಮೂಲಗಳನ್ನು ಬಳಸುವುದಕ್ಕೆ ಮುಖ್ಯವಾಗುತ್ತದೆ. ಇವುಗಳ ಆಧಾರದ ಮೇಲೆಯೇ ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಒಳಿತು, ಅವರ ಜೀವನಾಧಾರಗಳು ಹಾಗೂ ಅವರ ಸುಸ್ಥಿರ ಅಭಿವೃದ್ಧಿಗಳು ರೂಪಿತಗೊಂಡಿರುತ್ತವೆ. ಸಣ್ಣ-ಪ್ರಮಾಣದ ಮೀನುಗಾರರು ಹಾಗೂ ಮೀನಿನ ಕೆಲಸಗಾರ ಮಹಿಳೆಯರು ಹಾಗೂ ಪುರುಷರು ಇದಕ್ಕೆ ಕಾರಣಕರ್ತರಾಗಿರುತ್ತಾರೆ. ಜವಾಬ್ಧಾರಿಯುತ ಮೀನುಗಾರಿಕೆ ಮತ್ತು ಪರಿಸರ ನಿರ್ವಹಣೆಯಿಂದ ಬರುವ ಲಾಭದ ಸರ್ವಸಮಾನ ಹಂಚಿಕೆಯನ್ನು ಮಾರ್ಗದರ್ಶಿಕೆಗಳು ಬೆಂಬಲಿಸುತ್ತವೆ.

**೫ಅ ಭೂಮಿಯ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ**

೫.೨ ಸಣ್ಣ – ಪ್ರಮಾಣದ ಮೀನುಗಾರಿಕೆಗೆ ಅನ್ವಯವಾಗುವ ಭೂಮಿಯ ಕಾಲಾವಧಿ ಮೀನುಗಾರಿಕೆಗೆ ಹಾಗೂ ಅರಣ್ಯ ಇವುಗಳ ಮಾನವ ಹಕ್ಕುಗಳಿಗೆ, ಆಹಾರ ಭದ್ರತೆಗೆ, ಬಡತನ ನಿರ್ಮೂಲನೆಗೆ, ಸುಸ್ಥಿರಾತ್ಮಕ ಜೀವನಾಧಾರಗಳಿಗೆ, ಸಾಮಾಜಿಕ ಸ್ಥಿರತೆಗೆ, ವಾಸದ ಭದ್ರತೆಗೆ, ಆರ್ಥಿಕ ಬೆಳವಣಿಗೆಗೆ ಮತ್ತು ಹಳ್ಳಿ ಮತ್ತು ಸಾಮಾಜಿಕ ಬೆಳವಣಿಗೆಗೆ ಕೇಂದ್ರಬಿಂದು ಎಂಬುದನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು.

೫.೩ ಸಣ್ಣ –ಪ್ರಮಾಣದ ಮೀನುಗಾರರು, ಮೀನಿನ ಕೆಲಸಗಾರರು ಹಾಗೂ ಅವರ ಸಮುದಾಯಗಳು ಭದ್ರತೆ, ಸರ್ವಸಮಾನತೆ ಮತ್ತು ಸಾಮಾಜಿಕ ಹಾಗೂ ಸಂಸ್ಕೃತಿ, ಸೂಕ್ತವಾದ ಮೀನುಗಾರಿಕೆ ಸಂಪನ್ಮೂಲಗಳ ಹಕ್ಕುಗಳು (ಸಮುದ್ರ ಮತ್ತು ಒಳನಾಡುಗಳಲ್ಲಿ) ಹಾಗೂ ಸಣ್ಣ-ಪ್ರಮಾಣದ ಮೀನುಗಾರಿಕೆಯ ಪ್ರದೇಶಗಳು, ಅದಕ್ಕೆ ಹೊಂದಿಕೊಂಡ ಭೂಮಿಗಳ ಹಕ್ಕುಗಳನ್ನು ಹೊಂದಿರಲು ಅವರ ಕಾನೂನಿನನ್ವಯ ಸರ್ಕಾರಗಳು ಭರವಸೆ ನೀಡಬೇಕು. ಇಲ್ಲಿ ವಿಶೇಷವಾಗಿ ಭೂಮಿಯ ಕಾಲಾವಧಿಯ ಹಕ್ಕಿಗೆ ಸಂಬಂಧಿಸಿದಂತೆ ವಿಶೇಷ ಗಮನವನ್ನು ಮಹಿಳೆಯರಿಗೆ ನೀಡಬೇಕು.

೫.೪ ಸಣ್ಣ –ಪ್ರಮಾಣದ ಮೀನುಗಾರ ಸಮುದಾಯಗಳು ಜಲಚರ ಹಾಗೂ ಭೂಮಿ ಮತ್ತು ಸಣ್ಣ-ಪ್ರಮಾಣದ ಮೀನುಗಾರಿಕೆ ಪ್ರದೇಶದ ಸಂಪನ್ಮೂಲಗಳಿಗೆ ಸಾಂಪ್ರದಾಯಕ ಹಕ್ಕುಗಳನ್ನು ಹೊಂದಿದ್ದರೆನ್ನುವುದನ್ನು ಗಣನೆಗೆ ತೆಗೆದುಕೊಂಡು ಸರ್ಕಾರಗಳು ತಮ್ಮ ಕಾನೂನಿನನ್ವಯ ಹಾಗೂ ಇತರ ಭಾಗಿಗಳು ಎಲ್ಲಾ ರೀತಿಯ ನ್ಯಾಯಯುತ ಭೂಮಿಯ ಹಕ್ಕುಗಳನ್ನು ಗುರುತಿಸುವುದು, ಗೌರವಿಸುವುದು, ಹಾಗೂ ರಕ್ಷಣೆ ಮಾಡುವುದು ಅಗತ್ಯವಾಗುತ್ತದೆ. ಯಾವಾಗ ಅಗತ್ಯವೋ ಆಗ ನ್ಯಾಯಯುತ ಹಕ್ಕುಗಳ ವಿವಿಧ ಬಗೆಗಳನ್ನು ರಕ್ಷಿಸಲು ಕಾನೂನು ಮಾಡಬೇಕು. ಮೂಲ ನಿವಾಸಿಗಳು ಹಾಗೂ ಅಲ್ಪ ಸಂಖ್ಯಾತ ಜನಾಂಗವನ್ನು ಒಳಗೊಂಡಂತೆ ನ್ಯಾಯಯುತವಾಗಿ ಭೂಮಿಯ ಹಕ್ಕು ಹೊಂದಿದವರು ಹಾಗೂ ಅವರ ಹಕ್ಕುಗಳನ್ನು ಸರ್ಕಾರಗಳು ಸರಿಯಾದ ಕ್ರಮಗಳಿಂದ ಗುರುತಿಸಿ, ದಾಖಲಿಸಿ, ಗೌರವಿಸಬೇಕಾಗುತ್ತದೆ. ಸಣ್ಣ-ಪ್ರಮಾಣದ ಮೀನುಗಾರಿಕೆ ಸಮುದಾಯದ ಸ್ಥಳೀಯ ರೂಢಿಗಳು, ಕಟ್ಟಳೆಗಳು ಸಾಂಪ್ರದಾಯಕ ಅಥವಾ ಆದ್ಯತೆಗನುಗಣವಾದ ಮೀನುಗಾರಿಕೆಯ ಸಂಪನ್ಮೂಲಗಳು ಹಾಗೂ ಭೂಮಿಯ ಲಭ್ಯತೆಗಳು ಅಂತರರಾಷ್ಟ್ರೀಯ ಮಾನವ ಹಕ್ಕುಗಳಿಗೆ ಸಹಮತ ಹೊಂದುವ ರೀತಿಯಲ್ಲಿಯೇ ಗುರುತಿಸಬೇಕಾಗುತ್ತದೆ, ಗೌರವಿಸಬೇಕಾಗುತ್ತದೆ, ಹಾಗೂ ರಕ್ಷಿಸಬೇಕಾಗುತ್ತದೆ. ದಿ ಯು.ಎನ್. ಡ್ರಿಪ್‌ನ ರಾಷ್ಟ್ರ ಹಾಗೂ ಜನಾಂಗ, ಧಾರ್ಮಿಕ ಹಾಗೂ ಭಾಷಾ ಅಲ್ಪ ಸಂಖ್ಯಾತರಿಗೆ ಸೇರಿದ ಜನರ ಹಕ್ಕುಗಳ ಕುರಿತ ಘೋಷಣೆಗಳನ್ನು ಸೂಕ್ತವಾದ ರೀತಿಯಲ್ಲಿ ಗಣನೆಗೆ ತೆಗೆದುಕೊಳ್ಳಬೇಕು. ಎಲ್ಲಿ ಸಂವಿಧಾನಾತ್ಮಕ ಅಥವಾ ಕಾನೂನು ಸುಧಾರಣೆಗಳು ಮಹಿಳೆಯರ ಹಕ್ಕುಗಳನ್ನು ಬಲಪಡಿಸುತ್ತದೆಯೋ ಅಲ್ಲಿ ಸಮುದಾಯದ ಜೊತೆಗೆ ಘರ್ಷಣೆಗೆ ಇಳಿಯುವಂತೆ ಆಗಿದ್ದರೆ, ಅಲ್ಲಿ ಎಲ್ಲಾ ಭಾಗಿಗಳೂ ಅಂತಹ ಬದಲಾವಣೆಗಳನ್ನು ಸಾಂಪ್ರದಾಯಕ ಗೇಣಿ ಪದ್ಧತಿಯಲ್ಲಿ ಒಳಗೊಳ್ಳಲು ಸಹಕರಿಸಬೇಕು.

೫.೫ ಸ್ಥಳೀಯ ಜಲ ಹಾಗೂ ಕರಾವಳಿಯ ಪರಿಸರಗಳನ್ನು ಸಂಗೋಪನೆ ಮಾಡುವ, ಉಳಿಸುವ, ರಕ್ಷಿಸುವ ಹಾಗೂ ಸಹಭಾಗಿತ್ವದಲ್ಲಿ ನಿರ್ವಹಿಸುವ ಹಂತದಲ್ಲಿನ ಸಣ್ಣ –ಪ್ರಮಾಣದ ಮೀನುಗಾರಿಕೆ ಹಾಗೂ ಮೂಲ ನಿವಾಸಿಗಳ ಪಾತ್ರವನ್ನು ಸರ್ಕಾರಗಳೂ ಗುರುತಿಸಬೇಕು.

೫.೬ ಆರ್ಥಿಕ, ಸಾಮಾಜಿಕ ಹಾಗೂ ಪರಿಸರದ ಗುರಿಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಯಜಮಾನ್ಯ ಹೊಂದಿದ ಅಂದರೆ ಅವರು ನೀರಿನ ಮೇಲೆ ಹಿಡಿತ ಹೊಂದಿದ್ದರೆ (ಮೀನುಗಾರಿಕೆ

[2] ರಾಷ್ಟ್ರೀಯ ಆಹಾರ ಭದ್ರತೆಯ ಸಂದರ್ಭದಲ್ಲಿ ಭೂಮಿಯ ಕಾಲಾವಧಿಯ, ಮೀನುಗಾರಿಕೆಯ, ಹಾಗೂ ಅರಣ್ಯಗಳ ಜವಾಬ್ಧಾರಿಯುತ ಆಡಳಿತಕ್ಕಾಗಿರುವ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳ ಪ್ರಕಾರವಾಗಿ 'ಕಾಲಾವಧಿಯ ಹಕ್ಕು' ಎಂಬ ಪದವನ್ನು ಬಳಸಲಾಗಿದೆ.

ಸಂಪನ್ಮೂಲಗಳೂ) ಅಥವಾ ಭೂಮಿಯ ಮೇಲೆ ಹಿಡಿತ ಹೊಂದಿದ್ದರೆ ಅವರು ಉಪಯೋಗ ಹಾಗೂ ಸಂಪನ್ಮೂಲಗಳ ಗೇಣಿ ಹಕ್ಕನ್ನು ನಿರ್ಧರಿಸುವುದು. ವಿಶೇಷವಾಗಿ ಸಣ್ಣ –ಪ್ರಮಾಣದ ಮೀನುಗಾರಿಕೆಗೆ ಅನ್ವಯವಾಗುವ ರೀತಿಯಲ್ಲಿ ಸಾರ್ವಜನಿಕ ಯಾಜಮಾನ್ಯದ ಸಂಪನ್ಮೂಲಗಳನ್ನು ಒಗ್ಗೂಡಿ ಬಳಸುವ ಹಾಗೂ ನಿರ್ವಹಿಸುವ ರೀತಿಯಲ್ಲಿ ಸರ್ಕಾರಗಳು ಗುರುತಿಸಬೇಕಾಗುತ್ತದೆ ಹಾಗೂ ರಕ್ಷಿಸಬೇಕಾಗುತ್ತದೆ.

೫.೭ ನಿಯಮಾವಳಿಯ ೬.೧೮ರ ಅನುಚ್ಛೇದವನ್ನು ಗಮನಕ್ಕೆ ತೆಗೆದುಕೊಂಡು ಎಲ್ಲಿ ಸೂಕ್ತವೋ ಅಲ್ಲಿ ಸರ್ಕಾರಗಳು ವಿಶೇಷವಾಗಿ ಮೂಲೆಗುಂಪಾದ ಗುಂಪುಗಳನ್ನು ಗಣನೆಗೆ ತೆಗೆದುಕೊಂಡು ಭಿನ್ನ ಗುಂಪುಗಳ ಜನರಿಗೆ ಸರ್ವ ಸಮಾನತ್ವ ಫಲಿತಗಳನ್ನು ಸಾಧಿಸುವ ದೃಷ್ಟಿಕೋನದಿಂದ ಸಣ್ಣ– ಪ್ರಮಾಣದ ಮೀನುಗಾರಿಕೆಗೆ ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ನೀರಿನಲ್ಲಿ ಮೀನು ಹಿಡಿಯುವುದಕ್ಕೆ ಆದ್ಯತೆಯ ಮೇರೆಗೆ ಲಭ್ಯತೆಯನ್ನು ಮಾನ್ಯತೆ ಮಾಡಬೇಕು. ಎಲ್ಲಿ ಸೂಕ್ತವೋ ಅಲ್ಲಿ ನಿರ್ದಿಷ್ಟ ಕ್ರಮಗಳು, ಇತರ ಸಂಗತಿಗಳೊಡನೆ, ಸೃಷ್ಟಿಸುವ ಮತ್ತು ಸಣ್ಣ –ಪ್ರಮಾಣದ ಮೀನುಗಾರಿಕೆಗಾಗಿ ಇರುವ ವಲಯಗಳು ಎಂದು ಸಾರುವುದನ್ನು ಪರಿಗಣಿಸಬೇಕು. ಮೂರನೇ ಜಗತ್ತುಗಳು ಹಾಗೂ ಮೂರನೇ ಪಕ್ಷಗಳ ಜೊತೆ ಸಂಪನ್ಮೂಲಗಳ ಲಭ್ಯತೆಯ ಒಪ್ಪಂದಗಳನ್ನು ಮಾಡಿಕೊಳ್ಳುವ ಮುಂಚೆ ಸಣ್ಣ –ಪ್ರಮಾಣದ ಮೀನುಗಾರಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕು.

೫.೮ ರಾಷ್ಟ್ರೀಯ ಆಹಾರ ಭದ್ರತೆಯ ಹಿನ್ನಲೆಯಲ್ಲಿ ಭೂಮಿಯ ಕಾಲಾವಧಿಯ, ಮೀನುಗಾರಿಕೆಯ ಹಾಗೂ ಅರಣ್ಯಗಳ ಜವಾಬ್ದಾರಿಯುತ ಆಡಳಿತದ ಬಗ್ಗೆ ಮಾರ್ಗದರ್ಶಿಕೆಗಳಲ್ಲಿರುವ ನಿಯಮಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತವಾಗಿರುವ ಹಾಗೆ ಮರುಹಂಚಿಕೆಯ ಸುಧಾರಣೆಗಳನ್ನೂ ಒಳಗೊಂಡಂತೆ ಸಣ್ಣ ಪ್ರಮಾಣದ ಮೀನುಗಾರಿಕೆ ಸಮುದಾಯಗಳಿಗೆ ಮೀನುಗಾರಿಕೆ ಸಂಪನ್ಮೂಲಗಳ ಸರ್ವ ಸಮಾನ ಲಭ್ಯತೆಯನ್ನು ಸಿಗುವಂತೆ ಮಾಡಲು ಸರ್ಕಾರಗಳು ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

೫.೯ ಸಣ್ಣ –ಪ್ರಮಾಣದ ಮೀನುಗಾರಿಕೆ ಸಮುದಾಯವನ್ನು ಇಚ್ಛಾನುಸಾರ ಅಟ್ಟಿಬಿಡುವುದು, ಅವರ ನ್ಯಾಯಯುತ ಭೂಮಿಯ ಕಾಲಾವಧಿಯ ಹಕ್ಕುಗಳನ್ನು ಮೊಟಕಾಗಿಸುವುದು, ಅಥವಾ ನಂದಿಹೋಗುವುದಕ್ಕೆ ಬಿಡುವುದಿಲ್ಲ ಎಂಬುದರ ಭರವಸೆಯನ್ನು ಸರ್ಕಾರಗಳು ನೀಡಬೇಕು. ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಾಗಗಳ ಒಳಗೇ ಬೇರೆಯವರಿಂದ ಸ್ಪರ್ಧೆ ಹೆಚ್ಚುತ್ತಿರುವುದನ್ನು ಪ್ರಭುತ್ವಗಳು ಗುರುತಿಸಬೇಕು. ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳು, ವಿಶೇಷವಾಗಿ ಮೂಲೆ ಗುಂಪಾದವರು ಹಾಗೂ ಅಂಚಿಗೆ ತಳ್ಳಲ್ಪಟ್ಟವರು ಬೇರೆ ಕ್ಷೇತ್ರಗಳ ಜೊತೆಗಿನ ಘರ್ಷಣೆಗಳಲ್ಲಿ ದುರ್ಬಲರಾಗಿರುತ್ತಾರೆ. ಹಾಗಾಗಿ ಅಭಿವೃದ್ಧಿ ಹಾಗೂ ಇತರ ಕ್ಷೇತ್ರಗಳ ಚಟುವಟಿಕೆಯಿಂದ ಸಣ್ಣ–ಪ್ರಮಾಣದ ಮೀನುಗಾರಿಕೆಯಲ್ಲಿರುವವರ ಬದುಕಿನಾಧಾರಗಳು ಅಪಾಯದ ಅಂಚಿಗೆ ತಲುಪುವದರಿಂದ ಇವರಿಗೆ ವಿಶೇಷವಾದ ಬೆಂಬಲ ಬೇಕಾಗುತ್ತದೆ.

೫.೧೦ ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಸಣ್ಣ –ಪ್ರಮಾಣದ ಮೀನುಗಾರಿಕೆಯ ಮೇಲೆ ಪರಿಣಾಮ ಬೀರುವ ದೊಡ್ಡ ಪ್ರಮಾಣದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ಮೊದಲು ರಾಷ್ಟ್ರದ ಕಾನೂನಿನ ಪರಿಧಿಯಲ್ಲಿಯೇ ಪರಿಣಾಮದ ಅಧ್ಯಯನಗಳು, ಹಾಗೂ ಅರ್ಥಪೂರ್ಣ ಸಮಾಲೋಚನೆಯನ್ನು ಈ ಸಮುದಾಯಗಳ ಜೊತೆ ಮಾಡಬೇಕು.

೫.೧೧ ಮೂಲೆ ಗುಂಪಾದ ಹಾಗೂ ಅಂಚಿಗೆ ಒತ್ತರಿಸಲ್ಪಟ್ಟ ಜನರನ್ನು ಒಳಗೊಂಡಂತೆ ಸಣ್ಣ– ಪ್ರಮಾಣದ ಮೀನುಗಾರಿಕೆಯ ಸಮುದಾಯಗಳು ಹಾಗೂ ವ್ಯಕ್ತಿಗಳಿಗೆ ನಿಷ್ಪಕ್ಷಪಾತ, ಹಾಗೂ ಅಧಿಕಾರಯುತ ಕಾನೂನು, ಮತ್ತು ಆಡಳಿತಾತ್ಮಕ ಅಂಗಗಳಿಂದ ನಿಯಮಾನುಸಾರದ ಲಭ್ಯತೆ ಕೊಡುವುದು; ರಾಷ್ಟ್ರೀಯ ಕಾನೂನಿನ ಚೌಕಟ್ಟಿನಲ್ಲಿ ಪರಿಣಾಮಕಾರಿ ಹಾಗೂ ಕೈ ಗೆಟಕುವ ರೀತಿಯಲ್ಲಿ ಭೂಮಿಯ ಹಕ್ಕುಗಳ ವಿವಾದಗಳನ್ನು ಬಗೆ ಹರಿಸುವುದು, ಪರ್ಯಾಯ ಮಾರ್ಗಗಳ ಮೂಲಕ ಇಂತಹ ವಿವಾದಗಳಿಗೆ ಪರಿಣಾಮಕಾರಿ ಪರಿಹಾರ ಕೊಡುವುದು, ಮನವಿ ಮಾಡಲು ಹಕ್ಕು ಭಾಧ್ಯತೆ ನೀಡುವುದು, ಪರಿಹಾರಗಳನ್ನು ರಾಷ್ಟ್ರೀಯ ಚೌಕಟ್ಟಿನ ಒಳಗೆ ಜಾಗ್ರತೆಯಾಗಿ ತರಲು ಒತ್ತಾಯ, ಹಾಗೂ ನಷ್ಟ ಕಾಯುವ, ನಷ್ಟ ತುಂಬುವ, ನ್ಯಾಯದ ಪರಿಹಾರ ಹಾಗೂ ದುರಸ್ತಿಗಳನ್ನು ಒಳಗೊಂಡಿರಬೇಕು.

೫.೧೨ ಮೀನಿನ ಸಂಪನ್ಮೂಲಗಳ ಸುಸ್ಥಿರತೆಯನ್ನು ಗಣನೆಗೆ ತೆಗೆದುಕೊಂಡು ಪ್ರಕೃತಿ ವಿಕೋಪ ಅಥವಾ ಯುದ್ಧ ಪಡೆಗಳ ಘರ್ಷಣೆಯಿಂದ ಸ್ಥಳಾಂತರಗೊಂಡ ಸಣ್ಣ –ಪ್ರಮಾಣದ ಮೀನುಗಾರರಿಗೆ ಸಾಂಪ್ರದಾಯಕ ಮತ್ತು ಕರಾವಳಿ ಪ್ರದೇಶಗಳಲ್ಲಿ ಲಭ್ಯತೆ ಸಿಗುವಂತೆ ಸರ್ಕಾರಗಳು ಶ್ರಮಿಸಬೇಕು. ಮಾನವ ಹಕ್ಕುಗಳ ಧಾರುಣ ಚ್ಯುತಿಯಿಂದ ನೋವನ್ನುಂಡ ಮೀನುಗಾರಿಕೆ ಸಮುದಾಯಗಳಿಗೆ ಅವರ ಬದುಕನ್ನು ಹಾಗೂ ಜೀವನಾಧಾರಗಳನ್ನು ಹೊಸದಾಗಿ ಕಟ್ಟಿಕೊಳ್ಳಲು ಸರ್ಕಾರಗಳು ಕೆಲವು ವ್ಯವಸ್ಥೆ ರೂಪಿಸಬೇಕು. ಈ ಹೆಜ್ಜೆಗಳಲ್ಲಿ ಯುದ್ಧ ಪಡೆಗಳ ಘರ್ಷಣೆಯಲ್ಲಾಗಲಿ, ಅಥವಾ ಪ್ರಕೃತಿಯ ವಿಕೋಪದಲ್ಲಾಗಲೀ ಭೂಮಿ ಹಕ್ಕುಗಳ ಪ್ರಶ್ನೆ ಬಂದಾಗ ಮಹಿಳೆಯರ ಬಗ್ಗೆ ಇರುವ ಪಕ್ಷಪಾತಗಳನ್ನು ನಿರ್ಮೂಲನ ಮಾಡುವುದನ್ನೂ ಒಳಗೊಂಡಿರಬೇಕು.

**5ಆ ಸುಸ್ಥಿರಾತ್ಮಕ ಸಂಪನ್ಮೂಲಗಳ ಆಡಳಿತ ವ್ಯವಸ್ಥೆ**

೫.೧೩ ಮೀನಿನ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ಧೀರ್ಘಕಾಲಾವಧಿಯ ಸಂಗೋಪನೆ ಮತ್ತು ಆಹಾರ ಉತ್ಪಾದನೆಗೆ ಪರಿಸರ ನೆಲೆಗಟ್ಟನ್ನು ಪಡೆದುಕೊಳ್ಳುವದಕ್ಕೋಸ್ಕರ ಪ್ರಭುತ್ವಗಳು ಹಾಗೂ ಮೀನುಗಾರಿಕೆ ನಿರ್ವಹಣೆಯಲ್ಲಿ ಭಾಗಿಗಳಾದವರೆಲ್ಲರೂ

ಕಲವು ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರರ ಅಗತ್ಯಗಳಿಗೆ ಹಾಗೂ ಅವಕಾಶಗಳಿಗೆ ಕೊಡಬೇಕಾದ ಮಹತ್ವವನ್ನು ನೀಡುವ ಕೋಡ್ ಒಳಗೊಂಡಂತೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾನೂನು ಮತ್ತು ಸ್ವಯಂಪ್ರೇರಿತ ಬದ್ಧತೆಗಳ ಬಗ್ಗೆ ಅಸ್ತಿತ್ವದಲ್ಲಿರುವ ಮುಲಾಜುಗಳ ಸಹಯೋಗದಲ್ಲಿಯೇ ಅವರು ಸೂಕ್ತವಾದ ಆಡಳಿತ ವ್ಯವಸ್ಥೆಯನ್ನು ಉತ್ತೇಜನಗೊಳಿಸಬೇಕಾಗುತ್ತದೆ.

೫.೧೪ ಹಕ್ಕುಗಳು ಹಾಗೂ ಜವಾಬ್ಧಾರಿಗಳು ಒಟ್ಟಿಗಿರುತ್ತವೆ. ಭೂಮಿಯ ಕಾಲಾವಧಿಯ ಹಕ್ಕುಗಳು ಕರ್ತವ್ಯಗಳನ್ನು ಒಳಗೊಂಡಿರುತ್ತವೆ ಎಂಬುದನ್ನು ಮತ್ತು ಮೀನಿನ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಆಹಾರ ಉತ್ಪಾದನೆಗೆ ಪರಿಸರದ ನೆಲೆಗಟ್ಟಿನ ನಿರ್ವಹಣೆಯನ್ನು ಎಲ್ಲಾ ಭಾಗಿಗಳೂ ಗುರುತಿಸಬೇಕು. ಜಲ ಪರಿಸರಕ್ಕೆ ಹಾಗೂ ಇದಕ್ಕೆ ಹೊಂದಿಕೊಂಡ ಜಲಚರಗಳಿಗೆ ಮತ್ತು ಸಂಪನ್ಮೂಲಗಳ ಸುಸ್ಥಿರತೆಯ ಬೆಂಬಲಕ್ಕೆ ಅಪಾಯದ ಮಟ್ಟವನ್ನು ನಿಕೃಷ್ಟಗುಳಿಸುವ ರೀತಿಯ ಮೀನುಗಾರಿಕೆಯ ರೂಢಿಗಳನ್ನು ಸಣ್ಣ– ಪ್ರಮಾಣದ ಮೀನುಗಾರರು ಬಳಸಬೇಕು.

೫.೧೫ ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳು ತಮ್ಮ ಒಳಿತಿಗೆ ಅವಲಂಬಿತವಾಗಿರುವ ಹಾಗೂ ತಮ್ಮ ಜೀವನಾಧಾರಗಳಿಗೆ ಸಾಂಪ್ರದಾಯಕವಾಗಿ ಬಳಸುತ್ತಾ ಬಂದಿರುವ ಸಂಪನ್ಮೂಲಗಳ ನಿರ್ವಹಣೆ ಹಾಗೂ ಅದರ ನ್ಯಾಯಯುತ ಭೂಮಿಯ ಕಾಲಾವಧಿಯ ಹಕ್ಕು ಮತ್ತು ವ್ಯವಸ್ಥೆಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರಗಳು ಸಣ್ಣ–ಪ್ರಮಾಣದ ಮೀನುಗಾರರನ್ನು ತರಬೇತುಗೊಳಿಸಿ, ಬೆಂಬಲಿಸಿ ಅವರು ಭಾಗವಹಿಸುವುದಕ್ಕೆ ಹಾಗೂ ಜವಾಬ್ಧಾರಿ ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕು. ಹಾಗೆಯೇ ಅವರ ಜೀವನಾಧಾರಗಳಿಗೆ ಪೆಟ್ಟು ನೀಡುವಂತಹ –ರಕ್ಷಿತ ವಲಯಗನ್ನಳೊಗೊಂಡಂತೆ ಯೋಜನೆಯಲ್ಲಿ, ಮಾದರಿ ನಕ್ಷೆಗಳಲ್ಲಿ ಸೂಕ್ತವೆನಿಸುವ ಆಡಳಿತ ಕ್ರಮಗಳ ಜಾರಿಗೊಳಿಸುವಿಕೆಯಲ್ಲಿ ಮಹಿಳೆಯರ, ಮೂಲೆ ಗೊಂಪಾದವರ, ಹಾಗೂ ಅಂಚಿಗೆ ಒತ್ತರಿಸಲ್ಪಟ್ಟವರ ಸರ್ವ ಸಮಾನ ಭಾಗತ್ವಕ್ಕೆ ವಿಶೇಷ ಗಮನ ನೀಡುತ್ತಾ ಪ್ರಭುತ್ವಗಳು ಸಣ್ಣ– ಪ್ರಮಾಣದ ಮೀನುಗಾರರ ಸಮುದಾಯವನ್ನು ಒಳಗೊಳ್ಳಬೇಕಾಗುತ್ತದೆ. ರಾಷ್ಟ್ರೀಯ ಕಾನೂನಿನ ಹಿನ್ನಲೆಯಲ್ಲಿ ಸಹ ಆಡಳಿತದ ಜೊತೆ ಭಾಗವಹಿಸುವಂತಹ ವ್ಯವಸ್ಥಾಪಕ ವ್ಯವಸ್ಥೆಯನ್ನು ಉತ್ತೇಜಿಸಬೇಕಾಗುತ್ತದೆ.

೫.೧೬ ಸಣ್ಣ–ಪ್ರಮಾಣದ ಮೀನುಗಾರಿಕೆಗೆ ಅನ್ವಯಿಸುವ ಹಾಗೂ ಸೂಕ್ತವಾದ ಮೇಲ್ವಿಚಾರಣೆ, ಹಿಡಿತ ಹಾಗೂ ಕಣ್ಗಾವಲುಗಳನ್ನು ರಚಿಸುವುದನ್ನು, ಅಥವಾ ಅಸ್ತಿತ್ವದಲ್ಲಿ ಇರುವವುಗಳನ್ನು ಜಾರಿಗೊಳಿಸುವುದಕ್ಕೆ ಉತ್ತೇಜಿಸಬೇಕು. ಸಹ ವ್ಯವಸ್ಥಾಪಕ ವ್ಯವಸ್ಥೆಗಳ ಹಿನ್ನಲೆಯಲ್ಲಿ ಸೂಕ್ತವೆನಿಸುವ ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಾಗಿಗಳನ್ನು ಒಳಗೊಳ್ಳುವ ಹಾಗೂ ಭಾಗಿಯಾಗುವ ಹಂತದಲ್ಲಿನ ಸಿದ್ಧತೆಗಳನ್ನು ಪ್ರೋತ್ಸಾಹಿಸುವ ಭಾಗಿತ್ವದ ವ್ಯವಸ್ಥಾಪಕ ವ್ಯವಸ್ಥೆಗಳನ್ನು ಉತ್ತೇಜಿಸಬೇಕು. ಸಮುದ್ರ ಹಾಗೂ ಒಳನಾಡಿನ ಪರಿಸರಗಳ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರುವ ಎಲ್ಲಾ ರೀತಿಯ ಅನ್ಯಾಯಯುತ ಅಥವಾ ನಾಶ ಮಾಡುವಂತಹ ಮೀನುಗಾರಿಕೆಯ ರೂಢಿಗಳನ್ನು ತಡೆಯುವ ಹಾಗೂ ಅವುಗಳನ್ನು ನಿರ್ಮೂಲನ ಮಾಡಲು ಪ್ರಭುತ್ವಗಳು ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ರಚನೆಗಳನ್ನು ಮಾಡಬೇಕಾಗುತ್ತದೆ. ಮೀನುಗಾರಿಕೆ ಚಟುವಟಿಕೆಯ ನೋಂದಣಿಗಳನ್ನು ಹೆಚ್ಚಿಸಲು ಪ್ರಭುತ್ವಗಳು ಪರಿಶ್ರಮ ಪಡಬೇಕು. ಸಣ್ಣ– ಪ್ರಮಾಣದ ಮೀನುಗಾರರು ಮೇಲ್ವಿಚಾರಣೆ, ಹಿಡಿತ ಹಾಗೂ ಕಣ್ಗಾವಲಿನ ವ್ಯವಸ್ಥೆಯನ್ನು ಬೆಂಬಲಿಸುವುದಲ್ಲದೇ ಈ ಚಟುವಟಿಕೆಗಳ ನಿರ್ವಹಣೆಗೆ ಅಗತ್ಯವಾದ ಮಾಹಿತಿಗಳನ್ನು ನೀಡಬೇಕು.

೫.೧೭ ಭಾಗವಹಿಸುವಿಕೆ ಹಾಗೂ ನ್ಯಾಯಯುತವಾಗಿ ಬೆಂಬಲಿತವಾದ ಕಾರ್ಯ ವಿಧಾನದ ಮೂಲಕ ಸಂಬಂಧಪಟ್ಟ ಪಕ್ಷಗಳು ಹಾಗೂ ಭಾಗಿಗಳಲ್ಲಿ ಆಡಳಿತಾತ್ಮಕ ಸಿದ್ಧತೆಗಳು ಸ್ಪಷ್ಟವಾಗಿವೆ ಹಾಗೂ ಒಪ್ಪಿಗೆಯಾಗಿವೆ ಎನ್ನುವ ಹಿನ್ನಲೆಯಲ್ಲಿ ಅವರ ಪಾತ್ರಗಳು ಹಾಗೂ ಜವಾಬ್ಧಾರಿಯನ್ನು ಪ್ರಭುತ್ವಗಳು ದೃಢಪಡಿಸಬೇಕಾಗುತ್ತದೆ. ಒಪ್ಪಿಕೊಂಡ ವ್ಯವಸ್ಥಾತ್ಮಕ ಪಾತ್ರಗಳನ್ನು ನಿರ್ವಹಿಸುವುದು ಎಲ್ಲಾ ಪಕ್ಷಗಳ ಕರ್ತವ್ಯವಾಗಿದೆ. ಎಲ್ಲಾ ಪ್ರಯತ್ನಗಳನ್ನೂ ಕಾರ್ಯಗತಗೊಳಿಸಬೇಕು. ಇದರಿಂದ ಸಣ್ಣ– ಪ್ರಮಾಣದ ಮೀನುಗಾರಿಕೆಯನ್ನು ಸ್ಥಳೀಯ ಹಾಗೂ ರಾಷ್ಟ್ರೀಯ ಹಂತದಲ್ಲಿನ ಸಂಸ್ಥೆಗಳಲ್ಲಿ, ಮೀನುಗಾರಿಕೆ ವಿಭಾಗಗಳಲ್ಲಿ ಪ್ರತಿನಿಧಿಸುವುದಕ್ಕೆ ಅನುಕೂಲವಾಗುತ್ತದೆ, ಹಾಗೂ ಸೂಕ್ತವಾದ ನಿರ್ಧಾರ ಮಾಡುವಲ್ಲಿ ಕ್ರಿಯಾತ್ಮಕ ಪಾತ್ರ ವಹಿಸುವುದಕ್ಕೆ ಮತ್ತು ಮೀನುಗಾರಿಕೆ ಯೋಜನೆಗಳ ರೂಪಿಸುವ ಕಾರ್ಯ ವಿಧಾನದಲ್ಲಿ ಭಾಗವಹಿಸುವುದಕ್ಕೆ ಕೂಡಾ ಸಹಾಯಕವಾಗುತ್ತದೆ.

೫.೧೮ ಸಹ ಆಡಳಿತ ವ್ಯವಸ್ಥೆಯಲ್ಲಿ ಹಾಗೂ ಜವಾಬ್ಧಾರಿಯುತ ಮೀನುಗಾರಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮೀನು ಹಿಡಿಯುವ, ಹಿಡಿದಾದ ಮೇಲೆ ಹಾಗೂ ನಂತರದ ಕ್ರಿಯೆಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆ ಹಾಗೂ ಪುರುಷರ ಭಾಗವಹಿಸುವಿಕೆ ಹಾಗೂ ಅವರ ಜ್ಞಾನ, ದೃಷ್ಟಿಕೋನ, ಅಗತ್ಯಗಳ ಕುರಿತು ಕೊಡುಗೆ ನೀಡುವುದನ್ನು ಪ್ರಭುತ್ವಗಳು ಪ್ರೋತ್ಸಾಹಿಸಿ ಬೆಂಬಲಿಸಬೇಕು. ಮಹಿಳೆಯರ ಸರ್ವಸಮ್ಮತ ಭಾಗವಹಿಸುವಿಕೆಯ ಅಗತ್ಯವನ್ನು ಮನಗಾಣಿಸುವುದಕ್ಕೋಸ್ಕರ ಎಲ್ಲಾ ಪಕ್ಷಗಳು ವಿಶೇಷವಾದ ಕ್ರಮಗಳ ಮಾದರಿ ನಕ್ಷೆ ಮಾಡಿ ಈ ಗುರಿಗಳನ್ನು ಸಾಧಿಸಬೇಕು.

೫.೧೯ ನೀರಿನ ಹಾಗೂ ಮೀನುಗಾರಿಕೆ ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಹಂತದಲ್ಲಿ ಗಡಿಯಾಚೆಯ ಅಥವಾ ಇತರ ಸಮಸ್ಯೆಗಳಿದ್ದಾಗ ಸಣ್ಣ– ಪ್ರಮಾಣದ ಮೀನುಗಾರಿಕೆಯ ಸಮುದಾಯಗಳಿಗೆ ಅನುಮತಿಯಿತ್ತ ಕಾಲಾವಧಿಯ ಹಕ್ಕುಗಳು ರಕ್ಷಿಸಲ್ಪಡುತ್ತವೆ ಎಂಬುದರ ಭರವಸೆ ನೀಡಲು ಸರ್ಕಾರಗಳು ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ.

೫.೨೦ ಸಣ್ಣ– ಪ್ರಮಾಣದ ಮೀನುಗಾರರ ಮೇಲೆ ಹೆಚ್ಚು ಮೀನು ಹಿಡಿಯುವ ಹಾಗೂ ಸಂಪನ್ಮೂಲಗಳನ್ನು ಶೋಷಣೆ ಮಾಡುವಂತಹ ಕೆಟ್ಟ ಪರಿಣಾಮ ಬೀರುವ ಯೋಜನೆಗಳು ಹಾಗೂ ಹಣಕಾಸಿನ ಕ್ರಮಗಳಿಗೆ ಪ್ರಭುತ್ವವು ಮನ್ನಣೆ ಮಾಡಬಾರದು.

## ೬. ಸಾಮಾಜಿಕ ಅಭಿವೃದ್ಧಿ, ಉದ್ಯೋಗ ಮತ್ತು ಯೋಗ್ಯ ಕೆಲಸ

೬.೧ ಜೀವನಾಧಾರಗಳ ಸಂಕೀರ್ಣತೆಯನ್ನು ಗಣನೆಗೆ ತೆಗೆದುಕೊಂಡು ಸಣ್ಣ – ಪ್ರಮಾಣದ ಮೀನುಗಾರರ ನಿರ್ವಹಣೆ ಹಾಗೂ ಅಭಿವೃದ್ಧಿಯ ಸಮಗ್ರ, ಪರಿಸರಾತ್ಮಕ ಹಾಗೂ ಸಂಪೂರ್ಣ ದೃಷ್ಟಿಕೋನವನ್ನು ಎಲ್ಲಾ ಪಕ್ಷಗಳೂ ಪರಿಗಣಿಸಬೇಕು. ಸಣ್ಣ –ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಸಬಲರಾಗಿದ್ದಾರೆ ಹಾಗೂ ಎಲ್ಲಾ ಮಾನವ ಹಕ್ಕುಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಲು ಸಲ್ಲಬೇಕಾದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಸರಿಯಾದ ಗಮನ ಕೊಡುವ ಅಗತ್ಯವಿದೆ.

೬.೨ ಮೀನುಗಾರಿಕೆ ಸಂಪನ್ಮೂಲಗಳಿಗೆ ಅಧಿಕ ಮೌಲ್ಯವನ್ನು ನೀಡುವ ಹಾಗೂ ತಿಳುವಳಿಕೆ ಉಂಟುಮಾಡುವ ಆರೋಗ್ಯ, ಶಿಕ್ಷಣ, ಸಾಕ್ಷರತೆ, ತಾಂತ್ರಿಕತೆ ಒಳಗೊಳ್ಳುವಿಕೆ, ಮತ್ತು ಇತರ ತಾಂತ್ರಿಕ ಕೌಶಲ್ಯಗಳಂತ ಮಾನವ ಸಂಪನ್ಮೂಲಗಳಲ್ಲಿ ಪ್ರಭುತ್ವಗಳು ಹೂಡಿಕೆಯನ್ನು ಉತ್ತೇಜಿಸಬೇಕು. ಸಮರ್ಪಕ ಮನೆ, ಸುರಕ್ಷಿತ ಹಾಗೂ ನೈರ್ಮಲ್ಯಯುತ ಆರೋಗ್ಯ ರಕ್ಷಣೆ ಒಳಗೊಂಡಂತೆ ಇಂಧನ ಸಂಪನ್ಮೂಲಗಳು, ವೈಯಕ್ತಿಕ ಹಾಗೂ ಮನೆಯ ಬಳಕೆಗೆ ಕುಡಿಯುವ ನೀರು – ರಾಷ್ಟ್ರ ಹಾಗೂ ಉಪರಾಷ್ಟ್ರಗಳ ಕಾರ್ಯ ಚಟುವಟಿಕೆಗಳ ಮೂಲಕ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಈ ಮೇಲಿನವುಗಳನ್ನು ಹಾಗೂ ಇತರ ಅಗತ್ಯ ಸೇವೆಗಳಿಗೆ ಶಕ್ತಾನುಸಾರ ಲಭ್ಯತೆ ಹೊಂದಿದ್ದಾರೆ ಎಂಬುದನ್ನು ಪ್ರಗತಿಪರವಾಗಿ ದೃಢಪಡಿಸುವ ದೃಷ್ಟಿಕೋನದಿಂದ ಪ್ರಭುತ್ವವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಿ ಅಗತ್ಯವಿದೆಯೋ ಅಲ್ಲಿ ಸರ್ವಸಮಾನ ಲಾಭಗಳನ್ನು ಸ್ಪಷ್ಟಪಡಿಸುವುದಕ್ಕೋಸ್ಕರ ಸೇವೆಗಳನ್ನು ಒದಗಿಸುವುದರಲ್ಲಿ ಭೇದ–ಭಾವವಿರದ ಹಾಗೂ ಇತರ ಮಾನವ ಹಕ್ಕುಗಳನ್ನು ಜಾರಿಗೊಳಿಸುವಲ್ಲಿ ಆದ್ಯತೆಯ ಮೇರೆಗೆ ಮಹಿಳೆಯರು, ಮೂಲ ನಿವಾಸಿಗಳು, ಮತ್ತು ಮೂಲೆ ಗುಂಪಾದ ಮತ್ತು ಅಂಚಿಗೆ ಒತ್ತರಿಸಲ್ಪಟ್ಟವರಿಗೆ ಮಹತ್ವ ನೀಡುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ ಹಾಗೂ ಉತ್ತೇಜಿಸಬೇಕಾಗುತ್ತದೆ.

೬.೩ ಸಣ್ಣ–ಪ್ರಮಾಣದ ಮೀನುಗಾರಿಕೆಯ ಕೆಲಸಗಾರರಿಗೆ ಪ್ರಭತ್ವಗಳು ಸಾಮಾಜಿಕ ಭದ್ರತೆಯನ್ನು ಪ್ರೋತ್ಸಾಹಿಸಬೇಕಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರಿಕೆಯ ಗುಣಲಕ್ಷಣಗಳನ್ನು ಗಮನಕ್ಕೆ ತೆಗೆದುಕೊಂಡು ಭದ್ರತಾ ಯೋಜನೆಗಳನ್ನು ಇಡೀ ಮೌಲಿಕ ಕೊಂಡಿಗಳಿಗೆ ಅನ್ವಯಿಸುವುದನ್ನು ಪ್ರಭುತ್ವಗಳು ಉತ್ತೇಜಿಸಬೇಕಾಗುತ್ತದೆ.

೬.೪ ಉಳಿತಾಯ, ಸಾಲ, ಹಾಗೂ ವಿಮಾ ಯೋಜನೆಗಳಂತಹ ಉದಾಃಹರಣಾತ್ಮಕ ಸೇವೆಗಳ ಲಭ್ಯತೆಯನ್ನು ಮಹಿಳೆಯರಿಗೆ ದೊರಕಿಸಿ ಕೊಡುವುದರ ಮೇಲೆ ವಿಶೇಷ ಒತ್ತು ನೀಡಿ ಸಣ್ಣ– ಪ್ರಮಾಣದ ಮೀನುಗಾರುಕೆ ಸಮುದಾಯಗಳಿಗೆ ಸೂಕ್ತವಾದ ಬೆಳವಣಿಗೆ ಹಾಗೂ ಸೇವೆಗಳ ಲಭ್ಯತೆಯನ್ನು ಪ್ರಭತ್ವಗಳು ಬೆಂಬಲಿಸಬೇಕಾಗುತ್ತದೆ.

೬.೫ ಜಲ ಪರಿಸರದಲ್ಲಿ ಅಥವಾ ಭೂಮಿಯ ಮೇಲೆ ಮಹಿಳೆಯರು ಅಥವಾ ಪುರುಷರು ಮಾಡುವ ಮೀನುಗಾರಿಕೆಯ ಮೌಲಿಕ ಕೊಂಡಿಗಳ ಎಲ್ಲಾ ಚಟುವಟಿಕೆಗಳಲ್ಲಿ ಅದು ಮೀನು ಹಿಡಿಯುವ ಮೊದಲು ಅಥವಾ ಆನಂತರದ್ದಾಗಿರಬಹುದು, ಇವುಗಳನ್ನು ಆರ್ಥಿಕ ಹಾಗೂ ಔದ್ಯೋಗಿಕ ಪ್ರಕ್ರಿಯೆಗಳೆಂದು ಪ್ರಭುತ್ವವು ಗುರುತಿಸಬೇಕು. ಎಲ್ಲಾ ಚಟುವಟಿಕೆಗಳನ್ನು ಅರೆಕಾಲಿಕ, ಸಾಂದರ್ಭಿಕ ಅಥವಾ ಸುಸ್ಥಿರತೆಗೆ ಎಂದು ಪರಿಗಣನೆಗೆ ತೆಗೆದುಕೊಳ್ಳಬೇಕು. ಸಣ್ಣ – ಪ್ರಮಾಣದ ಮೀನುಗಾರಿಕೆಯಲ್ಲಿ ಮೀನು ಹಿಡಿದಾದ ನಂತರದಲ್ಲಿ ಕೆಲಸ ಮಾಡುವ ಕೆಲಸಗಾರರು ಹಾಗೂ ಮಹಿಳೆಯರನ್ನು ಗಮನಿಸಿಕೊಂಡು ಔದ್ಯೋಗಿಕ ಹಾಗೂ ಸಾಂಸ್ಥಿಕ ಬೆಳವಣಿಗೆಗಳ ಅವಕಾಶವನ್ನು ಉತ್ತೇಜಿಸಬೇಕು.

೬.೬ ಸಣ್ಣ– ಪ್ರಮಾಣದ ಮೀನುಗಾರಿಕೆಯ ಸಂಘಟಿತ ಹಾಗೂ ಅಸಂಘಟಿತ ವಲಯಗಳೆರಡರಲ್ಲಿ ಪ್ರಭುತ್ವಗಳು ಘನತೆಯ ಕೆಲಸವನ್ನು ಉತ್ತೇಜಿಸಬೇಕಾಗುತ್ತದೆ. ರಾಷ್ಟ್ರೀಯ ಕಾನೂನಿನ ಚೌಕಟ್ಟಿನೊಳಗೆ ಮೀನುಗಾರಿಕೆಯ ಸುಸ್ಥಿರತೆಯನ್ನು ಸ್ಪಷ್ಟಪಡಿಸಲು ಸಂಘಟಿತ ಹಾಗೂ ಅಸಂಘಟಿತ ವಲಯಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳು ನಡೆಯುವುದಕ್ಕೆ ಪ್ರಭುತ್ವಗಳು ಸೂಕ್ತವಾದ ವಾತಾವರಣವನ್ನು ಕಲ್ಪಿಸಬೇಕು.

೬.೭ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟದ ಹಂತದಲ್ಲಿಯೇ ಸಣ್ಣ– ಪ್ರಮಾಣದ ಮೀನುಗಾರಿಕೆಯ ಮೀನುಗಾರರ ಹಾಗೂ ಮೀನಿನ ಕೆಲಸಗಾರರ ಸಮರ್ಥ ಜೀವನ ಮಟ್ಟ ಹಾಗೂ ಕೆಲಸದ ಹಕ್ಕಿನ ಪ್ರಗತಿಪರ ತಿಳುವಳಿಕೆ ಬೆಳೆಸುವ ದೃಷ್ಟಿಕೋನದಿಂದ ಪ್ರಭುತ್ವಗಳು ಹೆಜ್ಜೆ ಇಡಬೇಕಾಗುತ್ತದೆ.ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯದಲ್ಲಿ ಸುಸ್ಥಿರ ಅಭಿವೃದ್ಧಿ ಮಾಡಲು ಅನುವು ಆಗುವಂತಹ ವಾತಾವರಣವನ್ನು ಪ್ರಭುತ್ವಗಳು ಸೃಷ್ಟಿಸಬೇಕಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಹಾಗೂ ಇತರ ಆಹಾರ ಉತ್ಪಾದಕರು ವಿಶೇಷವಾಗಿ ಮಹಿಳೆಯರು ಅವರ ಶ್ರಮದಿಂದ ನ್ಯಾಯಯುತ ಲಾಭ ಪಡೆಯವಲ್ಲಿ ಬಂಡವಾಳ ಹಾಗೂ ನಿರ್ವಹಣೆ, ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಸುಸ್ಥಿರ ನಿಭಾಯಿಸುವಿಕೆ ಹಾಗೂ ಸಂಗೋಪನೆಯನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಸಮುದ್ರ, ಹೊಸ ನೀರು, ಮತ್ತು ಭೂಪ್ರದೇಶ ಬಳಕೆಗೆ ಅನುಮತಿ ನೀಡುವಲ್ಲಿ ಒಳಗೊಳ್ಳುವ, ಪಕ್ಷಪಾತವಿರದ, ಮತ್ತು ವಿವೇಕಯುತ ಆರ್ಥಿಕ ಯೋಜನೆಗಳನ್ನು ಪ್ರಭುತ್ವಗಳು ಯೋಜಿಸಬೇಕಾಗುತ್ತದೆ.

೬.೮ ಸಣ್ಣ – ಪ್ರಮಾಣದ ಮೀನುಗಾರಿಕೆಯ ಸಮುದಾಯಗಳಿಗೆ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಿಂದ ದೊರೆಯುವ ಆದಾಯದ ಜೊತೆಗೆ ಅಗತ್ಯವಿರುವ ಕಡೆ ಸುಸ್ಥಿರ ಸಂಪನ್ಮೂಲಗಳ ಉಪಯಕ್ತತೆ ಹಾಗೂ ಜೀವನಾಧಾರಗಳ ವೈವಿಧ್ಯಮಯತೆಯ ಬೆಂಬಲಕ್ಕಾಗಿ ಅಸ್ತಿತ್ವದಲ್ಲಿರುವ ಅಥವಾ ಪೂರಕ ಅಭಿವೃದ್ಧಿ ಮತ್ತು ಪರ್ಯಾಯ ಆದಾಯ ಸೃಷ್ಟಿಸುವ ಅವಕಾಶಗಳನ್ನು ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಬೆಂಬಲಿಸಬೇಕು. ಸ್ಥಳೀಯ ಹಾಗೂ ವಿಶಾಲ ಆರ್ಥಿಕತೆಗಳಲ್ಲಿ ಉಪ ಕ್ಷೇತ್ರದ ಕೊಂಡಿಗಳನ್ನು ಗುರುತಿಸಬೇಕು, ಹಾಗೂ ಅದರಿಂದ ಲಾಭ ಪಡೆಯಬೇಕು. ಸಮುದಾಯ ಆಧಾರಿತ ಪ್ರವಾಸ, ಹಾಗೂ ಸಣ್ಣ–ಪ್ರಮಾಣದ ಜಲ ಸಂಸ್ಕೃತಿಯ ಅಭಿವೃದ್ಧಿಗಳಿಂದ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಸಮಾನವಾಗಿ ಲಾಭ ಪಡೆಯುವಂತಾಗಬೇಕು.

೬.೯ ಲಂಚಕೋರತನ ಮತ್ತು ಅಧಿಕಾರಿಗಳ ಶೋಷಣೆ, ಲಿಂಗಾಧಾರಿತ ಶೋಷಣೆ, ಕಳ್ಳತನ, ಹಡಗುಗಳ್ಳರು, ಸಂಘಟಿತ ಅಪರಾಧ ಕೃತ್ಯಗಳು, ಹಿಂಸೆ, ಅಪರಾಧಗಳಿಂದ ಮುಕ್ತವಾದ ಪರಿಸರದಲ್ಲಿ ಮೀನು ಹಿಡಿಯುವ ಹಾಗೂ ಮೀನುಗಾರಿಕೆಯ ಇತರೇ ಚಟುವಟಿಕೆಗಳನ್ನು ಸಣ್ಣ– ಪ್ರಮಾಣದ ಮೀನುಗಾರಿಕೆಯ ಮಹಿಳೆ ಹಾಗೂ ಪುರುಷ ನಡೆಸಿಕೊಂಡು ಹೋಗಲು ಸೂಕ್ತವಾದ ಸನ್ನಿವೇಶಗಳನ್ನು ಎಲ್ಲಾ ಪಕ್ಷಗಳೂ ಸೃಷ್ಟಿಸಬೇಕು. ಸಣ್ಣ–ಪ್ರಮಾಣದ ಮೀನುಗಾರಿಕೆಯಲ್ಲಿ ಹಿಂಸೆಗೊಳಗಾದ ಮಹಿಳೆಯರನ್ನು ರಕ್ಷಿಸಲು ಹಿಂಸೆಯನ್ನು ನಿರ್ಮೂಲನ ಮಾಡುವ ಉದ್ದೇಶಕ್ಕಾಗಿ ಎಲ್ಲಾ ಪಕ್ಷಗಳೂ ಸರಿಯಾದ ಕ್ರಮಗಳನ್ನು ರೂಪಿಸಬೇಕು. ಸಮುದಾಯ ಹಾಗೂ ಮನೆಯೊಳಗೆ ಸೇರಿದಂತೆ ಹಿಂಸೆಗೊಳಗಾದ ಹಾಗೂ ಶೋಷಿತ ಮಹಿಳೆಯರಿಗೆ ನ್ಯಾಯ ದೊರಕುವ ಭರವಸೆಯನ್ನು ಫ್ರಭುತ್ವವು ನೀಡಬೇಕು.

೬.೧೦ ಸಾಂಪ್ರದಾಯಕ ಹಾಗೂ ತೆರಿಗೆ ಅಧಿಕಾರಗಳನ್ನೊಳಗೊಂಡಂತೆ ಪ್ರಭುತ್ವದ ಹಾಗೂ ಸಣ್ಣ–ಪ್ರಮಾಣದ ಮೀನುಗಾರಿಕೆಯ ಭಾಗಿಗಳು ಸಣ್ಣ ಮೀನುಗಾರಿಕೆಯ ಜೀವನಾಧಾರಿತ ಯೋಜನೆಗಳಲ್ಲಿ ವಲಸೆ ಪ್ರಕ್ರಿಯೆ ಸಾಮಾನ್ಯವಾಗಿ ಇರುವುದರಿಂದ ವಲಸೆ ಮೀನುಗಾರರ ಹಾಗೂ ಮೀನು ಕೆಲಸಗಾರರ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ, ಗುರುತಿಸಬೇಕಾಗುತ್ತದೆ ಹಾಗೂ ಗೌರವಿಸಬೇಕಾಗುತ್ತದೆ. ಮೀನುಗಾರಿಕೆಯ ಸುಸ್ಥಿರ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಹಾಗೂ ಸ್ಥಳೀಯ ಮೀನುಗಾರಿಕೆಯ ಆಡಳಿತ ಹಾಗೂ ಅಭಿವೃದ್ಧಿಯನ್ನು ಯಾರು ಅಲ್ಲಗೆಳೆಯುವುದಿಲ್ಲವೋ ಅಂತಹ ವಲಸಿಗರನ್ನು ಸಮರ್ಥವಾಗಿ ಹಾಗೂ ನ್ಯಾಯಯುತವಾಗಿ ಒಳಗೊಳ್ಳಲು ಪ್ರಭುತ್ವಗಳು ಹಾಗೂ ಸಣ್ಣ – ಪ್ರಮಾಣದ ಮೀನುಗಾರಿಕೆಯ ಭಾಗಿಗಳು ಸಹಕರಿಸಬೇಕಾಗುತ್ತದೆ ಹಾಗೂ ಸೂಕ್ತವಾದ ಚೌಕಟ್ಟುಗಳನ್ನು ರಾಷ್ಟ್ರೀಯ ಕಾನೂನಿನ ಹಿನ್ನಲೆಯಲ್ಲಿ ಹುಟ್ಟುಹಾಕಬೇಕಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿ ರಾಷ್ಟ್ರಗಳ ಗಡಿಯಾಚೆಯ ಮೀನುಗಾರರ ಹಾಗೂ ಮೀನಿನ ಕೆಲಸಗಾರರ ವಲಸೆಗೆ ಸಂಬಂಧಿಸಿದಂತೆ ಪ್ರಭುತ್ವವು ಅವರ ಸಂಬಂಧಿತ ರಾಷ್ಟ್ರೀಯ ಸರ್ಕಾರಗಳ ಜೊತೆ ಸಂಯೋಜನೆ ಮಾಡಬೇಕಾದ ಅಗತ್ಯಗಳನ್ನು ಪ್ರಭುತ್ವಗಳು ಗುರುತಿಸಬೇಕಾಗುತ್ತದೆ. ಸಣ್ಣ–ಪ್ರಮಾಣದ ಮೀನುಗಾರಿಕೆಯ ಸಂಸ್ಥೆಗಳು ಹಾಗೂ ಸಂಘಟನೆಗಳ ಜೊತೆಗಿನ ಸಮಾಲೋಚನೆಯ ಮೂಲಕ ಯೋಜನೆಗಳು ಹಾಗೂ ಆಡಳಿತಾತ್ಮಕ ವ್ಯವಸ್ಥೆಗಳು ನಿರ್ಧಾರಿತವಾಗಬೇಕು.

೬.೧೨ ಪ್ರಸ್ತುತ ಅಂತರ್ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಧಿವೇಶನಗಳು (ಐ.ಎಲ್.ಒ), ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು (ಐಸಿಎಸ್‌ಸಿಆರ್) ಅಂತರ್ ರಾಷ್ಟ್ರೀಯ ಆರ್ಥಿಕತೆಯ ಮೇಲಿನ ಒಡಂಬಡಿಕೆಗಳಂತಹ ರಾಷ್ಟ್ರೀಯ ಕಾನೂನು ಮತ್ತು ಅಂತರ್ ರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟಗಳು, ಮತ್ತು ಅಂತರರಾಷ್ಟ್ರೀಯ ಅಸ್ತ್ರಗಳ ಪ್ರಕಾರವಾಗಿ ಗುತ್ತಿಗೆ ಪಕ್ಷವಾಗಿರುವಂತಹ ಪ್ರಭುತ್ವ ಅಗತ್ಯವಾದ ಕಾನೂನುಗಳು ಇವೆ ಹಾಗೂ ಅವುಗಳನ್ನು ಜಾರಿಗೊಳಿಸುವುದನ್ನು ಸ್ಪಷ್ಟ ಪಡಿಸಲು ಸಣ್ಣ– ಪ್ರಮಾಣದ ಮೀನುಗಾರರ ಹಾಗೂ ಮೀನಿನ ಕೆಲಸಗಾರರ ಉದ್ಯೋಗ ಸಂಬಂಧಿತ ಆರೋಗ್ಯ ಸಮಸ್ಯೆಗಳು, ಉದ್ಯೋಗದ ಅನುಚಿತ ಸನ್ನಿವೇಶಗಳನ್ನು ಪ್ರಭುತ್ವವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾ ಪಕ್ಷಗಳು ಔದ್ಯೋಗಿಕ ಆರೋಗ್ಯ ಹಾಗೂ ಸುಸ್ಥಿರಾತ್ಮಕ ಮೀನುಗಾರಿಕೆಯ ಆಡಳಿತದಲ್ಲಿ ಹಾಗೂ ಅಭಿವೃದ್ಧಿ ಆರಂಭಿಕೆಗಳಲ್ಲಿ ಅವಿಭಾಜ್ಯ ಭಾಗಗಳು ಎಂಬುದನ್ನು ಗುರುತಿಸಬೇಕು.

೬.೧೩ ಸಣ್ಣ – ಪ್ರಮಾಣದ ಮೀನುಗಾರನ್ನೊಳಗೊಂಡಂತೆ ಮೀನುಗಾರಿಕೆಯಲ್ಲಿ ಜೀತಗಾರಿಕೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವ ದೃಷ್ಟಿಯಿಂದ ವಲಸಿಗರನ್ನು ಒಳಗೊಂಡಂತೆ ಮೀನುಗಾರರು ಹಾಗೂ ಮೀನಿನ ಕೆಲಸಗಾರರನ್ನು ರಕ್ಷಿಸಲು ಪ್ರಭುತ್ವವು ಜೀತಗಾರಿಕೆ ನಿರ್ಮೂಲನ ಮಾಡುವುದು, ಮಹಿಳೆಯರ, ಪುರುಷರ ಹಾಗೂ ಮಕ್ಕಳ ಸಾಲದ ಜೀತವನ್ನು ತಡೆಗಟ್ಟುವುದು, ಹಾಗೂ ಪರಿಣಾಮವಾದ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

೬.೧೪ ಸಣ್ಣ – ಪ್ರಮಾಣದ ಮೀನುಗಾರ ಸಮುದಾಯಗಳ ಅಗತ್ಯಗಳನ್ನು ಪೂರೈಸುವ ಹಾಗೂ ಯುವಕ ಯುವತಿಯರಿಗೆ ಲಾಭದಾಯಕ ಹಾಗೂ ಘನತೆಯ ಕೆಲಸವನ್ನು ಪಡೆಯಲು ಸಹಾಯಕವಾಗುವ ನಿಟ್ಟಿನಲ್ಲಿ ಹಾಗೂ ಹುಡುಗ ಹಾಗೂ ಹುಡುಗಿಯರ ಉದ್ಯೋಗ ಆಯ್ಕೆಗಳನ್ನು ಗೌರವಿಸುವ ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸುವುದಕ್ಕಾಗಿ ಪ್ರಭುತ್ವಗಳು ಶಾಲೆ ಹಾಗೂ ಶಿಕ್ಷಣ ಸೌಲಭ್ಯಗಳ ಲಭ್ಯತೆ ಸಿಗುವಂತೆ ನೋಡಿಕೊಳ್ಳಬೇಕು.

೬.೧೫ ಮಕ್ಕಳ ಒಳಿತಿನ ಅಗತ್ಯ ಹಾಗೂ ಮಕ್ಕಳ ಭವಿಷ್ಯಕ್ಕಾಗಿ ಹಾಗೂ ಒಟ್ಟು ಸಮಾಜದ ಹಿತಕ್ಕಾಗಿ ಶಿಕ್ಷಣ ಮುಖ್ಯ ಎಂಬುದನ್ನು ಸಣ್ಣ–ಪ್ರಮಾಣದ ಮೀನುಗಾರಿಕೆಯ ಭಾಗಗಳು ಗುರುತಿಸಬೇಕು. ಮಕ್ಕಳು ಶಾಲೆಗೆ ಹೋಗಬೇಕು. ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಿತರಾಗಿರಬೇಕು. ಹಾಗೂ ಮಕ್ಕಳ ಹಕ್ಕುಗಳ ಅಧಿವೇಶನದ ಪ್ರಕಾರವಾಗಿ ಅವರ ಎಲ್ಲಾ ಹಕ್ಕುಗಳನ್ನು ಗೌರವಿಸಬೇಕಾಗುತ್ತದೆ.

೬.೧೬ ಎಲ್ಲಾ ಪಕ್ಷಗಳು ಸಮುದ್ರದ ಸಮಸ್ಯೆಗಳಲ್ಲಿನ ರಕ್ಷಣೆಗೆ ತಳಕು ಹಾಕಿಕೊಂಡಿರುವ ಸಂಕೀರ್ಣತೆಯನ್ನು ಗುರುತಿಸಬೇಕು. (ಒಳನಾಡು ಹಾಗೂ ಸಮುದ್ರ ಮೀನುಗಾರಿಕೆ) ಹಾಗೂ ರಕ್ಷಣೆಯ ನ್ಯೂನ್ಯತೆಗರುವ ವಿವಿಧ ಕಾರಣಗಳನ್ನು ಗುರುತಿಸಬೇಕು. ಇದು ಮೀನುಗಾರಿಕೆಯ ಎಲ್ಲಾ ಚಟುವಟಿಕೆಗಳಿಗೂ ಅನ್ವಯವಾಗುತ್ತದೆ. ಅಂತರ ರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಂಸ್ಥೆ ಯ ಮಾರ್ಗದರ್ಶಿಕೆಗಳು, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಹಾಗೂ ಮೀನುಗಾರಿಕೆ ಕೆಲಸದ ಹಾಗೂ ಸಣ್ಣ –ಪ್ರಮಾಣದ ಮೀನುಗಾರಿಕೆ ರಕ್ಷಣೆಯ ಅಂತರ್ ರಾಷ್ಟ್ರೀಯ ಕಡಲುತಡಿಯ ಸಂಸ್ಥೆಯ ಜೊತೆ ಸಹಮತ ಹೊಂದಿದ[3] ಸೂಕ್ತವಾದ ಕಾನೂನು ಹಾಗೂ ನಿಯಂತ್ರಣ ಅಭಿವೃದ್ಧಿ, ಕಟ್ಟಳೆ ಮಾಡುವುದು ಹಾಗೂ ಜಾರಿಗೊಳಿಸುವಿಕೆಯ ಬಗ್ಗೆ ಪ್ರಭುತ್ವಗಳು ಭರವಸೆ ನೀಡಬೇಕು.

೬.೧೭ ಸೂಕ್ತ ಕಂಡಂತೆ ಪ್ರಾದೇಶಿಕ ಸಂಘಟಿಸುವ ಅಂಶಗಳನ್ನು ಒಳಗೊಂಡು ಮೀನುಗಾರರೇ ಕ್ರಿಯಾತ್ಮಕವಾಗಿ ಭಾಗಿಗಳಾದಾಗ ಸಣ್ಣ–ಪ್ರಮಾಣದ ಮೀನಿಗಾರಿಕೆಯಲ್ಲಿ (ಒಳನಾಡು ಮತ್ತು ಸಮುದ್ರ) ಔದ್ಯೋಗಿಕ ಆರೋಗ್ಯ ಮತ್ತು ರಕ್ಷಣೆ ಒಳಗೊಂಡಂತೆ ಬಲಗೊಂಡ ಸಮುದ್ರದ ರಕ್ಷಣೆಯನ್ನು ಉತ್ತಮವಾಗಿ ಸಾಧಿಸಲು ಸುಸಂಬದ್ಧತೆ, ಹಾಗೂ ಸಮಗ್ರತೆಯುಳ್ಳ ರಾಷ್ಟ್ರೀಯ ಯೋಜನೆಗಳನ್ನು ಅಭಿವೃದ್ಧಿಗೊಳಿಸುವ ಹಾಗೂ ಜಾರಿಗೊಳಿಸುವುದರ ಮೂಲಕ ಮಾಡಬಹುದಾಗಿದೆ. ಇದರ ಜೊತೆಗೆ, ಮೀನುಗಾರಿಕೆಯ ಸಾಮಾನ್ಯ ಆಡಳಿತ ನಿರ್ವಹಣೆಯಲ್ಲಿ ಸಣ್ಣ– ಪ್ರಮಾಣದ ಮೀನುಗಾರರ ಸಮುದ್ರದಲ್ಲಿನ ರಕ್ಷಣೆ ಕೂಡಾ ಅಂತರ್ಗತವಾಗಿರಬೇಕು. ಇತರೇ ಸಂಗತಿಗಳ ಜೊತೆಗೆ, ರಾಷ್ಟ್ರೀಯ ಅಪಘಾತ ವರದಿಯ ನಿರ್ವಹಣೆ, ಸಮುದ್ರ ರಕ್ಷಣೆಯ ಬಗ್ಗೆ ಅರಿವು ಹೆಚ್ಚಳಿಕೆಯ ಕಾರ್ಯಕ್ರಮಗಳಿಗೆ ಅನುವು ಮಾಡುವುದು, ಹಾಗೂ ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿನ ಸಮುದ್ರದ ರಕ್ಷಣೆಗೆ ಸೂಕ್ತವಾದ ಕಾನೂನನ್ನು ತರಲು ಪ್ರಭತ್ವಗಳು ಬೆಂಬಲಿಸಬೇಕು. ಕೋರಿಕೆ ಹೆಚ್ಚಿಸುವುದಕ್ಕೆ, ಅಂಕಿ ಅಂಶ ಸಂಗ್ರಹಣೆಗೆ, ತರಬೇತಿ ಹಾಗೂ ತಿಳುವಳಿಕೆಗೆ ಮತ್ತು ಶೋಧನೆ ಹಾಗೂ ಕಾಪಾಡುವ ಪ್ರಕ್ರಿಯೆಗಳ ಹಂತದಲ್ಲಿ ಅಸ್ತಿತ್ವದಲ್ಲಿರುವ ಸಂಘಗಳು ಹಾಗೂ ಸಮುದಾಯ ಆಧಾರಿತ ರಚನೆಗಳನ್ನು ಪ್ರಭುತ್ವಗಳು ಗುರುತಿಸಬೇಕು. ಸಮುದ್ರದಲ್ಲಿನ ಸಣ್ಣ– ಪ್ರಮಾಣದ ದೋಣಿಗಳನ್ನು ಕಾಪಾಡಲು ತುರ್ತು ಗುರುತಿಸುವಿಕೆಯ ವ್ಯವಸ್ಥೆ ಹಾಗೂ ಮಾಹಿತಿ ಲಭ್ಯತೆಯನ್ನು ಪ್ರಭುತ್ವಗಳು ಉತ್ತೇಜಿಸಬೇಕು.

೬.೧೮ ಯುದ್ಧ ಪಡೆಯ ಘರ್ಷಣೆಗಳಂತಹ ಸನ್ನಿವೇಶದಲ್ಲಿ ಭಾಗ ೨೫[4] ಒಳಗೊಂಡಂತೆ ರಾಷ್ಟ್ರೀಯ ಆಹಾರ ಭದ್ರತೆಯ ಹಿನ್ನಲೆಯಲ್ಲಿ ಕಾಲಾವಧಿಯ, ಮೀನುಗಾರಿಕೆ ಹಾಗೂ ಅರಣ್ಯದ ಜವಾಬ್ದಾರಿಯುತ ಆಡಳಿತಕ್ಕಾಗಿರುವ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಪಕ್ಷಗಳು ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಾಗಿಗಳ ಮಾನವ ಹಕ್ಕುಗಳು ಹಾಗೂ ಘನತೆಯನ್ನು ಅವರ ಸಾಂಪ್ರದಾಯಕ ಜೀವನಾಧಾರಗಳನ್ನು ಅರಸುವ, ಸಾಂಪ್ರದಾಯಕ ಮೀನಿನ ತಾಣಗಳ ಲಭ್ಯತೆ, ಹಾಗೂ ಅವರ ಜೀವನ ಕ್ರಮ ಹಾಗೂ ಅವರ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಅನುಮತಿ ನೀಡುವ ಅಂತರರಾಷ್ಟ್ರೀಯ ಮಾನವೀಯತೆಯ ಕಾನೂನುಗಳ ಪ್ರಕಾರವಾಗಿ ರಕ್ಷಿಸುವುದು. ಅವರಿಗೆ ಅಡ್ಡ ಪರಿಣಾಮ ಬೀರುವ ವಿಚಾರಗಳನ್ನು ಕುರಿತು ನಿರ್ಧಾರ ಮಾಡುವ ಹಂತದಲ್ಲಿ ಅವರ ಪರಿಣಾಮಕಾರಿ ಭಾಗವಹಿಸುವಿಕೆಗೆ ಅನುವು ಮಾಡಿಕೊಡಬೇಕಾಗತ್ತದೆ.

## ೭ ಮೌಲಿಕ ಸರಣಿಗಳು ಸುಗ್ಗಿಯ ನಂತರದ ವ್ಯಾಪಾರ

೭.೧ ಸಣ್ಣ –ಪ್ರಮಾಣದ ಮೀನುಗಾರಿಕೆಯ ಸುಗ್ಗಿಯ ನಂತರಲ್ಲಿ ಉಪ ಕ್ಷೇತ್ರ ಕೇಂದ್ರ ಪಾತ್ರ ವಹಿಸುವುದನ್ನು ಹಾಗೂ ಇದರ ಕರ್ತೃಗಳು ಮೌಲಿಕ ಕೊಂಡಿಗಳಲ್ಲಿ ಪಾತ್ರ ವಹಿಸುವುದನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು. ವಿಶೇಷ ಬೆಂಬಲವನ್ನು ನೀಡಬೇಕಾದ ಅಂಚಿಗೆ ಒತ್ತರಿಸ್ಪಟ್ಟವರು ಹಾಗೂ ಮೂಲೆ ಗುಂಪಾದವರ ಹಾಗೂ ಮೌಲಿಕ ಸರಣಿಯ ಕರ್ತೃಗಳಲ್ಲಿ ಅಸಮಾನ ಅಧಿಕಾರ ಸಂಬಂಧ ಇರುತ್ತದೆ ಎಂಬುದನ್ನು ಗುರುತಿಸಿ, ಪ್ರಸ್ತುತ ನಿರ್ಧಾರ ಮಾಡುವ ಪ್ರಕ್ರಿಯೆಯಲ್ಲಿ ಸುಗ್ಗಿಯ ನಂತರದ ಕರ್ತೃಗಳು ಭಾಗಿಗಳಾಗಿದ್ದಾರೆನ್ನುವುದನ್ನು ಎಲ್ಲಾ ಪಕ್ಷಗಳೂ ಧೃಡಪಡಿಸಿಕೊಳ್ಳಬೇಕು.

೭.೨ ಮಹಿಳೆಯರು ಸುಗ್ಗಿಯ ನಂತರದ ಉಪಕ್ಷೇತ್ರಗಳಲ್ಲಿ ವಹಿಸುವ ಪಾತ್ರವನ್ನು ಎಲ್ಲಾ ಪಕ್ಷಗಳೂ ಗುರುತಿಸಿ ಇಂತಹ ಕೆಲಸಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ನಿರ್ಧಾರಗಳನ್ನು ಅನುವು ಮಾಡಿಕೊಡಬೇಕು. ಮಹಿಳೆಯರು ಸುಗ್ಗಿಯ ನಂತರ

[3] ಇತರೆ ಸಂಗತಿಗಳ ಜೊತೆಗೆ, ೧೯೬೮ ಮೀನುಗಾರರ ಹಾಗೂ ದೋಣಿಗಳ ರಕ್ಷಣೆಯ ಕೋಡ್ (ರಿವೈಸ್ ಆಗಿದೆ.) ೧೯೮೦ರಲ್ಲಿ ಆ.ವ್ಯ.ಸ./ಅ.ಕ.ಸ./ಆ.ಕ.ಸ.ಗಳ ಸಣ್ಣ–ಪ್ರಮಾಣದ ದೋಣಿಗಳ ನಕ್ಷೆ, ಕಟ್ಟುವಿಕೆ ಹಾಗೂ ಉಪಕರಣ, ಮತ್ತು೧೨ ಮೀಟರ್ ಉದ್ದಕ್ಕಿಂತ ಕಡಿಮೆ ಇರುವ ಅಲಂಕೃತ ಮೀನುಗಾರಿಕೆ ದೋಣಿಗಳು ಹಾಗೂ ಅನಲಂಕೃತ ಮೀನಿನ ದೋಣಿಗಳಿಗೆ ೨೦೧೦ರಲ್ಲಿ ಮಾಡಿದ್ದ ಶಿಫಾರಸ್ಸುಗಳು ಇವುಗಳನ್ನು ಒಳಗೊಳ್ಳುತ್ತದೆ.

[4] ಸೆಕ್ಷನ್ ೨೫ರ ಶೀರ್ಷಿಕೆ : ಅರಣ್ಯಗಳು, ಮೀನುಗಾರಿಕೆ, ಭೂಮಿಯ ಕಾಲಾವಧಿ ಕುರಿತಂತೆ ಇರುವ ಘರ್ಷಣೆಗಳು.

ಉಪಕ್ಷೇತ್ರಗಳಲ್ಲಿ ತಮ್ಮ ಜೀವನಾಧಾರಗಳನ್ನು ಕಾಪಾಡಿಕೊಳ್ಳಲು ಹಾಗೂ ಹೆಚ್ಚಿಸಿಕೊಳ್ಳುವ ಸಾಧ್ಯತೆಗಾಗಿ ಅವಶ್ಯಕತೆ ಇರುವ ಹಾಗೆ ಮಹಿಳೆಯರಿಗೆ ಸೂಕ್ತವೆನಿಸುವ ಸೇವೆಗಳು ಹಾಗೂ ಸೌಕರ್ಯಗಳು ಮಹಿಳೆಯರಿಗೆ ಸಿಗುತ್ತವೆ ಎಂಬ ಭರವಸೆಯನ್ನು ಪ್ರಭುತ್ವಗಳು ನೀಡಬೇಕಾಗುತ್ತದೆ.

೭.೩ ಸಣ್ಣ –ಪ್ರಮಾಣದ ಮೀನುಗಾರಿಕೆಯಲ್ಲಿ ಸುಗ್ಗಿಯ ನಂತರದ ಉಪಕ್ಷೇತ್ರಗಳ ರಫ್ತು ಹಾಗೂ ದೇಶೀಯ ಮಾರುಕಟ್ಟೆಗೋಸ್ಕರ ಜವಾಬ್ಧಾರಿಯುತವಾಗಿ ಹಾಗೂ ಸುಸ್ಥಿರತೆಯ ರೀತಿಯಲ್ಲಿ ಉನ್ನತ ಗುಣಮಟ್ಟದ ಹಾಗೂ ಸುರಕ್ಷಿತ ಮೀನು ಮತ್ತು ಮೀನಿನ ಉತ್ಪಾದನೆಯನ್ನು ಬೆಂಬಲಿಸಲು ಪ್ರಭತ್ವಗಳು ಸೂಕ್ತವಾದ ಮೂಲಸೌಕರ್ಯಗಳ ಸಾಂಸ್ಥಿಕ ರಚನೆಗಳ ಹಾಗೂ ಸಾಮರ್ಥ್ಯ ಬೆಳೆಸುವುದಕ್ಕೆ ಬಂಡವಾಳ ಬೆಳೆಸುವ, ಕೊಡುವುದನ್ನು ಸಾಧ್ಯತೆಯನ್ನಾಗಿಸಬೇಕಾಗುತ್ತದೆ.

೭.೪ ರಾಷ್ಟ್ರೀಯ ಕಾನೂನಿನ ಹಿನ್ನಲೆಯಲ್ಲಿ ಅವರ ಆದಾಯ ಹೆಚ್ಚಿಸಲು ಹಾಗೂ ಜೀವನಾಧಾರಗಳ ಭದ್ರತೆಗೆ ಮೀನುಗಾರರ ಹಾಗೂ ಮೀನಿನ ಕೆಲಸಗಾರರ ಸಾಂಪ್ರದಾಯಕ ಸಂಸ್ಥೆಗಳನ್ನು ಗುರುತಿಸಿ ಮತ್ತು ಅವರ ಸಂಘಟನಾತ್ಮಕ ಮತ್ತು ಕೌಶಲ್ಯಗಳನ್ನು ಮೌಲಿಕ ಕೊಂಡಿಯ ಎಲ್ಲಾ ಹಂತಗಳಲ್ಲಿ ಪ್ರಭತ್ವಗಳು ಹಾಗೂ ಎಲ್ಲಾ ಸಹಚರರು ಉತ್ತೇಜಿಸಬೇಕು. ಹಾಗೆಯೇ, ಸಹಕಾರಿ ಸಂಸ್ಥೆಗಳು, ಹಾಗೂ ಇತರ ಸಂಸ್ಥೆಗಳ ರಚನೆಗಳ ಜೊತೆಗೆ ಮಾರಾಟದ ವ್ಯವಸ್ಥೆ ರೂಪಿಸಬೇಕು, ಅಂದರೆ ಸೂಕ್ತವಾದ ರೀತಿಯಲ್ಲಿ ಹರಾಜು ಪ್ರಕ್ರಿಯೆ ನಡೆಸುವುದು.

೭.೫ ಅಸ್ತಿತ್ವಲ್ಲಿರುವ ಸಾಂಪ್ರದಾಯಕ ಹಾಗೂ ಸ್ಥಳೀಯ ಪರಿಣಾಮಕಾರಿ ಬೆಲೆಯುಳ್ಳ ತಾಂತ್ರಿಕತೆಗಳು, ಸ್ಥಳೀಯ ಸಂಶೋಧನೆಗಳು, ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾದ ತಾಂತ್ರಿಕತೆಗಳ ವರ್ಗಾವಣೆಗಳ ಮೂಲಕ ಎಲ್ಲವನ್ನೂ ಮಾಡುತ್ತಲೇ ಎಲ್ಲಾ ಪಕ್ಷಗಳೂ ಸುಗ್ಗಿಯ ನಂತರದ ನಷ್ಟ ಹಾಗೂ ತ್ಯಾಜ್ಯವನ್ನು ತಪ್ಪಿಸುವುದಲ್ಲದೇ ಮೌಲ್ಯವನ್ನು ಹೆಚ್ಚಿಸಬೇಕು. ಸಣ್ಣ –ಪ್ರಮಾಣದ ಮೀನು ನಿರ್ವಹಣೆ ಹಾಗೂ ಕಾರ್ಯ ವಿಧಾನದಲ್ಲಿ ತ್ಯಾಜ್ಯವನ್ನು ತಡೆಯಲು ಉದಾಃ ( ನೀರು, ಸೌದೆ,ಹಾಗೂ ಇತರ)ಪರಿಸರದ ದೃಷ್ಟಿಕೋನದಲ್ಲಿ ಪರಿಸರಾತ್ಮಕವಾಗಿರುವ ಸುಸ್ಥಿರ ರೂಢಿಗಳನ್ನು ಉತ್ತೇಜಿಸಬೇಕು.

೭.೬ ಸ್ಥಳೀಯ, ರಾಷ್ಟ್ರೀಯ, ಪ್ರಾದೇಶಿಕ, ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗಳ ಲಭ್ಯತೆಯನ್ನು ಪ್ರಭುತ್ವಗಳು ಸ್ಪಷ್ಟ ಪಡಿಸಬೇಕು ಹಾಗೂ ಸಣ್ಣ ಪ್ರಮಾಣದ ಮೀನುಗಾರಿಕೆಯ ಉತ್ಪಾದನೆಗಳು ಸರ್ವ ಸಮಾನ ಹಾಗೂ ನಿಷ್ಪಕ್ಷಪಾತ ಮಾರಾಟವನ್ನು ಉತ್ತೇಜಿಸುವುದು. ವಿಶ್ವದ ಮಾರಾಟ ಸಂಸ್ಥೆಯ ಒಪ್ಪಂದಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಿ ಸೂಕ್ತವೋ ಅಲ್ಲಿ ಮಾರಾಟ ಸಂಸ್ಥೆಯ ಸದಸ್ಯರ ಹಕ್ಕು ಹಾಗೂ ಹಂಗುಗಳನ್ನು ಪರಿಗಣಿಸಿ, ಮುಖ್ಯವಾಗಿ ಸಣ್ಣ– ಪ್ರಮಾಣದ ಮೀನುಗಾರಿಕೆಯ ಉತ್ಪಾದನೆಗಳ ಪ್ರಾದೇಶಿಕ ಮಾರಾಟದಲ್ಲಿ ಮಾರಾಟದ ನಿಯಂತ್ರಣಗಳು ಹಾಗೂ ಪ್ರಕ್ರಿಯೆಗಳನ್ನು ಪರಿಚಯಿಸುವಾಗ ಪ್ರಭುತ್ವಗಳು ಒಟ್ಟಾಗಿ ಕೆಲಸ ಮಾಡಬೇಕು.

೭.೭ ಸ್ಥಳೀಯ ಸಣ್ಣ –ಪ್ರಮಾಣದ ಮೀನುಗಾರರು, ಮೀನಿನ ಕೆಲಸಗಾರರು ಹಾಗೂ ಅವರ ಸಮುದಾಯದ ಮೇಲೆ ಅಂತರರಾಷ್ಟ್ರೀಯ ಮೀನಿನ ಹಾಗೂ ಮೀನು ಉತ್ಪಾದನೆಗಳ ಮಾರಾಟ ಹಾಗೂ ನೇರ ಅಂತರ್ಗತ ರೀತಿಯ ಪರಿಣಾಮಗಳ ಕುರಿತು ಸಲ್ಲಬೇಕಾದ ಗಣನೆಯನ್ನು ನೀಡಬೇಕಾಗುತ್ತದೆ. ಯಾರ ಪೌಷ್ಟಿಕತೆಗೆ, ಆರೋಗ್ಯ ಹಾಗೂ ಬಳಕೆಗೆ ಮೀನು ಅತ್ಯಂತ ಅಗತ್ಯವಾಗಿದೆಯೋ, ಹಾಗೂ ಇತರ ಹೋಲಿಕಾತ್ಮಕ ಆಹಾರ ಸಂಪನ್ಮೂಲಗಳು ಜಾಗ್ರತೆಯಾಗಿ ದಕ್ಕುವುದಿಲ್ಲವೋ ಹಾಗೂ ಅವರಿಗೆ ಶಕ್ತಿಯಿರುವುದಿಲ್ಲವೋ ಅಂತವರಿಗೆ ಅಂತರರಾಷ್ಟ್ರೀಯ ಮೀನು ಮಾರಾಟ ಹಾಗೂ ರಫ್ತುಗಾರಿಕೆಯ ಉತ್ಪಾದನೆಗಳು ಜನರ ಪೌಷ್ಟಿಕ ಆಹಾರ ಅಗತ್ಯಗಳ ಮೇಲೆ ವೈಪರೀತ್ಯ ಪರಿಣಾಮ ಬೀರುವುದಿಲ್ಲ ಎಂಬುದನ್ನು ಪ್ರಭುತ್ವಗಳು ಸ್ಪಷ್ಟಪಡಿಸಬೇಕಾಗುತ್ತದೆ.

೭.೮ ಅಂತರರಾಷ್ಟ್ರೀಯ ಮಾರಾಟದಿಂದ ಬರುವ ಲಾಭಗಳನ್ನು ಸಣ್ಣ –ಪ್ರಮಾಣದ ಮೀನುಗಾರಿಕೆಯ ಕರ್ತೃಗಳಿಗೆ ಹಾಗೂ ಇತರ ಮೌಲಿಕ ಕೊಂಡಿಗಳ ಕರ್ತೃಗಳಿಗೆ ನ್ಯಾಯಯುತವಾಗಿ ಹಂಚುವುದನ್ನು ಪ್ರಭುತ್ವಗಳು ಗುರುತಿಸಬೇಕು. ಮಾರುಕಟ್ಟೆಯ ಬೇಡಿಕೆಗಳಿಗಾಗಿ ಅತಿಯಾದ ಬಳಕೆ ಮಾಡಿ ಮೀನುಗಾರಿಕೆಯ ಸುಸ್ಥಿರತೆಗೆ, ಆಹಾರ ಭದ್ರತೆಗೆ, ಹಾಗೂ ಪೌಷ್ಟಿಕತೆಗೆ ಅಪಾಯ ಒದಗುವುದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಆಡಳಿತಾತ್ಮಕ ವ್ಯವಸ್ಥೆಗಳು ಜಾರಿಯಲ್ಲಿವೆ ಎಂಬುದನ್ನು ಪ್ರಭತ್ವಗಳು ರುಜುವಾತು ಪಡಿಸಬೇಕು. ಈ ರೀತಿಯ ಮೀನುಗಾರಿಕೆಯ ಆಡಳಿತ ನಿರ್ವಹಣೆ ವ್ಯವಸ್ಥೆಗಳು ಜವಾಬ್ಧಾರಿಯುತ ಸುಗ್ಗಿಯ ನಂತರದ ರೂಢಿಗಳು, ಯೋಜನೆಗಳು ಹಾಗೂ ಕ್ರಿಯೆಗಳನ್ನು ಒಳಗೊಂಡು ರಫ್ತಿನಿಂದ ಬರುವ ಆದಾಯ ಸಣ್ಣ –ಪ್ರಮಾಣದ ಮೀನುಗಾರರಿಗೆ ಹಾಗೂ ಇತರರಿಗೆ, ಮೌಲಿಕ ಕೊಂಡಿಯ ಎಲ್ಲರಿಗೂ ಸರ್ವಸಮಾನವಾಗಿ ಲಾಭದಾಯಕವಾಗಿದೆ ಎಂಬುದನ್ನು ಸ್ಪಷ್ಟ ಪಡಿಸಬೇಕು.

೭.೯ ಅಂತರರಾಷ್ಟ್ರೀಯ ಮಾರಾಟದಿಂದ ಪರಿಸರದ ಮೇಲೆ, ಸಣ್ಣ–ಪ್ರಮಾಣದ ಮೀನುಗಾರಿಕೆಯ ಸಂಸ್ಕೃತಿ ಹಾಗೂ ಜೀನನಾಧಾರಗಳ ಮೇಲೆ ಹಾಗೂ ಆಹಾರ ಭದ್ರತೆಗೆ ಸಂಬಂಧಪಟ್ಟ ವಿಶೇಷ ಅಗತ್ಯಗಳ ಮೇಲೆ ಉಂಟಾಗಬಹುದಾದ ಅಡ್ಡ ಪರಿಣಾಮಗಳ ಕುರಿತು ಪ್ರಭುತ್ವಗಳು ಯೋಜನೆ ಹಾಗೂ ಕಾರ್ಯ ವಿಧಾನದಲ್ಲಿ ಪರಿಸರ, ಸಾಮಾಜಿಕ ಹಾಗೂ ಇತರ ಪ್ರಸ್ತುತ ಮೌಲ್ಯಮಾಪನಗಳನ್ನು ಮಾಡಬೇಕಾಗುತ್ತದೆ. ಸಂಬಂಧಪಟ್ಟ ಭಾಗಿಗಳ ಜೊತೆ ಸಮಾಲೋಚನೆ ನಡೆಸುವುದು ಈ ಯೋಜನೆಗಳ ಹಾಗೂ ಕಾರ್ಯವಿಧಾನಗಳ ಭಾಗವಾಗಿರಬೇಕು.

೭.೧೦ ಸಣ್ಣ– ಪ್ರಮಾಣದ ಮೀನುಗಾರಿಕೆಯ ಮೌಲಿಕ ಸರಣಿಯಲ್ಲಿರುವ ಭಾಗಿಗಳಿಗೆ ಪ್ರಸ್ತುತ ಮಾರುಕಟ್ಟೆ ಹಾಗೂ ಮಾರಾಟದ ಮಾಹಿತಿಯ ಲಭ್ಯತೆ ದೊರೆಯವಂತೆ ಪ್ರಭುತ್ವಗಳು ನೋಡಿಕೊಳ್ಳಬೇಕು. ಸಣ್ಣ– ಪ್ರಮಾಣದ ಮೀನುಗಾರರಿಗೆ ಸಮಯಕ್ಕೆ ಹಾಗೂ ನಿಖರವಾದ ಮಾರುಕಟ್ಟೆಯ ಮಾಹಿತಿ ಲಭ್ಯವಿದ್ದರೆ ಬದಲಾಗುತ್ತಿರುವ ಮಾರುಕಟ್ಟೆಯ ಸ್ಥಿತಿ ಗತಿಗಳಿಗೆ ಹೊಂದಿಕೊಳ್ಳಲು ಅವರಿಗೆ ಸಹಾಯವಾಗುತ್ತದೆ. ಕೌಶಲ್ಯದ ಬೆಳವಣಿಗೆ ಕೂಡಾ ಅಗತ್ಯವಾಗಿದೆ. ಇದರಿಂದ ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಾಗಿಗಳು, ವಿಶೇಷವಾಗಿ ಮಹಿಳೆಯರು, ಮೂಲೆ ಗುಂಪಾದ ಹಾಗೂ ಅಂಚಿಗೆ ಒತ್ತರಿಸಲ್ಪಟ್ಟ ಗುಂಪುಗಳು ಹೊಂದಾಣಿಕೆ ಮಾಡಿಕೊಳ್ಳಬಹುದಲ್ಲದೇ ಋಣಾತ್ಮಕ ಅಡ್ಡ ಪರಿಣಾಮಗಳ ಅಪಾಯವನ್ನು ಕಡಿಮೆಗೊಳಿಸಿ ಎಲ್ಲಾ ಮಾರುಕಟ್ಟೆಯ ಪ್ರವೃತ್ತಿ (ಟ್ರೆಂಡ್ಸ್) ಗಳ ಅವಕಾಶಗಳಿಂದ ಹಾಗೂ ಸ್ಥಳೀಯ ಸಂದರ್ಭಗಳಿಂದ ಸರ್ವ ಸಮಾನ ಲಾಭವನ್ನು ಪಡೆಯಬಹುದಾಗಿದೆ.

## ೮ ಲಿಂಗ ಸಮಾನತೆ

೮.೧ ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಎಲ್ಲರಿಂದ ಒಗ್ಗೂಡಿದ ಪ್ರಯತ್ನಗಳು ಅಗತ್ಯ ಎಂಬುದನ್ನು ಹಾಗೂ ಲಿಂಗ ಸಮಾನತೆ ಪ್ರಧಾನ ಸಂಸ್ಕೃತಿಯ ಭಾಗವಾಗುವಿಕೆಯು ಸಣ್ಣ– ಪ್ರಮಾಣದ ಮೀನುಗಾರಿಕೆಯ ಅಭಿವೃದ್ಧಿ ತಂತ್ರಗಳ ಅವಿಭಾಜ್ಯ ಅಂಗವಾಗಬೇಕೆಂಬುದನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು. ಭಿನ್ನವಾದ ಸಾಂಸ್ಕೃತಿಕ ವಾತಾವರಣದಲ್ಲಿ ಭಿನ್ನವಾದ ದೃಷ್ಟಿಕೋನಗಳ ಮೂಲಕ ಈ ತಂತ್ರಗಳು ಲಿಂಗ ಸಮಾನತೆ ಸಾಧಿಸಬೇಕಾಗುತ್ತದೆ ಮತ್ತು ಮಹಿಳೆಯರ ಬಗ್ಗೆ ಪಕ್ಷಪಾತ ಮಾಡುವ ರೂಢಿಗಳಿಗೆ ಸವಾಲು ಎಸೆಯಬೇಕಾಗುತ್ತದೆ.

೮.೨ ಪ್ರಭತ್ವಗಳು ತಮ್ಮ ಹಂಗುಗಳನ್ನು ಒಪ್ಪಿಕೊಂಡು ಇತರ ಸಂಗತಿಗಳೊಡನೆ ಮಹಿಳೆಯರ ವಿರುದ್ಧದೆಲ್ಲಾ ರೀತಿಯ ಶೋಷಣೆಯ ನಿರ್ಮೂಲನದ ಮೇಲಿನ ಅಧಿವೇಶನ ಒಳಗೊಂಡಂತೆ, ಬೀಜಿಂಗ್ ಘೋಷಣೆ ಹಾಗೂ ಕ್ರಿಯೆಗಾಗಿ ಇರುವ ವೇದಿಕೆ ಗಮನದಲ್ಲಿ ಇಟ್ಟುಕೊಂಡು ತಾವು ಭಾಗಿಯಾಗಿರುವ ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು ಹಾಗೂ ಪ್ರಸ್ತುತ ಅಸ್ತ್ರಗಳನ್ನು ಜಾರಿಗೊಳಿಸಬೇಕಾಗುತ್ತದೆ. ಸಣ್ಣ– ಪ್ರಮಾಣದ ಮೀನುಗಾರಿಕೆಗಾಗಿ ನಿರ್ದೇಶಿತವಾದ ಯೋಜನೆಗಳ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಮಾನ ಭಾಗವಹಿಸುವಿಕೆಯನ್ನು ಪಡೆಯಲು ಪ್ರಭುತ್ವಗಳು ಶ್ರಮಿಸಬೇಕು. ಮಹಿಳೆಯರ ವಿರುದ್ಧದ ಪಕ್ಷಪಾತ ಧೋರಣೆಯನ್ನು ಕುರಿತು ಶ್ರಮಿಸುವಾಗ ನಾಗರಿಕ ಸಮಾಜ ಸಂಸ್ಥೆಗಳಿಗೆ ಅವಕಾಶಗಳನ್ನು ಒದಗಿಸುವ ಹಂತದಲ್ಲಿಯೇ ವಿಶೇಷವಾಗಿ ಮಹಿಳಾ ಮೀನು ಕೆಲಸಗಾರರು ಹಾಗೂ ಅವರ ಸಂಸ್ಥೆಗಳು ಮೇಲ್ವಿಚಾರಣೆಯಲ್ಲಿ ಹಾಗೂ ಜಾರಿಗೊಳಿಸುವಿಕೆಯಲ್ಲಿ ಭಾಗವಹಿಸುವಂತೆ ಪ್ರಭುತ್ವಗಳು ನಿರ್ದಿಷ್ಟವಾದ ಕ್ರಮಗಳನ್ನು ರೂಪಿಸಬೇಕಾಗುತ್ತದೆ. ಮಹಿಳೆಯರು ಸಣ್ಣ –ಮೀನುಗಾರಿಕೆಯ ಸಂಸ್ಥೆಗಳಲ್ಲಿ ಭಾಗವಹಿಸುವುದಕ್ಕೆ ಪ್ರೋತ್ಸಾಹಿಸಬೇಕು ಹಾಗೂ ಪ್ರಸ್ತುತ ಸಾಂಸ್ಥಿಕ ಅಭಿವೃದ್ಧಿಗೆ ಬೆಂಬಲವನ್ನು ನೀಡಬೇಕಾಗುತ್ತದೆ.

೮.೩ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಲಿಂಗ ಸಮಾನತೆಯ ತಿಳುವಳಿಕೆಗೆ, ಸೂಕ್ತವೆನಿಸುವಂತೆ ಲಿಂಗ ಸಮಾನತೆಗೆ ವಿರುದ್ಧವಾಗಿರುವ ಕಾನೂನು ಯೋಜನೆಗಳು ಹಾಗೂ ಕ್ರಮಗಳ ಸುಧಾರಣೆಗೆ ಪ್ರಭುತ್ವಗಳು ಯೋಜನೆಗಳನ್ನು ಹಾಗೂ ಕಾನೂನುಗಳನ್ನು ರೂಪಿಸಬೇಕಾಗುತ್ತದೆ.

ವಿಸ್ತರಣೆ ಕೆಲಸಗಾರರೆಂದು ಪುರುಷ ಹಾಗೂ ಮಹಿಳೆಯರನ್ನು ನೇಮಿಸುವುದು, ಪುರುಷರು ಹಾಗೂ ಮಹಿಳೆಯರು ವಿಸ್ತರಣೆಗೆ ಹಾಗೂ ತಾಂತ್ರಿಕ ಸೇವೆಗಳಿಗೆ ಸಮಾನ ಲಭ್ಯತೆ ಹೊಂದುವ ಭರವಸೆ ನೀಡುವಲ್ಲಿ, ಹಾಗೂ ಮೀನುಗಾರಿಕೆಗೆ ಸಂಬಂಧಿಸಿದ ಕಾನೂನುಗಳಿಗೆ ಬೆಂಬಲ ನೀಡಿ ಲಿಂಗ ಸಮಾನತೆಯನ್ನು ಸಾಧಿಸುವ ಹಂತದಲ್ಲಿನ ಕ್ರಿಯೆಗಳನ್ನು ಜಾರಿಗೊಳಿಸುವಲ್ಲಿ ಪ್ರಭತ್ವಗಳು ಮುಂದಾಳತ್ವ ವಹಿಸಬೇಕು. ಕಾನೂನಿನ ಪರಿಣಾಮ, ಮಹಿಳೆಯರ ಸ್ಥಿತಿ ಗತಿ ಸುಧಾರಿಸಲು ಯೋಜನೆಗಳು ಹಾಗೂ ಕ್ರಿಯೆಗಳು ಮತ್ತು ಲಿಂಗಾಧಾರಿತ ಸಮಾನತೆಯನ್ನು ಸಾಧಿಸಲು ಕಾರ್ಯಗತಗೊಳಿಸಬಹುದಾದ ಮೌಲ್ಯಮಾಪಕ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಎಲ್ಲಾ ಪಕ್ಷಗಳೂ ಒಟ್ಟಿಗೇ ನೆರವಾಗಬೇಕಾಗುತ್ತದೆ.

೮.೪ ಸಣ್ಣ–ಮೀನುಗಾರಿಕೆಯಲ್ಲಿ ಮಹಿಳೆಯರ ಕೆಲಸಕ್ಕೆ ಸೂಕ್ತವೆನಿಸುವ ಹಾಗೂ ಅಗತ್ಯವಾದ ಉತ್ತಮ ತಾಂತ್ರಿಕತೆಗಳ ಅಭಿವೃದ್ಧಿಯನ್ನು ಎಲ್ಲಾ ಪಕ್ಷಗಳೂ ಪ್ರೋತ್ಸಾಹಿಸಬೇಕು.

## ೯. ವಿಪತ್ತುಗಳ ಅಪಾಯಗಳು ಹಾಗೂ ಹವಾಮಾನ ಬದಲಾವಣೆ

೯.೧ ಹವಾಮಾನ ಬದಲಾವಣೆಗೆ ಮೇಲಿನ ಸಂಯುಕ್ತ ರಾಷ್ಟ್ರಗಳ ಫ್ರೇಮ್‌ವರ್ಕ್ ಅಧಿವೇಶನ ದಲ್ಲಿರುವ ಗುರಿಗಳು, ತತ್ವಗಳು ಹಾಗೂ ಕರಾರುಗಳ ಪ್ರಕಾರ, ಸುಸ್ಥಿರ ಅಭಿವೃದ್ಧಿಯ ಮೇಲಿನ ಸಂಯುಕ್ತ ರಾಷ್ಟ್ರಗಳ ಅಧಿವೇಶನದ (ರಿಯೋ+೨೦) ಫಲಿತಾಂಶದ ಹೊತ್ತಿಗೆ 'ನಾವು ಬಯಸುವ ಭವಿಷ್ಯ' ವನ್ನು ಗಣನೆಗೆ ತೆಗೆದುಕೊಂಡು ಸಣ್ಣ– ಪ್ರಮಾಣದ ಮೀನುಗಾರರ ಸುಸ್ಥಿರತೆಗಾಗಿ ಹವಾಮಾನದ ತುರ್ತು ಹಾಗೂ ಮಹತ್ವಾಕಾಂಕ್ಷೆ ಕ್ರಿಯೆಗಳ ಅಗತ್ಯವನ್ನು ಪ್ರಭುತ್ವಗಳು ಗುರುತಿಸಬೇಕಾಗುತ್ತದೆ.

೯.೨ ಸಣ್ಣ –ಪ್ರಮಾಣದ ಮೀನುಗಾರಿಕೆಯಲ್ಲಿ ಪ್ರಕೃತಿ ಹಾಗೂ ಮಾನವ ನಿರ್ಮಿತ ವಿಪತ್ತುಗಳ ಹಾಗೂ ಹವಾಮಾನ ಬದಲಾವಣೆಯ ವಿಭಿನ್ನ ಪರಿಣಾಮಗಳನ್ನು ಎಲ್ಲಾ ಪಕ್ಷಗಳು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಗುರುತಿಸಬೇಕಾಗುತ್ತದೆ. ಮೂಲ ನಿವಾಸಿಗಳು, ಪುರುಷರು, ಮಹಿಳೆಯರನ್ನೊಳಗೊಂಡಂತೆ,

ಪೂರ್ಣಪ್ರಮಾಣದ ಹಾಗೂ ಪರಿಣಾಮಕಾರಿಯಾದ ಸಮಾಲೋಚನೆಗಳನ್ನು ಮೀನುಗಾರ ಸಮುದಾಯಗಳೊಡನೆ ಮಾಡಲು, ಮೂಲೆ ಗುಂಪಾದವರ ಹಾಗೂ ಅಂಚಿಗೆ ಒತ್ತರಿಸ್ಪಟ್ಟ ಗುಂಪುಗಳಿಗೆ ವಿಶೇಷ ಗಮನ ನೀಡುತ್ತಾ ಮೀನುಗಾರಿಕೆಯಲ್ಲಿನ ಹವಾಮಾನ ಬದಲಾವಣೆ, ಮುಖ್ಯವಾಗಿ ಹೊಂದಾಣಿಕೆ ಹಾಗೂ ಕುಗ್ಗಿಸುವಿಕೆಗೆ ಸಂಬಂಧಪಟ್ಟ ತಂತ್ರಗಳು, ಎಲ್ಲಿ ಅಗತ್ಯವೋ ಅಲ್ಲಿ ಮರು ಜೀವನ ಕಟ್ಟುವುದಕ್ಕೋಸ್ಕರ ಪ್ರಭುತ್ವಗಳು ಯೋಜನೆಗಳನ್ನು ಹಾಗೂ ನಕ್ಷೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಸಣ್ಣ ದ್ವೀಪಗಳಲ್ಲಿ ಬದುಕುವ ಸಣ್ಣ ಪ್ರಮಾಣದ ಮೀನುಗಾರರ ಆಹಾರ ಭದ್ರತೆ, ಪೌಷ್ಟಿಕತೆ ಮನೆ ಹಾಗೂ ಬದುಕಿನಾಧಾರಗಳ ಮೇಲೆ ಸ್ಪಷ್ಟವಾದ ಪರಿಣಾಮವನ್ನು ಬೀರುವ ಹವಾಮಾನ ಬದಲಾವಣೆಗೆ ವಿಶೇಷವಾದ ಬೆಂಬಲವನ್ನು ನೀಡಬೇಕಾಗುತ್ತದೆ.

೯.೩ ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿ ಆಪತ್ತುಗಳ ಅಪಾಯ ಹಾಗೂ ಹವಾಮಾನ ಬದಲಾವಣೆ ಕುರಿತು ಮಾತನಾಡಲು ಇತರ ವಿಭಾಗಗಳ ಭಾಗಿತ್ವ ಒಳಗೊಂಡಂತೆ ಎಲ್ಲಾ ಪಕ್ಷಗಳೂ ಅಂತರ್ಗತ ಹಾಗೂ ಸಮಗ್ರ ದೃಷ್ಟಿಕೋನಗಳನ್ನು ಗುರುತಿಸಬೇಕಾಗುತ್ತದೆ. ಮೀನುಗಾರಿಕೆಗೆ ಸಂಬಂಧಪಡದ ಮಾನವ ನಿರ್ಮಿತ ಸಂಗತಿಗಳಿಂದ ನಾಶವಾಗುತ್ತಿರುವ ಕರಾವಳಿಯ ನಿವಾಸಿಗಳು, ಕರಾವಳಿ ಭಾಗದ ನಾಶ, ಮಾಲಿನ್ಯತೆಯಂತಹ ಸಮಸ್ಯೆಗಳನ್ನು ಪ್ರಭತ್ವ ಹಾಗೂ ಇತರ ಭಾಗಿಗಳು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಗತಿಗಳು ಸಣ್ಣ –ಪ್ರಮಾಣದ ಮೀನುಗಾರಿಕೆ ಸಮುದಾಯದಗಳ ಬದುಕಿನಾಧಾರಗಳನ್ನು ಹಾಗೂ ಹವಾಮಾನ ಬದಲಾವಣೆಗಳ ವೈಪರೀತ್ಯಗಳಲ್ಲಿ ತಮ್ಮನ್ನು ಹೊಂದಿಸಿಕೊಂಡು ಹೋಗುವ ಅವರ ಸಾಮರ್ಥ್ಯಗಳನ್ನು ಗಂಭೀರವಾಗಿ ಕುಗ್ಗಿಸುತ್ತವೆ.

೯.೪ ಹವಾಮಾನ ವೈಪರೀತ್ಯ ಅಥವಾ ಪ್ರಾಕೃತಿಕ ಅಥವಾ ಮಾನವ ನಿರ್ಮಿತ ಆಪತ್ತುಗಳಿಂದ ನೊಂದ ಸಣ್ಣ –ಪ್ರಮಾಣದ ಮೀನುಗಾರ ಸಮುದಾಯಗಳಿಗೆ, ಎಲ್ಲಿ ಸಾಧ್ಯವೋ ಅಲ್ಲಿ ಹೊಂದಿಕೊಳ್ಳುವ ಮೂಲಕ, ಕುಗ್ಗಿಸುವ ಮೂಲಕ ಹಾಗೂ ಧನ ಸಹಾಯ ಮೂಲಕ ಬೆಂಬಲಿಸುವುದನ್ನು, ಹಾಗೂ ಸಹಾಯ ಮಾಡುವುದನ್ನು ಪ್ರಭುತ್ವಗಳು ಪರಿಗಣಿಸಬೇಕಾಗುತ್ತದೆ.

೯.೫ ಸಣ್ಣ –ಪ್ರಮಾಣದ ಮೀನುಗಾರರ ಮೇಲೆ ಮನುಷ್ಯರಿಂದ ನಿರ್ಮಿತವಾದ ಆಪತ್ತುಗಳಿಂದ ಅಡ್ಡ ಪರಿಣಾಮಗಳಾಗಿದ್ದರೆ ಅದಕ್ಕೆ ಜವಾಬ್ಧಾರಿಯಾದ ಪಕ್ಷಕ್ಕೆ ಹೊಣೆಗಾರಿಕೆ ನೀಡಬೇಕಾಗುತ್ತದೆ.

೯.೬ ಮೀನು ಪ್ರಕಾರಗಳು ಹಾಗೂ ಪ್ರಮಾಣದಲ್ಲಿ, ಮೀನು ಗುಣ ಅಥವಾ ಜೀವನ, ಮಾರುಕಟ್ಟೆಯ ವಿವಿಧ ಭಾಗಗಳಲ್ಲಿ ನಡೆಯುವ ಬದಲಾವಣೆ ರೂಪದಲ್ಲಿ ಹವಾಮಾನ ಬದಲಾವಣೆ ಹಾಗೂ ಆಪತ್ತುಗಳು ಸುಗ್ಗಿಯ ನಂತರ ಹಾಗೂ ವ್ಯಾಪಾರ ಉಪಕ್ಷೇತ್ರದಲ್ಲಿ ಪರಿಣಾಮ ಬೀರುವುದನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು. ಋಣಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡಲು ಸಣ್ಣ– ಪ್ರಮಾಣದ ಮೀನುಗಾರಿಕೆಯ ಭಾಗಿಗಳಿಗೆ ಹೊಂದಿಸಿಕೊಳ್ಳಬೇಕಾದ ಕ್ರಮಗಳಲ್ಲಿ ಪ್ರಭುತ್ವವು ಬೆಂಬಲ ನೀಡಬೇಕಾಗುತ್ತದೆ. ಯಾವಾಗ ಹೊಸ ತಾಂತ್ರಿಕತೆಗಳು ಪರಿಚಯಿಸಲ್ಪಡುತ್ತವೆಯೋ ಅವು ಉದಾರವಾಗಿರಬೇಕಾಗುತ್ತವೆ ಹಾಗೂ ಮೀನಿನ ಪ್ರಕಾರಗಳಲ್ಲಿ, ಉತ್ಪಾದನೆಯಲ್ಲಿ, ಮಾರುಕಟ್ಟೆಯಲ್ಲಿ ಮತ್ತು ಹವಾಮಾನ ಬದಲಾವಣೆಯಲ್ಲಾಗುವ ಭವಿಷ್ಯದ ಬದಲಾವಣೆಗೆ ಒಗ್ಗಿಕೊಳ್ಳುವಂತಿರಬೇಕಾಗುತ್ತದೆ.

೯.೭ ಸಣ್ಣ –ಮೀನುಗಾರಿಕೆಯಲ್ಲಿ ತುರ್ತು ಪ್ರತಿಕ್ರಿಯೆ ಹಾಗೂ ವಿಪತ್ತಿಗೆ ಸಿದ್ಧವಾಗುರುವಿಕೆ ಹೇಗೆ ಸಂಬಂಧಪಟ್ಟಿವೆ ಎಂಬುದನ್ನು ಪ್ರಭುತ್ವಗಳು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪರಿಹಾರ ಅಭಿವೃದ್ಧಿಯ ಕಲ್ಪನೆಯನ್ನು ನಿರಂತರವಾಗಿ ಮಾಡಬೇಕಾಗುತ್ತದೆ. ತಕ್ಷಣದ ಪರಿಹಾರ ಕಾಲ, ಮತ್ತು ನಿರಾಶ್ರಿತ ತಾಣ, ಮರು ಕಟ್ಟುವಿಕೆ ಹಾಗೂ ಗುಣ ಹೊಂದುವಿಕೆಯನ್ನು ಒಳಗೊಂಡಂತೆ ಅಂಚಿಗೆ ತಳ್ಳಲ್ಪಡುವ ಭವಿಷ್ಯದ ಸಮರ್ಥ ಅಪಾಯಗಳನ್ನು ಕಡಿಮೆ ಮಾಡುವಂತಹ ಧೀರ್ಘ ಕಾಲದ ಗುರಿಗಳನ್ನು ತುರ್ತು ಪರಿಸ್ಥಿತಿಯ ಸರಣಿಯ ಕೊನೆಯವರೆಗೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿಪತ್ತುಗಳ ಪ್ರತಿಕ್ರಿಯೆ, ಹಾಗೂ ಮರು ವಸತಿ ಕಲ್ಪಿಸುವಲ್ಲಿ 'ಉತ್ತಮವಾದ ಮರುಕಟ್ಟುವಿಕೆ' ಯ ಕಲ್ಪನೆಯನ್ನು ಅನ್ವಯಿಸಬೇಕಾಗುತ್ತದೆ.

೯.೮ ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದ ಪ್ರಯತ್ನಗಳಲ್ಲಿ ಎಲ್ಲಾ ಪಕ್ಷಗಳೂ ಸಣ್ಣ–ಪ್ರಮಾಣದ ಮೀನುಗಾರಿಕೆಯ ಪಾತ್ರವನ್ನು ಉತ್ತೇಜಿಸಬೇಕು. ಮೀನು ಹಿಡಿಯುವ, ಸುಗ್ಗಿಯ ನಂತರ, ಮಾರಾಟ ಹಾಗೂ ಹಂಚುವಿಕೆಯ ಎಲ್ಲಾ ಮೌಲಿಕ ಸರಣಿಗಳಲ್ಲಿ ಇಂಧನ ಶಕ್ತಿಯನ್ನು ಪ್ರೋತ್ಸಾಹಿಸಬೇಕು ಹಾಗೂ ಬೆಂಬಲಿಸಬೇಕು.

೯.೯ ಹವಾಮಾನ ಬದಲಾವಣೆಯ ಹೊಂದಿಕೊಳ್ಳವಿಕೆಗೆ ಸೂಕ್ತವಾದಂತೆ ಹೊಂದಿಕೆಯ ಧನ ಸಹಾಯ, ಸೌಕರ್ಯಗಳು, ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾಗಿರುವ ತಾಂತ್ರಿಕತೆಯ ಪಾರದರ್ಶಕ ಲಭ್ಯತೆ ಸಿಗುವಂತೆ ಮಾಡುವುದನ್ನು ಪ್ರಭುತ್ವಗಳು ಪರಿಗಣಿಸಬೇಕು.

# ಭಾಗ ೩

# ಸಮರ್ಥ ಪರಿಸರಕ್ಕೆ ಭರವಸೆ ಹಾಗೂ ಜಾರಿಗೊಳಿಸುವಿಕೆಗೆ ಬೆಂಬಲ ನೀಡುವುದು

### ೧೦. ಯೋಜನೆ ಸುಸಂಬದ್ಧತೆ, ಸಂಸ್ಥೆಗಳ ಸಂಯೋಜನೆ ಮತ್ತು ಸಹಭಾಗಿತ್ವ

೧೦.೧ ಯೋಜನೆಯ ಸುಸಂಬದ್ಧತೆ, ಸಾಂಸ್ಥಿಕ ಸಂಯೋಜನೆ ಮತ್ತು ಸಹಭಾಗಿತ್ವ ರಾಷ್ಟ್ರೀಯ ಕಾನೂನುಗಳು, ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು :

ಇತರೇ ಅಂತರ್ ರಾಷ್ಟ್ರೀಯ ಅಸ್ತ್ರಗಳು – ಮೂಲ ನಿವಾಸಿಗಳನ್ನೂ ಒಳಗೊಳ್ಳುವಂತಹವುಗಳನ್ನು ಒಳಗೊಂಡು ಆರ್ಥಿಕ ಅಭಿವೃದ್ಧಿ ಯೋಜನೆಗಳು; ಇಂಧನ, ಶಿಕ್ಷಣ, ಆರೋಗ್ಯ ಮತ್ತು ಹಳ್ಳಿಗಾಡಿನ ಯೋಜನೆಗಳು, ಪರಿಸರ ರಕ್ಷಣೆ, ಆಹಾರ ಭದ್ರತೆ ಹಾಗೂ ಪೌಷ್ಟಿಕ ಯೋಜನೆಗಳು, ಶ್ರಮ ಮತ್ತು ಔದ್ಯೋಗಿಕ ಯೋಜನೆಗಳು, ವ್ಯಾಪಾರ ಯೋಜನೆಗಳು, ವಿಪತ್ತುಗಳ ಅಪಾಯ ನಿರ್ವಹಣೆ, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆಯ ಯೋಜನೆಗಳು, ಮೀನುಗಾರರ ಲಭ್ಯತೆಯ ಸಿದ್ಧತೆಗಳು; ಮತ್ತು ಇತರ ಕ್ಷೇತ್ರದ ಯೋಜನೆಗಳು, ನಕಾಶೆಗಳು, ಕ್ರಿಯೆಗಳು ಮತ್ತು ಬಂಡವಾಳ ತೊಡಗಿಸುವಿಕೆ ಇವುಗಳಿಗೆ ಸಂಬಂಧಿಸಿದಂತೆ ಸಣ್ಣ–ಪ್ರಮಾಣದ ಮೀನುಗಾರಿಕೆಯಲ್ಲಿ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸಲು ಪ್ರಭುತ್ವಗಳು ಯೋಜನೆಯ ಸುಸಂಬದ್ಧತೆ ಗುರುತಿಸುವ ಹಾಗೂ ಅದಕ್ಕಾಗಿ ಕೆಲಸ ಮಾಡುವ ಅಗತ್ಯವಿದೆ. ಲಿಂಗ ಸರ್ವ ಸಮತೆಗೆ ಹಾಗೂ ಸಮಾನತೆಗೆ ವಶೇಷ ಗಮನ ನೀಡಬೇಕಾಗುತ್ತದೆ.

೧೦.೨ ಕರಾವಳಿ ಭಾಗದ ಮೀನುಗಾರಿಕೆಯ ಆಸಕ್ತಿಗಳು ಹಾಗೂ ಸಮಗ್ರ ಕರಾವಳಿ ಆಡಳಿ ವ್ಯವಸ್ಥೆಯ ಪಾತ್ರವನ್ನು ಗುರುತಿಸುವಂತಹ ಒಳನಾಡು ಹಾಗೂ ಸಮುದ್ರಗಳ ವಿಶಾಲ ಯೋಜನೆ ಒಳಗೊಂಡಂತೆ ವಿಶಾಲವಾದ ಯೋಜನೆಗಳ ದೃಷ್ಟಿಕೋನವನ್ನು ಪ್ರಭುತ್ವಗಳು ಸೂಕ್ತವೆನಿಸುವಂತೆ ಉಪಯೋಗಿಸಬೇಕಾಗುತ್ತದೆ ಹಾಗೂ ಅಭಿವೃದ್ಧಿ ಪಡಿಸಬೇಕಾಗುತ್ತದೆ. ಸಮಾಲೋಚನೆಯ ಮೂಲಕ ಭಾಗವಹಿಸುವಿಕೆ ಮತ್ತು ಪ್ರಚಾರ, ಲಿಂಗ ಸೂಕ್ಷ್ಮ ಯೋಜನೆಗಳು, ಮತ್ತು ಕಾನೂನುಗಳ ಮೇಲೆ ನಿಯಂತ್ರಣ ಗಳನ್ನು ಸೂಕ್ತವೆನ್ನಿಸುವ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕಾಗತ್ತದೆ. ಸೂಕ್ತವೆನಿಸುವ ಸಣ್ಣ– ಪ್ರಮಾಣದ ಮೀನುಗಾರಿಕೆಯಲ್ಲಿ ಸಂಪ್ರದಾಯ ಬದ್ಧ ಭೂಮಿ ಕಾಲಾವಧಿಯಲ್ಲಿ ಹಾಗೂ ಅವರ ಸಮುದಾಯದ ಒಳಗೇ ಉಪಯೋಗಿಸಿದ್ದ ನಿರ್ಧಾರ ಮಾಡುವ ಕಾರ್ಯವಿಧಾನಗಳನ್ನು ಯೋಜನೆ ಹಾಗೂ ಪ್ರಾಂತ್ಯದ ಮಾದರಿಗಳಲ್ಲಿ ಬಳಸುವುದಕ್ಕೆ ವಿಶಿಷ್ಟ ಯೋಜನಾ ವ್ಯವಸ್ಥೆಗಳು ಗಣನೆಗೆ ತೆಗೆದುಕೊಳ್ಳಬೇಕು.

೧೦.೩ ಸಮುದ್ರದ ಹಾಗೂ ಒಳನಾಡಿನ ನೀರಿನ ಅಂಶಗಳು ಹಾಗೂ ಪರಿಸರಗಳ ಮೇಲೆ ಪರಿಣಾಮ ಬೀರುವ ಯೋಜನೆಗಳನ್ನು ಸಾಮರಸ್ಯಗೊಳಿಸುವುದಕ್ಕೆ ಮೀನುಗಾರಿಕೆ, ವ್ಯವಸಾಯ ಹಾಗೂ ಇತರ ಸಂಪನ್ಮೂಲಯೋಜನೆಗಳು ಅವುಗಳ ಕ್ಷೇತ್ರದಿಂದ ಪಡೆದುಕೊಂಡ ಅಂತರ್ ಸಂಬಂಧಗಳ ಜೀವನಾಧಾರಗಳ ಒಗ್ಗೂಡಿದ ಪ್ರಯತ್ನ ಹೆಚ್ಚಿಸುವುದಕ್ಕೆ ಪ್ರಭುತ್ವಗಳು ನಿರ್ಧಿಷ್ಟ ಪರಿಹಾರಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

೧೦.೪ ಪರಿಸರದ ವ್ಯವಸ್ಥೆಯ ದೃಷ್ಟಿಕೋನವನ್ನು ಅಳವಡಿಸಿಕೊಂಡು ಮೀನುಗಾರಿಕೆಯ ಯೋಜನೆಗಳು ಸುಸ್ಥಿರಾತ್ಮಕ ಸಣ್ಣ– ಪ್ರಮಾಣದ ಮೀನುಗಾರಿಕೆಗೆ ಹಾಗೂ ಹಸಿವೆ ಮತ್ತು ಬಡತನವನ್ನು ನಿರ್ಮೂಲನ ಮಾಡುವುದಕ್ಕೆ ಮೀನುಗಾರಿಕೆಯ ಯೋಜನೆಯಲ್ಲಿ ಧೀರ್ಘ ಕಾಲದ ವಿಷನ್ ಹೊಂದಿರುವುದನ್ನು ಪ್ರಭುತ್ವಗಳು ಧೃಡಪಡಿಸಬೇಕಾಗುತ್ತದೆ. ಮೂಲೆ ಗುಂಪಾದವರಿಗೆ ಹಾಗೂ ಅಂಚಿಗೆ ಒತ್ತರಿಸಲ್ಪಟ್ಟವರಿಗೆ ವಿಶೇಷ ಗಮನ ನೀಡುತ್ತಾ ಯೋಜನೆಯ ಮೀನುಗಾರಿಕೆಯ ಒಟ್ಟು ಚೌಕಟ್ಟು ಸಣ್ಣ –ಪ್ರಮಾಣದ ಮೀನುಗಾರಿಕೆಗೆ ಹಾಗೂ ಮಾನವ ಹಕ್ಕುಗಳ ಬಗೆಗೆ ಧೀರ್ಘಕಾಲದ ನೋಟ (ವಿಷನ್) ಹಾಗೂ ಯೋಜನಾ ದೃಷ್ಟಿಕೋನ ಹೊಂದಿರುವುದನ್ನು ಪ್ರಭುತ್ವಗಳು ಮನಗಾಣಿಸಬೇಕಾಗುತ್ತದೆ.

೧೦.೫ ಮೀನುಗಾರಿಕೆಯ ಕ್ಷೇತ್ರದಲ್ಲಿ ಯೋಜನಾ ಸುಸಂಬದ್ಧತೆ, ವಿವಿಧ ವಿಭಾಗಗಳ ಸಾಮರಸ್ಯ, ಸಮಗ್ರತೆ ಹಾಗೂ ಎಲ್ಲವನ್ನೂ ಒಳಗೊಳ್ಳುವ ಪರಿಸರಾತ್ಮಕ ದೃಷ್ಟಿಕೋನಗಳನ್ನು ಸಾಧಿಸಲು ಸ್ಥಳೀಯ, – ರಾಷ್ಟ್ರೀಯ–ಪ್ರಾದೇಶಿಕ – ವಿಶ್ವದ ಕೊಂಡಿಗಳನ್ನು ಹಾಗೂ ನೆಟ್‌ವರ್ಕಗಳನ್ನು ಒಳಗೊಂಡಂತೆ ಪ್ರಭುತ್ವಗಳು ಸಾಂಸ್ಥಿಕ ರಚನೆಗಳನ್ನು ಹಾಗೂ ಕೊಂಡಿಗಳನ್ನು ರಚಿಸಬೇಕಾಗುತ್ತದೆ ಹಾಗೂ ಉತ್ತೇಜಿಸಬೇಕಾಗುತ್ತದೆ.

೧೦.೬ ಸಣ್ಣ–ಪ್ರಮಾಣದ ಮೀನುಗಾರಿಕೆಯ ಭಾಗಿಗಳು ಮೀನುಗಾರಿಕೆ ಸಹಕಾರಿ ಸಂಸ್ಥೆಗಳ ಹಾಗೂ ನಾಗರಿಕ ಸಮಾಜ ಸಂಸ್ಥೆಗಳನ್ನೊಳಗೊಂಡಂತೆ ತಮ್ಮ ಔದ್ಯೋಗಿಕ ಸಂಸ್ಥೆಗಳ ಜೊತೆಗೆ ಸಾಮರಸ್ಯವನ್ನು ಉತ್ತೇಜಿಸಬೇಕು. ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ನಿರ್ಧಾರ ಮಾಡುವ ಪ್ರಕ್ರಿಯೆಯಲ್ಲಿ ಭಾಗಿಗಳಾಗುವಂತೆ ಪ್ರೋತ್ಸಾಹಿಸಲು, ಅವರ ಅನುಭವಗಳನ್ನು ಹಾಗೂ ಮಾಹಿತಿಯನ್ನು ಹಂಚಿಕೊಳ್ಳಲು ಅವರಿಗೆ ಜಾಲತಾಣ (ನೆಟ್ ವರ್ಕ್) ಹಾಗೂ ವೇದಿಕೆ ರೂಪಿಸಬೇಕು.

೧೦.೭ ಪರಿಸರ ದೃಷ್ಟಿಕೋನ ಹಾಗೂ ರಾಷ್ಟ್ರೀಯ ಕಾನೂನನ್ನು ಗಣನೆಗೆ ತೆಗೆದುಕೊಂಡು ಸಣ್ಣ–ಪ್ರಮಾಣದ ಮೀನುಗಾರಿಕೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡಬಲ್ಲ ಸ್ಥಳೀಯ ಆಡಳಿತ ವ್ಯವಸ್ಥೆಗಳನ್ನು ಪ್ರಭುತ್ವಗಳು ಗುರುತಿಸಿ ಸೂಕ್ತವೆನ್ನಿಸುವ ರೀತಿಯಲ್ಲಿ ಉತ್ತೇಜಿಸಬೇಕು.

೧೧.೮ ಸಣ್ಣ – ಪ್ರಮಾಣದ ಮೀನುಗಾರಿಕೆಯಲ್ಲಿ ಸುಸ್ಥಿರತೆ ಪಡೆದುಕೊಳ್ಳುವುದಕ್ಕಾಗಿ ಪ್ರಭುತ್ವಗಳು ಅಂತರರಾಷ್ಟ್ರೀಯ ,ಪ್ರಾದೇಶಿಕ ಹಾಗೂ ಉಪ ಪ್ರಾದೇಶಿಕ ಪ್ರದೇಶಗಳ ಸಹಕಾರವನ್ನು ಪ್ರಭುತ್ವಗಳು ಉತ್ತೇಜಿಸಬೇಕು. ಸಣ್ಣ– ಪ್ರಮಾಣದ ಮೀನುಗಾರರ ತಿಳುವಳಿಕೆ ಹೆಚ್ಚಿಸಲು ಹಾಗೂ ಉಪಕ್ಷೇತ್ರಗಳಿಗೆ ಸಹಾಯ ಮಾಡಲು ಸೂಕ್ತ ಹಾಗೂ ಪರಸ್ಪರ ಒಪ್ಪಂದದ ತಾಂತ್ರಿಕ ವರ್ಗಾವಣೆಗಳನ್ನೊಳಗೊಂಡಂತೆ ಉಪ ಪ್ರಾದೇಶಿಕ, ಪ್ರಾದೇಶಿಕ ಹಾಗೂ ಅಂತರ್ ರಾಷ್ಟ್ರೀಯ ಒಗ್ಗೂಡುವಿಕೆಯಂತಹ ವಿಚಾರಗಳಲ್ಲಿ ಪ್ರಭುತ್ವಗಳು ಹಾಗೂ ಅಂತರ್ ರಾಷ್ಟ್ರೀಯ,ಪ್ರಾದೇಶಿಕ , ಉಪ ಪ್ರಾದೇಶಿಕ ಸಂಸ್ಥೆಗಳು ಸೂಕ್ತವೆನ್ನುಸುವಲ್ಲಿ ಸಾಮರ್ಥ್ಯಗಳ ಬೆಳವಣಿಗೆಯನ್ನು ಉತ್ತೇಜಿಸಬೇಕಾಗುತ್ತದೆ.

## ೧೧. ಮಾಹಿತಿ, ಸಂಶೋಧನೆ ಮತ್ತು ಸಂವಹನ

ಮೀನಿನ ಸಂಗ್ರಹಣೆ ಒಳಗೊಂಡಂತೆ ಪರಿಸರದ ಸುಸ್ಥಿತಿಯನ್ನು ಕಾಪಾಡುವುದಕ್ಕಾಗಿ ಸಣ್ಣ –ಪ್ರಮಾಣದ ಮೀನುಗಾರಿಕೆಯ ಭಧ್ರತೆಯನ್ನು ಕಾಪಾಡಲು ಬೇಕಾದ ಸುಸ್ಥಿರ ನಿರ್ವಹಣೆಗಾಗಿ ಜೀವ ಪರಿಸರ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಕಿ– ಅಂಶಗಳನ್ನು ಒಳಗೊಂಡಂತೆ ಪ್ರಭುತ್ವಗಳು ಮೀನುಗಾರಿಕೆಯ ಅಂಕಿ–ಅಂಶದ ಸಂಗ್ರಹಣೆಗೆ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಬೇಕು. ಲಿಂಗ ಬೇರ್ಪಟ್ಟಿರುವುದನದನ್ನು ಸರಿಪಡಿಸುವ ಅಧಿಕೃತ ಅಂಕಿ ಅಂಶಗಳನ್ನು ಉತ್ಪಾದಿಸುವ ಹಾಗೂ ತಿಳುವಳಿಕೆಗಳ ಹೆಚ್ಚಳಿಕೆಗಾಗಿ ಸಾಮಾಜಿಕ ಹಾಗೂ ಆರ್ಥಿಕ ವಿಚಾರಗಳನ್ನು ಒಳಗೊಂಡಂತೆ ಮೀನುಗಾರರು ಹಾಗೂ ಅದರ ಭಿನ್ನ ವಿಭಾಗಗಳ ಮೀನುಗಾರರು ಮುಖ್ಯವಾಗಿ ಕಾಣಿಸಿಕೊಳ್ಳುವುದಕ್ಕಾಗಿ ಪ್ರಯತ್ನ ಪಡಬೇಕು.

೧೧.೨ ನಿರ್ಧಾರ ಮಾಡುವ ಹಂತಕ್ಕೆ ಮುಖ್ಯವಾದ ಮಾಹಿತಿ ಹಾಗೂ ಸಂವಹನದ ಅಗತ್ಯವನ್ನು ಎಲ್ಲಾ ಭಾಗಿಗಳು ಹಾಗೂ ಸಣ್ಣ– ಪ್ರಮಾಣದ ಮೀನುಗಾರಿಕೆಯ ಸಮುದಾಯಗಳು ಗುರುತಿಸಬೇಕು.

೧೧.೩ ನಿರ್ಧಿಷ್ಟವಾಗಿ ಪಾರದರ್ಶಕತೆಯನ್ನು ಹೆಚ್ಚಿಸುವ ಮೂಲಕ, ನಿರ್ಧಾರ ಮಾಡಿದವರನ್ನು ಹೊಣೆಗಾರರನ್ನಾಗಿಸುವ ಮೂಲಕ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳಲ್ಲಿ ಸೂಕ್ತವಾದ ಭಾಗವಹಿಸುವಿಕೆ ಹಾಗೂ ಸಂವಹನದ ಮೂಲಕ ನಿಷ್ಪಕ್ಷಪಾತ ನಿರ್ಧಾರಗಳನ್ನು ಬೇಗನೇ ತಿಳಿಸುವುದರ ಮೂಲಕ ಪ್ರಭುತ್ವಗಳು ಲಂಚವನ್ನು ತಡೆಯಲು ಪ್ರಯತ್ನಿಸಬೇಕಾಗುತ್ತದೆ.

೧೧.೪ ಸಣ್ಣ–ಪ್ರಮಾಣದ ಮೀನಿಗಾರಿಕೆ ಸಮುದಾಯಗಳು ಜ್ಞಾನ ಹೊಂದಿದವರೆಂಬುದನ್ನ, ಕೊಡುವ ಹಾಗೂ ತೆಗೆದುಕೊಳ್ಳಬಲ್ಲರೆಂಬುದನ್ನು ಪ್ರಭುತ್ವಗಳು ಗುರುತಿಸಬೇಕು. ಜೀವನಾಧಾರಗಳಲ್ಲಿ ಸಬಲರನ್ನಾಗಿಸಲು, ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಹೋರಾಡಲು ಸಣ್ಣ–ಪ್ರಮಾಣದ ಮೀನುಗಾರ ಸಮುದಾಯಗಳಿಗೆ ಹಾಗೂ ಅವರ ಸಂಸ್ಥೆಗಳಿಗೆ ಸೂಕ್ತವಾದ ಮಾಹಿತಿಯ ಲಭ್ಯತೆಯ ಅಗತ್ಯವಿದೆ ಎಂಬುದನ್ನು ಮುಖ್ಯವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸಮುದಾಯಗಳು ಎದುರಿಸುತ್ತಿರುವ ಪ್ರಸ್ತುತ ಸಮಸ್ಯೆಗಳ ಮೇಲೆ ಹಾಗೂ ದೈಹಿಕ, ಆರ್ಥಿಕ, ಸಾಮಾಜಿಕ ಹಾಗೂ ಮೀನುಗಾರಿಕೆಯ ಸಂಸ್ಕೃತಿ ವಿಚಾರಗಳು ಹಾಗೂ ಅವರ ಜೀವನಾಧಾರಗಳ ಸಂಬಂಧಿತವಾಗಿ ಈ ಮಾಹಿತಿಯ ಅಗತ್ಯಗಳು ಅವಲಂಬಿತವಾಗಿರುತ್ತವೆ.

೧೧.೫ ಕಾನೂನು ಬಾಹಿರ, ವರದಿಯಾಗದಿರುವ ಹಾಗೂ ನಿಯಂತ್ರಣ ಹೊಂದಿರದ ಮೀನುಗಾರಿಕೆಯ ಮೇಲಿನ ಮಾಹಿಗಳನ್ನು ಒಳಗೊಂಡಂತೆ, ಜವಾಬ್ಧಾರಿಯುತ ಸಣ್ಣ– ಪ್ರಮಾಣದ ಮೀನುಗಾರಿಕೆಗೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾದ ಮಾಹಿತಿ ದೊರೆಯುತ್ತದೆ ಎಂಬುದನ್ನು ಪ್ರಭುತ್ವಗಳು ದೃಢಪಡಿಸಬೇಕಾಗುತ್ತದೆ. ಆ ಮಾಹಿತಿಗಳು ಇತರ ಸಂಗತಿಗಳೊಡನೆ ವಿಪತ್ತುಗಳ ಆಪತ್ತುಗಳು, ಹವಾಮಾನ ಬದಲಾವಣೆ, ಜೀವನಾಧಾರಗಳು ಮತ್ತು ಆಹಾರ ಭದ್ರತೆಗೆ ಸಂಬಂಧಿಸಿರಬೇಕು. ಇಲ್ಲಿ ಅಂಚಿಗೊತ್ತರಿಸಲ್ಪಟ್ಟವರಿಗೆ ಹಾಗೂ ಮೂಲೆಗುಂಪಾದವರ ಸಂಸ್ಕೃತಿಗೆ ವಿಶೇಷವಾದ ಗಮನ ನೀಡಬೇಕು. ಅಂಕಿ 'ಅಂಶಗಳು ಕಡಿಮೆ ಲಭ್ಯತೆ ಇರುವಂತಹ ಪ್ರದೇಶಗಳಲ್ಲಿ ಕಡಿಮೆ ಅಂಕಿ' ಅಂಶದ ಅಗತ್ಯವಿರುವ ಮಾಹಿತಿ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ.

೧೧.೬ ಮೂಲನಿವಾಸಿಗಳದ್ದೂ ಒಳಗೊಂಡಂತೆ, ಸಣ್ಣ– ಪ್ರಮಾಣದ ಮೀನುಗಾರಿಕೆ ಸಮುದಾಯಗಳ ಜ್ಞಾನ, ಸಂಸ್ಕೃತಿ, ಸಂಪ್ರದಾಯಗಳು ಮತ್ತು ರೂಢಿಗಳನ್ನು ಗುರುತಿಸಬೇಕು, ಹಾಗೂ ಸೂಕ್ತವಾದ ರೀತಿಯಲ್ಲಿ ಬೆಂಬಲಿಸಬೇಕು. ಇವು ಜವಾಬ್ಧಾರಿಯುತ ಸ್ಥಳೀಯ ಆಡಳಿತ, ಹಾಗೂ ಸುಸ್ಥಿರವಾದ ಅಭಿವೃದ್ಧಿ ಕಾರ್ಯ ವಿಧಾನಗಳಿಗೆ ಮಾಹಿತಿ ನೀಡುತ್ತದೆ. ಮಹಿಳಾ ಮೀನುಗಾರರ ಹಾಗೂ ಮೀನಿನ ಕೆಲಸಗಾರರ ನಿರ್ಧಿಷ್ಟ ಜ್ಞಾನವನ್ನು ಗುರುತಿಸಿ ಬೆಂಬಲಿಸಬೇಕು. ಸುಸ್ಥಿರಾತ್ಮಕ ಮೀನುಗಾರಿಕೆಯ ಕಾಪಾಡುವಿಕೆ, ನಿರ್ವಹಣೆ, ಹಾಗೂ ಅಭಿವೃದ್ಧಿಗಳಲ್ಲಿ ಅದರ ಅನ್ವಯತೆ ಯನ್ನು ಅಳೆಯಲು, ಪ್ರಭುತ್ವಗಳು ಮೀನುಗಾರಿಕೆಯ ಪಾಂಪ್ರದಾಯಕ ಜ್ಞಾನ ಹಾಗೂ ತಾಂತ್ರಿಕತೆಗಳ ಬಗ್ಗೆ ಸಂಶೋಧನೆ ಮಾಡಿ ದಾಖಲೆ ಮಾಡಬೇಕಾಗುತ್ತದೆ.

೧೧.೭ ವಿಶೇಷವಾಗಿ ಮೂಲನಿವಾಸಿಗಳು ಮತ್ತು ಮಹಿಳೆಯರಿಗೆ, ಯಾರು ಮೀನುಗಾರಿಕೆಯ ಮೇಲೆ ಬದುಕಿನ ನಿರ್ವಹಣೆಗಾಗಿ ಅವಲಂಬಿತರಾಗಿರುತ್ತಾರೋ ಅವರಿಗೆ ಸಂಘಟಿಸುವುದಕ್ಕೆ, ನಿರ್ವಹಣೆಗೆ, ವಿನಿಮಯಕ್ಕೆ, ಜಲಚರದ ಸಂಪನ್ಮೂಲಗಳ ಮತ್ತು ಮೀನುಹಿಡಿಯುವ ಸಾಂಪ್ರದಾಯಕ ಜ್ಞಾನ ಹೆಚ್ಚಿಸುವುದಕ್ಕೆ ಹಾಗೂ ಜಲಚರದ ಜ್ಞಾನವನ್ನು ವಿಸ್ತರಿಸಲು ಪ್ರಭುತ್ವಗಳು ಹಾಗೂ ಇತರ ಪ್ರಸ್ತುತ ಭಾಗಿಗಳು ಸೂಕ್ತವೆನಿಸುವಂತೆ ತಾಂತ್ರಿಕ ಹಾಗೂ ಧನ ಸಹಾಯವನ್ನು ಸಣ್ಣ– ಪ್ರಮಾಣದ ಮೀನುಗಾರರಿಗೆ ನೀಡಬೇಕಾಗುತ್ತದೆ.

೧೧.೮ ನೇರ ಹಾಗೂ ಅಡ್ಡ ರೀತಿಯ ಎರೆಡೂ ದಾರಿಯ ಮಾಹಿತಿ ಹರಿಯುವಿಕೆಯನ್ನು ಒಳಗೊಂಡಂತೆ, ಸಮುದಾಯ, ರಾಷ್ಟ್ರೀಯ,

ಉಪ ಪ್ರಾದೇಶಿಕ ಮತ್ತು ಪ್ರಾದೇಶಿಕ ಹಂತಗಳಲ್ಲಿ ಅಸ್ತಿತ್ವದಲ್ಲಿರುವ ಸೂಕ್ತವಾಗಿರುವ ವೇದಿಕೆ ಹಾಗೂ ಜಾಲತಾಣಗಳನ್ನು (ನೆಟ್‌ವರ್ಕ್) ಬಳಸಿಕೊಳ್ಳುವ ಅಥವಾ ಅವುಗಳನ್ನು ರಚಿಸುವ ಮೂಲಕ ಎಲ್ಲಾ ಪಕ್ಷಗಳು ಗಡಿಯಾಚೆಯ ಜಲ ಸಂಪನ್ಮೂಲಗಳನ್ನೊಳಗೊಂಡಂತೆ ಲಭ್ಯತೆ, ಹರಿಯುವಿಕೆ, ಮತ್ತು ಮಾಹಿತಿ ವಿನಿಮಯಗೊಳ್ಳುವುದನ್ನು ಉತ್ತೇಜಿಸಬೇಕು. ಸಾಮಾಜಿಕ ಮತ್ತು ಸಾಂಸ್ಕೃತಿಕ ಹರವು, ಸೂಕ್ತವಾದ ದೃಷ್ಟಿಕೋನಗಳನ್ನು ಗಮನಕ್ಕೆ ತೆಗೆದುಕೊಂಡು, ಮಾಧ್ಯಮ ಹಾಗೂ ಉಪಕರಣಗಳನ್ನು ಸಂವಹನೆಗೆ ಹಾಗೂ ಸಣ್ಣ–ಪ್ರಮಾಣದ ಮೀನುಗಾರಿಕೆಯ ಅಭಿವೃದ್ಧಿಗೆ ಬಳಸಬೇಕಾಗುತ್ತದೆ.

೧೧.೯ ಸಣ್ಣ– ಪ್ರಮಾಣದ ಮೀನುಗಾರಿಕೆಯ ಸಂಶೋಧನೆಗೆ, ಸಂಘಟನಾತ್ಮಕ ಹಾಗೂ ಭಾಗವಹಿಸುವಿಕೆಯ ಅಂಕಿ–ಅಂಶ ಸಂಗ್ರಹಣೆಗೆ, ವಿಶ್ಲೇಷಣೆಗೆ, ಮತ್ತು ಸಶೋಧನೆಗಳಿಗೆ ಧನ ಸಹಾಯ ಸಿಗುತ್ತದೆ ಎಂಬುದನ್ನು ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಸ್ವಲ್ಪಮಟ್ಟಿಗೆ ಸ್ಪಷ್ಟಪಡಿಸಬೇಕಾಗುತ್ತದೆ. ಈ ಸಂಶೋಧನೆಯ ಜ್ಞಾನವನ್ನು ನಿರ್ಧಾರ ಮಾಡುವ ಹಂತದಲ್ಲಿ ಜ್ಞಾನವನ್ನು ಅಂತರ್ಗತ ಮಾಡಲು ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಉತ್ಸಾಹ ತೋರಿಸಬೇಕಾಗುತ್ತದೆ. ಸಂಶೋಧನೆಯ ಸಂಸ್ಥೆಗಳು ಮತ್ತು ಸಂಘಟನೆಗಳು ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಸಂಶೋಧನೆಯಲ್ಲಿ ಹಾಗೂ ಸಂಶೋಧನೆಯ ಫಲಿತಗಳನ್ನು ಉಪಯೋಗಿಸುವುದಕ್ಕಾಗಿ ಅವರ ಸಾಮರ್ಥಗಳ ಅಭಿವೃದ್ಧಿಯನ್ನು ಬೆಂಬಲಿಸಬೇಕು. ಸುಸ್ಥಿರ ಸಂಪನ್ಮೂಲಗಳ ಬಳಕೆಯಲ್ಲಿ ಹಾಗೂ ಪೌಷ್ಟಿಕತೆ, ಬಡತನ ನಿರ್ಮೂಲಗಳಲ್ಲಿ ವಿಪತ್ತು ಅಪಾಯ ನಿರ್ವಹಣೆ ಹಾಗೂ ನಾಗರಿಕ ಸಮಾಜ ಸಂಸ್ಥೆಗಳನ್ನು ಪರಿಗಣನೆಗೆ ತೆಗೆದುಕೊಂಡು ಬೆಂಬಲಿಸಬೇಕಾಗುತ್ತದೆ.

೧೧.೧೦ ವಲಸೆ ಮೀನುಗಾರರು ಹಾಗೂ ಮೀನಿನ ಕೆಲಸಗಾರರನ್ನು ಒಳಗೊಂಡಂತೆ, ಇತರ ಸಂಗತಿಗಳ ಜೊತೆ, ಆರೋಗ್ಯ, ಶಿಕ್ಷಣ, ನಿರ್ಧಾರ ಮಾಡುವ, ಲಿಂಗ ಸಂಬಂಧದಲ್ಲಿ ಮೀನುಗಾರಿಕೆಯಲ್ಲಿ ಸರ್ವ ಸಮತೆಯ ಲಾಭವನ್ನು ಪಡೆಯಲು ಪುರುಷರಿಗೆ ಹಾಗೂ ಮಹಿಳೆಯರಿಗೆ ಅನುವು ಆಗುವಂತೆ ತಂತ್ರಗಳ ಮಾಹಿತಿಯನ್ನು ನೀಡಲು ಪ್ರಭುತ್ವಗಳು ಹಾಗೂ ಇತರ ಪ್ರಸ್ತುತ ಭಾಗಿಗಳು ಕೆಲಸದ ಸ್ಥಿತಿ ಗತಿಯ ಮೇಲೆ ಸಂಶೋಧನೆಯನ್ನು ಉತ್ತೇಜಿಸಬೇಕು. ಲಿಂಗಾಧಾರಿತ ಪ್ರಧಾನ ಸಂಸ್ಕೃತಿಯ ರೂಪಿಸುವ ಪ್ರಕ್ರಿಯೆಯಲ್ಲಿ ಲಿಂಗಾಧಾರಿತ ಸೂಕ್ಷ್ಮಗಳ ಮಧ್ಯಪ್ರವೇಶಿಕಗೋಸ್ಕರ ಸಣ್ಣ –ಪ್ರಮಾಣದ ಮೀನುಗಾರಿಕೆಯ ಯೋಜನೆಗಳ ನಕ್ಷೆಯಲ್ಲಿಯಲ್ಲಿ ಲಿಂಗದ ವಿಶ್ಲೇಷಣೆ ಒಳಗೊಳ್ಳುವುದು, ಕಾರ್ಯಕ್ರಮಗಳಲ್ಲಿ ಹಾಗೂ ಪ್ರಾಜೆಕ್ಸ್ ಗಳನ್ನು ರೂಪಿಸಬೇಕಾಗುತ್ತದೆ. ಲಿಂಗಾಧಾರಿತ ಸೂಕ್ಷ್ಮ ಸಂಗತಿಗಳನ್ನು ಮೇಲ್ವಿಚಾರಣೆ ಮಾಡಲು ಹಾಗೂ ಲಿಂಗ ಅಸಮಾನತೆ ಕುರಿತು ಮಾತನಾಡುವಾಗ ಬಳಸಬೇಕಾಗುತ್ತದೆ. ಹಾಗೂ ಮಧ್ಯ ಪ್ರವೇಶಿಕೆಗಳು ಸಾಮಾಜಿಕ ಬದಲಾವಣೆಗೆ ಹೊಸ ಕೊಡುಗೆ ನೀಡಿವೆ ಎಂಬುದನ್ನು ದಾಖಲಿಸಬೇಕಾಗುತ್ತದೆ.

೧೧.೧೧ ಸಮುದ್ರ ಆಹಾರಗಳ ಉತ್ಪಾದನೆಯಲ್ಲಿ ಸಣ್ಣ–ಪ್ರಮಾಣದ ಮೀನುಗಾರಿಕೆಯ ಪಾತ್ರವನ್ನು ಗುರುತಿಸಿ ಮೀನು ತಿನ್ನುವುದರ ಮೂಲಕ ಇರುವ ಪೌಷ್ಟಿಕ ಲಾಭಗಳ ಬಗ್ಗೆ ತಿಳುವಳಿಕೆ ವಿಸ್ತರಿಸುವ ಮೂಲಕ ಹಾಗೂ ಹೇಗೆ ಮೀನಿನ ಹಾಗೂ ಮೀನು ಉತ್ಪಾದನೆಯ ಗುಣ ಮಟ್ಟ ಅಳೆಯಬೇಕೆಂಬ ಜ್ಞಾನವನ್ನು ಹರಡುತ್ತಲೇ ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಮೀನಿನ ಹಾಗೂ ಮೀನಿನ ಉತ್ಪಾದನೆಯ ಬಳಕೆಯನ್ನು ಗ್ರಾಹಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಉತ್ತೇಜಿಸಬೇಕು.

## ೧೨. ಸಾಮರ್ಥ್ಯ ಅಭಿವೃದ್ಧಿ

೧೨.೧ ನಿರ್ಧಾರ ಮಾಡು ಪ್ರಕ್ರಿಯೆಯಲ್ಲಿ ಸಣ್ಣ–ಪ್ರಮಾಣದ ಮೀನಿಗಾರಿಕೆಯ ಸಮುದಾಯಗಳ ಭಾಗವಹಿಸುವಿಕೆಯನ್ನು ಧೃಡಪಡಿಸಲು ಪ್ರಭುತ್ವಗಳು ಹಾಗೂ ಇದರ ಭಾಗಗಳು ಇವರ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗುತ್ತದೆ. ಇದಕ್ಕಾಗಿ ಸಣ್ಣ– ಮೀನುಗಾರಿಕೆಯ ಉಪಕ್ಷೇತ್ರದ ವೈವಿಧ್ಯತೆ ಹಾಗೂ ವಿಸ್ತಾರತೆ–ಮೌಲಿಕ ಸರಣಿಯ ಎಲ್ಲವೂ ನ್ಯಾಯಯುತವಾದ, ಪ್ರಜಾಸತ್ಯಾತ್ಮಕವಾದ ಹಾಗೂ ಪ್ರಾತಿನಿಧಿಯಾತ್ಮಕ ರಚನೆಗಳ ಸೃಷ್ಟಿಯ ಮೂಲಕ ಸೂಕ್ತವಾಗಿ ಪ್ರತಿನಿಧಿಸುವಂತಾಗಬೇಕು. ಇಂತಹ ವ್ಯವಸ್ಥೆಗಳಲ್ಲಿ ಮಹಿಳೆಯರ ಸರ್ವ ಸಮಾನ ಭಾಗಿತ್ವಕ್ಕಾಗಿ ನಿರ್ಧಿಷ್ಟ ಗಮನವನ್ನು ನೀಡಬೇಕಾಗುತ್ತದೆ. ಎಲ್ಲಿ ಅಗತ್ಯವಿದೆಯೋ ಅಲ್ಲಿ ಪ್ರತ್ಯೇಕ ಜಾಗ ಹಾಗೂ ವ್ಯವಸ್ಥೆಗಳನ್ನು ಮಾಡುವ ಮೂಲಕ ಮಹಿಳೆಯರು ಅವರಿಗೆ ಪ್ರಸ್ತುತವೆನಿಸುವ ಬೇರೆ ಬೇರೆ ಸಮಸ್ಯೆಗಳ ಹೋರಾಟಕ್ಕೆ ಸ್ವಾಯತ್ತರಾಗಿ ಸಂಘಟಿತರಾಗುವುದಕ್ಕೆ ಉತ್ತೇಜಿಸಬೇಕು.

೧೨.೨ ಸಣ್ಣ–ಪ್ರಮಾಣದ ಮೀನುಗಾರಿಕೆಯ ಮಾರುಕಟ್ಟೆಯ ಅವಕಾಶಗಳಿಂದ ಲಾಭ ಪಡೆಯುವಂತಾಗಲು ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಅಭಿವೃದ್ಧಿ ಕಾರ್ಯಕ್ರಮಗಳಂತಹ ಉದಾಃಹರಣೆಯ ಮೂಲಕ ಸಾಮರ್ಥ್ಯ ಹೆಚ್ಚಿಸುವಿಕೆಯನ್ನು ಮಾಡಬೇಕಾಗುತ್ತದೆ.

೧೨.೩ ಸಾಮರ್ಥ್ಯ ಬೆಳೆಸುವಿಕೆಯು ಅಸ್ತಿತ್ವದಲ್ಲಿರುವ ಜ್ಞಾನ ಹಾಗೂ ಕೌಶಲ್ಯಗಳ ಮೇಲೆ ರೂಪಿತವಾಗಬೇಕು. ಇದು ಎರೆಡು ಬಗೆಯ ಜ್ಞಾನ ವರ್ಗಾವಣೆಯ ಪ್ರಕ್ರಿಯೆಯಾಗಿರಬೇಕು. ಇವು ಉದಾರ ಹಾಗೂ ಸೂಕ್ತವಾದ ಕಲಿಕೆಯ ದಾರಿಗಳಾಗಿದ್ದು , ವ್ಯಕ್ತಿಗಳ ಅಂದರೆ ಮಹಿಳೆಯರ ಹಾಗೂ ಪುರುಷರ, ಮೂಲೆ ಗುಂಪಾದವರ ಹಾಗೂ ಅಂಚಿಗೆ ಒತ್ತರಿಸಲ್ಪಟ್ಟ ಗುಂಪುಗಳ ಅಗತ್ಯವನ್ನು ಪೂರೈಸುವಂತಿರಬೇಕು. ಜೊತೆಗೆ, ವಿಪತ್ತು ಆಪತ್ತು ನಿರ್ವಹಣೆ ಹಾಗೂ ನಾಗರಿಕ ಸಮಾಜ ಸಂಸ್ಥೆ ಸಂಬಂಧದಲ್ಲಿ ಸಾಮರ್ಥ್ಯ ಬೆಳೆಸುವಿಕೆಯ , ಜೀವ ಮತ್ತೆ ಕಟ್ಟುವ, ಹಾಗೂ ಸಣ್ಣ –ಮೀನುಗಾರಿಕೆ ಹೊಂದಿಕೊಳ್ಳುವ ಗುಣವನ್ನು ಬೆಳೆಸುವುದನ್ನು ಒಳಗೊಂಡಿರಬೇಕಾಗತ್ತದೆ.

೧೨.೪ ಸೂಕ್ತವೆನಿಸುವ ಹಾಗೆ, ಸುಸ್ಥಿರಾತ್ಮಕ ಸಣ್ಣ-ಮೀನುಗಾರಿಕೆಯ ಅಭಿವೃದ್ಧಿಗಾಗಿ ಹಾಗೂ ಜಯಪ್ರದಾಯಕ ಸಹ ನಿರ್ವಹಣೆಯ ಸಿದ್ಧತೆಗಳಿಗಾಗಿ ಸರ್ಕಾರಿ ಅಧಿಕಾರಿಗಳು ಹಾಗೂ ಅವರ ಅಂಗ ಸಂಸ್ಥೆಗಳು ಜ್ಞಾನ ಹಾಗೂ ಕೌಶಲ್ಯಗಳನ್ನು ಹೆಚ್ಚಿಸಲು ಎಲ್ಲಾ ಹಂತದಲ್ಲೂ ಕೆಲಸ ಮಾಡಬೇಕು. ಆಡಳಿತ ವ್ಯವಸ್ಥೆಯಲ್ಲಿ, ಮತ್ತು ಅಭಿವೃದ್ಧಿ ಪ್ರಕ್ರಿಯೆ ಎರಡೆರಲ್ಲೂ ಹಾಗೂ ಸಂಶೋಧನೆಯನ್ನೂ ಒಳಗೊಂಡಂತೆ ಸಣ್ಣ-ಪ್ರಮಾಣದ ಮೀನುಗಾರರೊಡನೆ ನೇರವಾಗಿ ಭಾಗಿಯಾದ ವಿಕೇಂದ್ರಿಕೃತ ಹಾಗೂ ಸ್ಥಳೀಯ ಸರ್ಕಾರಿ ರಚನೆಗಳಿಗೆ ನಿರ್ಧಿಷ್ಟವಾದ ಗಮನವನ್ನು ಕೊಡಬೇಕಾಗುತ್ತದೆ.

## ೧೩. ಜಾರಿಗೊಳಸುವಿಕೆಗೆ ಬೆಂಬಲ ಮತ್ತು ಮೇಲ್ವಿಚಾರಣೆ

೧೩.೧ ರಾಷ್ಟ್ರೀಯ ಹಾಗೂ ಸನ್ನಿವೇಶಗಳ ಆದ್ಯತೆಗಳ ಮೇಲೆ ಎಲ್ಲಾ ಪಕ್ಷಗಳೂ ಈ ಮಾರ್ಗದರ್ಶಿಕೆಗಳನ್ನ ಜಾರಿಗೊಳಿಸಲು ಪ್ರೋತ್ಸಾಹಿಸಬೇಕು.

೧೩.೨ ಹಣಕಾಸಿನ ಸಂಪನ್ಮೂಲಗಳನ್ನು ಜವಾಬ್ಧಾರಿಯುತವಾಗಿ ಬಳಸಲು ಹಾಗೂ ಧನ ಸಹಾಯದ ಪರಿಣಮಕಾರಿ ಬಳಕೆಯನ್ನು ಎಲ್ಲಾ ಪ್ರಭುತ್ವಗಳೂ ಹಾಗೂ ಎಲ್ಲಾ ಪಕ್ಷಗಳೂ ಉತ್ತೇಜಿಸಬೇಕಾಗುತ್ತದೆ. ಅಭಿವೃದ್ಧಿ ಭಾಗಿಗಳು, ಸಂಯುಕ್ತ ರಾಷ್ಟ್ರಗಳ ತಜ್ಞ ಸಂಸ್ಥೆಗಳು, ಹಾಗೂ ಪ್ರಾದೇಶಿಕ ಸಂಸ್ಥೆಗಳು, ದಕ್ಷಿಣ ದಕ್ಷಿಣ ಸಹಕಾರದ ಮೂಲಕವೂ ಸಹ, ಈ ಮಾರ್ಗದರ್ಶಿಕೆಗಳನ್ನು ಜಾರಿಗೊಳಿಸುವಲ್ಲಿ ಪ್ರಭುತ್ವಗಳು ಸ್ವಯಂ ಪ್ರೇರಿತ ಪ್ರಯತ್ನಗಳನ್ನೂ ಬೆಂಬಲಿಸಿ ಪ್ರೋತ್ಸಾಹಿಸಬೇಕು. ಈ ರೀತಿಯ ಬೆಂಬಲ ತಾಂತ್ರಿಕ ಸಹಕಾರ, ಧನ ಸಹಾಯ, ಸಾಂಸ್ಥಿಕ ಸಾಮರ್ಥ್ಯ ಬೆಳವಣಿಗೆ, ಜ್ಞಾನ ಹಂಚಿಕೊಳ್ಳುವಿಕೆ, ಅನುಭವಗಳ ವಿನಿಮಯ ಹಾಗೂ ಸಣ್ಣ- ಪ್ರಮಾಣದ ಮೀನುಗಾರಿಕೆಯ ಯೋಜನೆಗಳ ಅಭಿವೃದ್ಧಿಗೆ ಸಹಕಾರ ಹಾಗೂ ತಾಂತ್ರಿಕತೆಯ ವರ್ಗಾವಣೆಯನ್ನೂ ಒಳಗೊಂಡಿರಬೇಕು.

೧೩.೩ ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಈಮಾರ್ಗದರ್ಶಿಕೆಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಲಾಭವಾಗಿರಲು ಸರಳ ಹಾಗೂ ಅನುವಾದಿತ ಪ್ರತಿಗಳನ್ನು ಮಾಡಿ ಇದರ ಮಾಹಿತಿ ಹರಡಲು ಜೊತೆಯಾಗಿ ಕೆಲಸ ಮಾಡಬೇಕು. ಪ್ರಭುತ್ವಗಳು ಹಾಗೂ ಇದರ ಭಾಗಿಗಳು ಒಂದಷ್ಟು ನಿರ್ಧಿಷ್ಟ ಲಿಂಗ ಸಂಬಂಧಿತ ವಿಚಾರಗಳ ಸಂಗ್ರಹಣೆ ಹೊಂದಿರಬೇಕು. ಇದರಿಂದ ಪರಿಣಾಮಕಾರಿ ಸಂಬಂಧ ಕುರಿತಂತೆ ಹಾಗೂ ಮೀನುಗಾರಿಕೆಯಲ್ಲಿರುವ ಮಹಿಳೆಯರ ಪಾತ್ರದ ಬಗ್ಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ಹರಡಲು ಸಹಾಯವಾಗುತ್ತದೆ. ಜೊತೆಗೆ, ಮಹಿಳೆಯರ ಸ್ಥಾನ ಮಾನ ಹಾಗೂ ಅವರ ಕೆಲಸದ ಸುಧಾರಣೆಗೆ ತೆಗೆದುಕೊಳ್ಳಬೇಕಾದ ಹೆಜ್ಜೆಗಳ ಕುರಿತು ಬೆಳಕು ಚಲ್ಲುತ್ತದೆ.

೧೩.೪ ಈ ಮಾರ್ಗದರ್ಶಿಕೆಗಳಲ್ಲಿನ ಶಿಫಾರಸ್ಸುಗಳನ್ನು, ಹಾಗೂ ಗುರಿಗಳ ಜಾರಿಗೊಳಿಸುವಿಕೆಯಲ್ಲಿನ ಬೆಳವಣಿಗೆಯನ್ನು ಅಳೆಯುವ ಸಂಸ್ಥೆಗಳಿಗೆ ಅನುವು ಮಾಡಿಕೊಡುವ ಮೇಲ್ವಿಚಾರಣಾ ವ್ಯವಸ್ಥೆಗಳ ಅಗತ್ಯವನ್ನು ಪ್ರಭುತ್ವಗಳು ಗುರುತಿಸಬೇಕಾಗುತ್ತದೆ. ರಾಷ್ಟ್ರೀಯ ಆಹಾರ ಭದ್ರತೆ ಹಾಗೂ ಬಡತನ ನಿವಾರಣೆಯ ಹಂತದಲ್ಲಿ ಸಾಕಷ್ಟು ಆಹಾರ ಹಕ್ಕಿನ ಪ್ರಗತಿಪರ ಅರಿವಿನ ಸಂತೋಷದ ಪರಿಣಾಮಗಳ ಅಳತೆಗೋಲುಗಳನ್ನೂ ಕೂಡಾ ಇದರಲ್ಲಿ ಒಳಗೊಂಡಿರಬೇಕು. ಯೋಜನೆ ರೂಪಿಸುವಲ್ಲಿ, ಹಾಗೂ ಜಾರಿಗೊಳಿಸುವಿಕೆಯಲ್ಲಿ ಮೇಲ್ವಿಚಾರಣೆಯ ಫಲಿತಗಳನ್ನು ಅನಿಸಿಕೆಗಳನ್ನು ದಾಖಲು ಮಾಡಲು ವ್ಯವಸ್ಥೆಗಳನ್ನು ಒಳಕೊಳ್ಳಬೇಕಾಗುತ್ತದೆ. ಲಿಂಗಾಧಾರಿತ ಸೂಕ್ಷ್ಮ ದೃಷ್ಟಿಕೋನಗಳು, ದಿಕ್ಕು ಸೂಚಿಗಳು, ಹಾಗೂ ಅಂಕಿ-ಅಂಶಗಳನ್ನು ಬಳಸುವ ಮೂಲಕ ಮೇಲ್ವಿಚಾರಣೆಯಲ್ಲಿ ಲಿಂಗವನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಣ್ಣ-ಪ್ರಮಾಣದ ಮೀನುಗಾರಿಕೆಯು ಪುರುಷ ಹಾಗೂ ಮಹಿಳೆಯರನ್ನೊಳಗೊಂಡಂತೆ ಆಹಾರ ಭದ್ರತೆಯ ಸುಸ್ಥಿರ ಸಂಪನ್ಮೂಲಗಳ ನಿರ್ವಹಣೆ ಹಾಗೂ ಬಡತನ ನಿರ್ಮೂಲನಕ್ಕೆ ನೀಡಿದ ನಿಜವಾದ ಕೊಡುಗೆಗಳ ಉತ್ತಮ ತಿಳುವಳಿಕೆಗೆ ಹಾಗೂ ದಾಖಲೆಗೆ ಅನುವು ಮಾಡುವ ಭಾಗಿತ್ವದ ಅಳತೆಗೋಲಿನ ವಿಧಾನಗಳನ್ನು ಎಲ್ಲಾ ಪ್ರಭುತ್ವಗಳೂ ಹಾಗೂ ಪಕ್ಷಗಳೂ ವಿಸ್ತರಿಸಬೇಕು.

೧೩.೫ ಸೂಕ್ತವೆನಿಸುವ ರೀತಿಯಲ್ಲಿ ಮಾರ್ಗದರ್ಶಿಕೆಗಳ ಜಾರಿಗೊಳಿಸುವಿಕೆಯನ್ನು ಒಟ್ಟಾಗಿ ಮೇಲ್ವಿಚಾರಿಸಲು ಸಿಎಸ್ಓಗಳ ಬಲವಾದ ಪ್ರಾತಿನಿಧ್ಯ ಹೊಂದಿರುವ ರಾಷ್ಟೀಯ ಮಟ್ಟದ ವೇದಿಕೆ ರಚಿಸಲು ಪ್ರಭುತ್ವಗಳು ಉತ್ತೇಜಿಸಬೇಕು. ಸಣ್ಣ ಪ್ರಮಾಣದ ಮೀನುಗಾರಿಕೆ ಸಮುದಾಯಗಳ ನ್ಯಾಯಯುತ ಪ್ರತಿನಿಧಿಗಳು ಮಾರ್ಗದರ್ಶಿಕೆಗಳ ಜಾರಿಗೊಳಿಸುವಿಕೆಯ ತಂತ್ರಗಳ ಅಭಿವೃದ್ಧಿ ಹಾಗೂ ಅನ್ವಯಗೊಳಿಸುವಲ್ಲಿ, ಹಾಗೂ ಮೇಲ್ವಿಚಾರಣೆಯಲ್ಲಿ ಭಾಗವಹಿಸುವಂತಾಗಬೇಕು.

೧೩.೬ ಪ್ರಾದೇಶಿಕ ಕಾರ್ಯಕ್ರಮಗಳ ಯೋಜನೆಯ ಬೆಂಬಲದಿಂದ ಈ ಮಾರ್ಗದರ್ಶಿಕೆಗಳನ್ನು ಜಾರಿಗೊಳಿಸುವಲ್ಲಿ ವಿಶ್ವದ ಸಹಕಾರಿ ಕಾರ್ಯಕ್ರಮದ ಅಭಿವೃದ್ಧಿಯನ್ನು ಆಹಾರ ಮತ್ತು ವ್ಯವಸಾಯ ಸಂಸ್ಥೆ ಉತ್ತೇಜಿಸಬೇಕು ಹಾಗೂ ಬೆಂಬಲಿಸಬೇಕು.

ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ –ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿರುವ ಈ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು ಎಫ್‌ಎಒರ ಆ.ವ್ಯ.ಸ.ಯ ಜವಾಬ್ದಾರಿಯುತ ಮೀನುಗಾರಿಕೆಯ ನಿಯಮ ನಡಾವಳಿಗಳಿಗೆ ಪೂರಕವಾಗಿ ರೂಪಿತಗೊಂಡವುಗಳಾಗಿರುತ್ತವೆ. ಇವುಗಳು ಸಣ್ಣ– ಪ್ರಮಾಣದ ಮೀನುಗಾರಿಕೆಗೆ ಪೂರಕ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ನಿಯಮಾವಳಿಯ ಕರಾರು ಮತ್ತು ಸಮಗ್ರವಾದ ಎಲ್ಲಾ ತತ್ವಗಳಿಗೆ ಬೆಂಬಲವಾಗಿ ರೂಪುಗೊಂಡಿವೆ. ಅದರ ಪ್ರಕಾರ, ಈ ಮಾರ್ಗದರ್ಶಿಕೆಗಳು ಈಗಾಗಲೇ ಮುಖ್ಯ ಪಾತ್ರ ವಹಿಸಿರುವ ಸಣ್ಣ–ಪ್ರಮಾಣದ ಮೀನುಗಾರಿಕೆಯನ್ನು ಕಾಣಿಸುವಂತೆ ಗುರುತಿಸುವುದು ಮತ್ತು ವಿದ್ವತ್ತನ್ನು ಹೆಚ್ಚಿಸುವುದಾಗಿರುತ್ತದೆ. ಹಾಗೂ ಹಸಿವು ಮತ್ತು ಬಡತನ ಹೋಗಲಾಡಿಸುವಲ್ಲಿ ಜಾಗತಿಕ ಮತ್ತು ರಾಷ್ಟ್ರದ ಪ್ರಯತ್ನಗಳಿಗೆ ಕೊಡುಗೆ ನೀಡುವುದಾಗಿದೆ. ಸಣ್ಣ–ಪ್ರಮಾಣದ ಮೀನುಗಾರರು, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಕೆಲಸಗಾರರು, ಮತ್ತು ಸಂಬಂಧಿತ ಕಾರ್ಯ ಚಟುವಟಿಕೆಗಳು, ಮೂಲೆಗುಂಪಾದ ಹಾಗೂ ಅಂಚಿಗೆ ತಳ್ಳಲ್ಪಟ್ಟವರನ್ನು ಒಳಗೊಂಡಂತೆ ಇವರ ಮೇಲೆ ವಿಶೇಷವಾದ ಒತ್ತನ್ನು ನೀಡಿ ಮಾನವ ಹಕ್ಕುಗಳಾಧಾರಿತ ದೃಷ್ಟಿಕೋನದ ಮಾರ್ಗವನ್ನು ಎತ್ತಿಹಿಡಿಯತ್ತಲೇ, ಈ ಮಾರ್ಗದರ್ಶಿಕೆಗಳು ಇಂದಿನ ಹಾಗೂ ಮುಂಬರುವ ಪೀಳಿಗೆಗಳ ಲಾಭಕ್ಕೋಸ್ಕರವಾಗಿ ಜವಾಬ್ದಾರಿಯುತ ಮೀನುಗಾರಿಕೆ ಮತ್ತು ಸುಸ್ಥಿರಾತ್ಮಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಬೆಂಬಲಿಸುತ್ತವೆ.

ISBN 978 93 80802 63 3